(SRI D. H. CHANDRASEKHARAIYA) hours time is usually allowed. The idea is to see that the proceedings of the House are got up as early as possible. Even giving 36 hours time will not be a proper course. The time limit of 24 hours is the accepted period in all Legislatures for the return of speeches and I think it will be well to enforce the same here.

Sri H. M. CHANNABASAPPA.—After all it is not a serious matter. It is only to suit the convenience of the members that I wanted 3 or 4 days' time.

ಅಧ್ಯಕ್ಷರು (ಮಾನ್ಯ ಶ್ರೀ ಎ. ವೆಂಕಟಪ್ಪನವರು).—ನಡವಳಿಕೆಯಿಂದ ವಾಪಸು ಬರುವುದು ನಿಧಾನವಾದರೆ ಪ್ರೂಫ್‌ಸೀಡಿಂಗ್ಸ್ ಬರುವುದು ನಿಧಾನವಾಗುತ್ತದೆ. ನಮಗೇನೂ ಕಷ್ಟವಿಲ್ಲ. ಆದರೆ ಪದಪ್ಪು ಜಾಗ್ರತೆ ಪ್ರೂಫ್‌ಸೀಡಿಂಗ್ಸ್ ಮುದ್ರಣವಾಗಬೇಕೆಂಬುದೇ ನಮ್ಮ ಉದ್ದೇಶ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಹಿಂದಿನ ಅಧಿವೇಶನದ ವರದಿಯ ಕೆಲವು ಪ್ರತಿಗಳು ಇನ್ನೂ ಮುದ್ರಣವಾಗಿಲ್ಲ. ಪ್ರತಿ ಅಧಿವೇಶನದ ಮೊದಮೊದಲ ಕಾರ್ಯಕಲಾಪಗಳು ಜಾಗ್ರತೆ ಆಚ್ಚಾಗುತ್ತವೆ. ಆಮೇಲೆ ನಿಧಾನ.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು!—24 ಗಂಟೆಯನ್ನು ನಿಗದಿ ಮಾಡಿರುವಾಗಲೇ ಇಷ್ಟು ನಿಧಾನವಾಗುವಾಗ ಮೂರು ದಿವಸಗಳೆಂದು ಮಾಡಿದರೆ ಇನ್ನೂ ನಿಧಾನವಾಗುತ್ತದೆ.

Sri M. GOVINDA REDDY (Chitaldrug District—General).—The idea is to get the proceedings printed as early as possible. But if some members find it difficult to return corrected their speeches within 24 hours, they may, just as the Hon'ble Minister for Law said, return the transcripts even after 24 hours. It is in the interests of the members themselves that the time limit of 24 hours is fixed.

Sri K. T. BHASHYAM.—There is no compulsion to return them within 24 hours. The Hon'ble Members may send them even after, if they cannot correct the transcripts within 24 hours.

Sri H. K. VEERANNA GOWDA.—In fact we see that some of the speeches of members who do not return the speeches within 24 hours, are printed as unapproved speeches in the proceedings with asterisk mark and such speeches are full of mistakes grammatical and otherwise.

Sri H. M. CHANNABASAPPA.—If the Hon'ble Minister for Law agrees, 72 hours' time may be given.

The Hon'ble Sri K. T. BHASHYAM.—No. You wanted 72 hours' time to be given? That is not possible.

Mysore Inam Villages (Abolition of Inam Tenure) Bill, 1951.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಅಧ್ಯಕ್ಷರೇ, ನನ್ನೆ ವಿವಸ ಇನಾಂ ಗ್ರಾಮಗಳನ್ನು ಮತ್ತು ಆ ಗ್ರಾಮಗಳಲ್ಲಿರತಕ್ಕಂಥ ಇನಾಂ ಟೆನ್ಯೂರುಗಳನ್ನು ವಜಾಮಾಡುವ ವಿಚಾರದಲ್ಲಿ ತಂದಿರುವ ಈ ಮಸ್ತೂದ್ರೆಯು ಬಹಳ ಸರ್ವಸಮ್ಮತವಾಗಿದೆ ಮತ್ತು ನಿಷ್ಪಕ್ಷಪಾತವಾಗಿದೆ ಎಂದು ನಾನು ಹೇಳಿದೆ. ಇನಾಂ ಗ್ರಾಮಗಳು ಒಂದೇ ಅಲ್ಲ, ಸರ್ಕಾರಿ ಗ್ರಾಮಗಳಲ್ಲಿರತಕ್ಕಂಥ ಕೆಲವು ಇನಾಂ ಟೆನ್ಯೂರುಗಳನ್ನು ಕೂಡ ರದ್ದುಮಾಡಬೇಕೆಂದು ಈಗ ಮಾನ್ಯ ಸದಸ್ಯರೊಬ್ಬರು ಹೇಳಿದರು. ಆ ವಾದವನ್ನು ನಾನು ಒಪ್ಪಿ ಹೇಳುತ್ತೇನೆ. ಏಕೆಂದರೆ ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಕ್ಯಟ್‌ರೆಂಟ್ ಅಥವಾ ಸರ್ವಮಾನ್ಯದ ತರಹ ಕೆಲವು ಇನಾಂಗಳನ್ನು ಸರ್ಕಾರಿ ಗ್ರಾಮಗಳಲ್ಲಿ ಕೊಟ್ಟಿರುತ್ತಾರೆ. ಅದೂ ಕೂಡ ಯಾವುದೋ ಒಂದು ಕಾಲದಲ್ಲಿ ಯಾರಿಗೋ ಬಿಟ್ಟಿರುವುದನ್ನು ಈಗ ಯಾರೋ ಅನುಭವಿಸುತ್ತಿರಬಹುದು. ಅವುಗಳನ್ನು ಅನ್ಯಕ್ರಾಂತವಾಗಿಯೋ ಅಥವಾ ನ್ಯಾಯವಾದ ಪ್ರೊಬಲ್ಲಿಗೋ ತೆಗೆದುಕೊಂಡಿರಬಹುದು. ಅದನ್ನೂ ಕೂಡ ಈಗ ರದ್ದುಪಡಿಸುವುದಕ್ಕೆ ಕಾಲ ಒದಗಿದೆ. ಈ ಸಂದರ್ಭದಲ್ಲಿ ಈ ಕಾನೂನಿನ ವ್ಯಾಪ್ತಿಯನ್ನು ಹೆಚ್ಚಿಸಬೇಕಾದರೆ ಸ್ವಲ್ಪ ಅದರ ಪ್ರೀಂಬಿಕೆಯನ್ನೂ ಕೂಡ ಅಂದರೆ preamble ಬದಲಾಯಿಸಬೇಕಾಗಿದೆ. ಆದ್ದರಿಂದ "The Mysore Inam Villages (Abolition of Inam Tenure in the Government Villages also) Bill ಎಂದು ಇದರ ವ್ಯಾಪ್ತಿಯನ್ನು ಜಾಸ್ತಿ ಮಾಡಬೇಕೆಂದು ಸಭೆಯ ಗಮನಕ್ಕೆ ತರುತ್ತೇನೆ.

ಎರಡನೆಯದು ಏನೆಂದರೆ, ಸರ್ಕಾರಿ ಗ್ರಾಮದಲ್ಲಿರುವ ಜೋಡಿ, ಕ್ಯಟ್‌ರೆಂಟ್ ಮತ್ತು ಸರ್ವ ಇನಾಂ ಈ ರೀತಿ ಅನುಭವಿಸುತ್ತಿರುವ ಟೆನ್ಯೂರುಗಳ ಪ್ರೊಸೆಪ್ಷ್ ಹೋಗುವುದರಿಂದ ಸರ್ಕಾರಕ್ಕೆ ದೊಡ್ಡ ಆದಾಯವಾಗುತ್ತದೆ. ಇದಕ್ಕೆ ಹೆಚ್ಚು ಪರಿಹಾರ ಕೊಡಬೇಕಾದ್ದೂ ಇಲ್ಲ. ಇದಕ್ಕೆ ಕಂದಾಯ ತರಾವಾಗುವುದರಿಂದ ಸಂಸ್ಥಾನದ ಆದಾಯ ಹೆಚ್ಚುತ್ತದೆ. ಇದು ಬಹಳ ಅತ್ಯಗತ್ಯ. ಈ ಕಾನೂನಿನಲ್ಲಿ ಮುಖ್ಯವಾಗಿ ಕಂಡುಬರುವ ವಿಷಯ ನೆಕ್ಷಿಪ್ತ ಮೂರರಲ್ಲಿದೆ. ಯಾವ ಜಮೀನುಗಳು ಮತ್ತು ಗ್ರಾಮಗಳು ಸರ್ಕಾರದ್ದು ಎಂದು ತಮ್ಮ ನೋಟಿಫಿಕೇಷನ್‌ನಲ್ಲಿ ಸರ್ಕಾರದವರು ತಿಳಿಸುತ್ತಾರೋ ಅಂಥವು ಆ ರೀತಿ ತಿಳಿಸಿದ ದಿವಸದಿಂದ ಸರ್ಕಾರಕ್ಕೆ ಸೇರುತ್ತವೆ. ಹೀಗೆ ಹೇಳಿ ಈ ಕಾನೂನನ್ನು ರಚಿಸಿದೆ. ಆ ಮೇಲೆ ಈ ದಿವಸ ನೋಟಿಫಿಕೇಷನ್ ಕೊಟ್ಟು ಅನಂತರ ಯಾವುದೋ ಒಂದು ದಿವಸ ಇನಾಂದಾರರಿಗೆ ಎಷ್ಟು ಕೊಡಬೇಕು, ಇನಾಂ ಗ್ರಾಮಗಳಲ್ಲಿರುವ ಟೆನೆಂಟುಗಳಿಗೆ, ವ್ಯವಸಾಯಗಾರರಿಗೆ, ಖದೀಂ ಟೆನೆಂಟುಗಳಿಗೆ ಅಥವಾ ಖಾಸಗಿ ಟೆನೆಂಟುಗಳಿಗೆ ಅಥವಾ ಇನಾಂದಾರರಿಗೆ

ಎಷ್ಟು ಕೊಡಬೇಕು ಎಂಬುದನ್ನು ನಿರ್ಧರಿಸಬಹುದು ಎಂದು ಹೇಳಿದೆ.

ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ನೋಟಿಫಿಕ್ಷೇಷನ್ ಹೊರಡುವುದಕ್ಕೆ ಎಷ್ಟು ಬೇಗ ಸಾಧ್ಯವಾದರೆ ಅದನ್ನು ಮಾಡೋಣವಾಗಲಿ. ಇಲ್ಲದಿದ್ದರೆ ನೋಟಿಫಿಕೇಷನ್ ಒಂದು ಸಲ ಮಾಡಿಬಿಟ್ಟು ಅವರ ಹಕ್ಕುಬಾಧ್ಯತೆಗಳನ್ನು ನಿರ್ಧರಿಸುವುದಕ್ಕೆ ದೀರ್ಘಕಾಲ ಮಾಡಿದರೆ ತೊಂದರೆಯಾಗುತ್ತದೆ. ಈಗ ಒಂದು ಅನುಕೂಲತೆ ಕೊಟ್ಟಿದ್ದಾರೆ. ಅದೇನೆಂದರೆ ಯಾವತ್ತು ನೋಟಿಫಿಕೇಷನ್ ಕೊಡುತ್ತಾರೋ ಅಂದಿನಿಂದ ಆ ನೋಟಿಫಿಕ್ಷೇಷನ್ ಪ್ರಕಾರ ಸರ್ಕಾರದವರಿಗೆ ಸರ್ವ ಸ್ವಾಮ್ಯಪೂರ್ಣವಾದ ಹಕ್ಕು ಸೇರುತ್ತದೆ. ಅಂದಿನಿಂದ ಇನಾಂದಾರರು ಕಂದಾಯ ವಸೂಲು ಮಾಡುವುದಕ್ಕಾಗಲೀ, ಗುತ್ತಿಗೆ ಅಥವಾ ವಾರ್ತೆ ಯಾವುದನ್ನೇ ಆಗಲೀ ವಸೂಲು ಮಾಡುವುದಕ್ಕೆ ಹಕ್ಕಿಲ್ಲ. ಸರ್ಕಾರದವರೇ ಮ್ಯಾನೇಜ್‌ಮೆಂಟ್ ವಹಿಸಿಕೊಂಡು ಎಷ್ಟು ಕೊಡಬೇಕೋ ಅಷ್ಟು ಕೊಡುವ ವ್ಯವಸ್ಥೆ ಎಂದು ಹೇಳಿದ್ದಾರೆ. ಇದು ಒಳ್ಳೆಯದು. ಈ ಸಂದರ್ಭದಲ್ಲಿ ನಾನು ಈ ಸಭೆಯ ಗಮನಕ್ಕೆ ತರುವುದೇನೆಂದರೆ ಇನಾಂದಾರರುಗಳಿಗೆ ಅವರ ಹಕ್ಕುಬಾಧ್ಯತೆಗಳನ್ನು ನಿರ್ಧರಿಸಿ, ಅವರಿಗೆ ಎಷ್ಟು ಪರಿಹಾರ ಕೊಡಬೇಕು ಎನ್ನುವುದನ್ನು ಬಹಳ ಉದಾರ ರೀತಿಯಲ್ಲಿ ಮಾನ್ಯ ಮಂತ್ರಿಗಳು ಸೂಚಿಸಿದ್ದಾರೆ. ಬಹಳ ಉದಾರ ರೀತಿಯಲ್ಲಿ ವಾರ್ಷಿಕ ಆದಾಯವನ್ನು (annual basic value) ನಿಗದಿಮಾಡಿದ್ದಾರೆ. ಇನ್ನಾವ ದೇಶದಲ್ಲೂ ಇಷ್ಟು ಉದಾರತೆಯನ್ನು ತೋರಿಸಿಲ್ಲವೆಂದು ಕಾಣುತ್ತದೆ. ಪ್ರತಿವರ್ಷದ ಸುವರ್ಣಾದಾಯವನ್ನು ತೆಗೆದುಕೊಂಡಿದ್ದಾರೆ. ಅದರ ಜೊತೆಗೆ ಇನ್ನಾಂದಾರರಿಗೆ ನೆಲ್ಲುವೆ ಜಂಗಲ್ಲು, ಫಾರೆಸ್ಟು ಬಾಬ್ತು ಮುತ್ತು ಅಲ್ಲೇನಾದರೂ ಗಣಿಗಳಿದ್ದರೆ ಅದ್ದು, ಅವುರ್ತಾಯಿ, ಅಲ್ಲದೆ ಇತರ ವಿಧದಲ್ಲಿ ಯಾವ ಯಾವ ಬಾಬಿನಲ್ಲಿ ಉತ್ಪತ್ತಿ ಬರುತ್ತಾ ಇತ್ತೋ ಅದು, ಈ ರೀತಿ ಎಲ್ಲವನ್ನೂ ತೆಗೆದುಕೊಂಡಿದ್ದಾರೆ. ಆದರೆ ಎಕ್ಸೆ ಪ್ಲೈಜು ಮಾತ್ರ ಬಿಟ್ಟುಬಿಟ್ಟಿದ್ದಾರೆ. ಯಳಂದೂರು ಮತ್ತು ಶೃಂಗೇರಿ ಜಹಗೀರುಗಳಲ್ಲಿ ಅದರಲ್ಲೂ ಯಳ್ಳಂದೂರು ಒಂದರಲ್ಲೇ ಒಂದುಲಕ್ಷ ಚಿಲ್ಲರೆ ರೂಪಾಯಿ ಎಕ್ಸೆ ಪ್ಲೈಜ್ ಬಾಬ್ತಿನಿಂದ ಜಹಗೀರುದಾರರಿಗೆ ಪಾವತಿಯಾಗಿದ್ದೆ. ಹ್ಞಾಗಿರುವಾಗ ಏಕೆ ಅವನ್ನು ಬಿಟ್ಟಿದ್ದಾರೋ ಗೊತ್ತಿಲ್ಲ. ಜಹಗೀರುದಾರರು ಅಲ್ಲರತಕ್ಕ ಗಂದಾಯ ಮುರಗಳನ್ನು ಕಡಿಯಕೊಡ್ಡದು ಎಂದು ಮಾಡಿದ್ದಾರೆ. ಮುತ್ತು ನರ್ವೇ ಮುಂತಾದ ಇತರ ಮುರಗಳಿದ್ದರೆ ಅವುಗಳ ಮೇಲೂ ಸಹ ಅವರಿಗೆ ಹಕ್ಕಿಲ್ಲವೆಂದು ಮಾಡಿದ್ದಾರೆ. ಫ್ಲೇಗ್ ಎಕ್ಸೆಸ್ಸೈಜ್ ಬಾಬನ್ನು ಸೇರಿಸದಿರುವುದು ಸರಿಯಲ್ಲ; ಅದನ್ನೂ ಸೇರಿಸಿಕೊಳ್ಳಬೇಕು. ಇದರ ಜೊತೆಗೆ ಶ್ರೀವಾಣಿ ಚನ್ನಬಸಪ್ಪನವರು ಹೇಳಿದಹಾಗೆ ಖಾಯಂ ಟೆನೆಂಟ್ ಆಗಿದ್ದರೆ ಬರುತಕ್ಕ ಉತ್ಪತ್ತಿಯಲ್ಲಿ 10ರಷ್ಟು ಎಂದರೆ ಆಯಾ ವರ್ಷದ ಉತ್ಪತ್ತಿಯಲ್ಲಿ ಇನಾಂದಾರರಿಗೆ ಕೊಡತಕ್ಕ ಉತ್ಪತ್ತಿಯಲ್ಲಿ 10ರಷ್ಟು ಕೊಡಬೇಕೆಂದು ಮಾಡಿದ್ದಾರೆ. ಅದರ ವಿಚಾರ ನಂತರ ಹೇಳುತ್ತೇನೆ. ಈ ರೀತಿ ಬಹಳ ಉದಾರವಾಗಿ ವರ್ಷಾದಾಯ ಏನು ಎಂಬುದನ್ನು ಲೆಕ್ಕಾಚಾರ ಹಾಕಿದ್ದಾರೆ. 2,150 ಗ್ರಾಮಗಳಲ್ಲಿ ಸಾಮಾನ್ಯವಾಗಿ ಒಂದುಸಾವಿರ ರೂಪಾಯಿ ಆದಾಯ ಬರುತ್ತದೆ ಎಂದು ಇಟ್ಟುಕೊಂಡರೂ ಕೂಡ ಪರಿಹಾರ ಕೊಡಬೇಕಾದ್ದು 2 ಕೋಟಿ ರೂಪಾಯಿಗಳ ಮೇಲೆ ಆಗುತ್ತದೆ. ಈ ಎರಡು ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಸಾಧ್ಯವೇ! ಅದೂ ಅಲ್ಲದೆ ಭಾರಿ ಜಹಗೀರುಗಳಾಗಿರತಕ್ಕ ಯಳಂದೂರು, ಶೃಂಗೇರಿ ಮತ್ತು ಇತರ ಸಣ್ಣಪುಟ್ಟ ಜಹಗೀರುಗಳನ್ನು ತೆಗೆದುಕೊಳ್ಳಬೇಕಾದರೆ ಕೋಟ್ಯಾಂತರ ರೂಪಾಯಿ ಕೊಡಬೇಕಾಗುತ್ತದೆ. ಎಕ್ಸೈಜ್ ಬಾಬು ಕೂಡ ತೆಗೆದುಕೊಳ್ಳುತ್ತಿಲ್ಲ, ಯಳಂದೂರು ಒಂದರಲ್ಲೇ ಕೋಟಿಗಟ್ಟಲೆ ರೂಪಾಯಿ ಆ ಜಹಗೀರುದಾರರಿಗೆ ಕೊಡಬೇಕಾಗುತ್ತದೆ. ಪರಿಹಾರ ಕೊಡಬೇಕು ಎಂದು ನಿರ್ಧರಿಸಿದ ಮೇಲೆ ಎಷ್ಟು ಕೊಡುವುದು; ಯಾವರೀತಿ ಕೊಡಬೇಕು ಎಂಬುದು ಸರ್ವ ಸಮರ್ಪಕವಾಗಿ ನಿರ್ಧರಿಸಿದಾಗಬೇಕಾಗಿದೆ. ಇಲ್ಲಿ ನಿರ್ಧರಿಸಿರತಕ್ಕದ್ದನ್ನು ನೋಡಿದರೆ ಅನುಮಾನಕ್ಕೆ ಕಾರಣ ವಾಗಿದೆ. ಆದಾಯ 1,000 ರೂಪಾಯಿನ ಒಳಗಿದ್ದರೆ 25ರಷ್ಟು ಪರಿಹಾರ ಕೊಡಬೇಕೆಂತಲೂ, ಸಾವಿರಕ್ಕೆ ಸ್ವಲ್ಪಟ್ಟು 3 ಸಾವಿರದ ಒಳಗಿದ್ದರೆ 20ರಷ್ಟು ಅಥವಾ 25,000 ದ್ದಲ್ಲಿ ಯಾವುದು ಹೆಚ್ಚಾಗುತ್ತದೆಯೋ ಅದು ಎಂತಲೂ; 3 ಸಾವಿರಕ್ಕೆ ಮೇಲ್ಪಟ್ಟಿದ್ದರೆ 15ರಷ್ಟು ಅಥವಾ 60 ಸಾವಿರ ರೂಪಾಯಿ – ಇದರಲ್ಲಿ ಯಾವುದು ಹೆಚ್ಚಾಗುತ್ತದೆಯೋ ಅದು ಎಂತಲೂ ನಿಗದಿ ಮಾಡಿದ್ದೀರಿ. ಇದು ಸ್ವಲ್ಪ ಅಪಾರ್ಥವಾಗುತ್ತದೆ. ಯಳಂದೂರು ಜಹಗೀರಿ ತೆಗೆದುಕೊಂಡರೆ ಅದಕ್ಕೆ 60 ಸಾವಿರ ರೂಪಾಯಿಗಳಿಗಿಂತಲೂ ಹೆಚ್ಚು ಕೇಳುವ ಅಧಿಕಾರವಿಲ್ಲ ಎಂದು ಹೇಳುವುದಾದರೆ, ಬಹಳ ಕಮ್ಮಿ ಮಾಡಿದ ಹಾಗಾಗುತ್ತದೆ. ಆ ಪರಿಹಾರ ಕೊಡುವುದಕ್ಕಿಂತ ಅದನ್ನು ಹಾಗೆಯೇ ತೆಗೆದುಕೊಳ್ಳುವುದು ಒಳ್ಳೆಯದು. ಅವರಿಗೆ ಆಗ ಸರ್ಕಾರದವರು ಹೇಗೆ ಕೊಟ್ಟಿದ್ದರೋ ಹಾಗೆಯೇ ತೆಗೆದುಕೊಂಡುಬಿಡಿ.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).— ನೀವು ಅದಕ್ಕೆ ಭಯಪಟ್ಟಿರೇನಾ?

ಶ್ರೀ ಎಸ್. ರಂಗರಾಮಯ್ಯನವರು.– ಇನ್ನೊಬ್ಬರ ಸ್ವತ್ತು ತೆಗೆದುಕೊಳ್ಳುವಾಗ ನ್ಯಾಯ ಎಂದರೂ ನಿಮ್ಮ ಸ್ವತ್ತೇ ಆಗಿದ್ದರೆ ಏನು ಅನ್ನುತ್ತಿದ್ದರೋ ಗೊತ್ತಿಲ್ಲ. ನಾನು ಸ್ವಲ್ಪ ಕರಿಣವಾಗಿ ಹೇಳಿದ್ದನ್ನು ಮಾನ್ಯ ಸದಸ್ಯರು ಅಪಾರ್ಥ ಮಾಡಿಕೊಂಡ ಹಾಗೆ ಕಾಣುತ್ತದೆ. ಯಳಂದೂರಿನ ವಿಚಾರದಲ್ಲಿ ದಿವಾನ್ ಪೂರ್ಣಯ್ಯನವರು ಮಾಡಿದ ಉಪಕಾರವನ್ನು ಇವತ್ತು ನಾವು ಸ್ಮರಿಸಬೇಕಾಗಿದೆ. ಇಲ್ಲದೆ ಇದ್ದಿದ್ದರೆ ನಮ್ಮ ಹಿಂದೂ ರಾಜ್ಯ 150 ವರ್ಷಗಳ ಕಾಲ ನಮ್ಮ ಮಹಾರಾಜರಿಗೆ ಬರುತ್ತಿರಲಿಲ್ಲ ಎಂಬುದನ್ನು ಮರೆಯಬಾರದು. ಆದರಿಂದ ಯಾವ ವಿಧದಲ್ಲೂ ಅದಕ್ಕೆ ರೋಪ್ಪ ಬರದಂತೆ ಮನಸ್ಸಿಗೆ ಕ್ಲೇಶವಾಗದಂತೆ ನಿರ್ಧರಿಸಬೇಕು. ಎಷ್ಟು ಇರಬೇಕು ಎನ್ನುವುದು ಮುಂದಿನ ಕೆಲಸ. ಈಗ ಸೆಕ್ಷನ್ (20) ರಲ್ಲಿ ನಿರ್ದಿಷ್ಟವಾಗಿ ಕೊಟ್ಟಿರುವುದರಿಂದ ಕೇವಲ ಕಮ್ಮಿ ಎಂದರೆ 25 ಸಾವಿರ ರೂಪಾಯಿ, ಕೇವಲ ಭಾರಿ ಎಂದರೆ 60 ಸಾವಿರ ರೂಪಾಯಿ, ಅದಕ್ಕೆ ಮೇಲೆ ಬರುವುದಿಲ್ಲ ಎಂದು ಜನಗಳು ತಿಳಿದುಕೊಳ್ಳುವುದಕ್ಕೆ ಅವಕಾಶವಿದೆ. ವರ್ಷಾದಾಯ ನಿಗದಿಮಾಡುವಾಗ .....

ಅಧ್ಯಕ್ಷರು— 60 ಸಾವಿರಕ್ಕೆ ಮೇಲೆ ಕೊಡುವುದಿಲ್ಲ ಎಂದು ಹೇಳಿದ ಹಾಗಿಲ್ಲ. ಇದ್ದು ಇರುವುದು 15 times such sum or 60,000 whichever is greater' ಎಂದಿದೆ.

ಶ್ರೀ ಎಸ್. ರಂಗರಾಮಯ್ಯನವರು.— ಏನು ಅರ್ಥ ಮಾಡಬಹುದೆಂದರೆ, ಅದು highest target ಎಂದು ಅರ್ಥಮಾಡಿಕೊಳ್ಳಲು ಅವಕಾಶವಿದೆ. ನಾನು ಹೇಳುವುದೇನೆಂದರೆ ಅದನ್ನು ಸ್ವಲ್ಪ ಸ್ಪಷ್ಟೀಕರಿಸಬೇಕು. ಹೀಗಿರುವಾಗ ಈ ಕಾನೂನು ಜಾರಿಗೆ ಬಂದರೂ ಕೂಡ ಏಕ ಕಾಲದಲ್ಲಿ ಎಲ್ಲವನ್ನೂ ರದ್ದು ಮಾಡುತ್ತೇವೆ ಎಂದು ಹೇಳಲ್ಲ. ಆಯಾಯಾ ಸ್ಥಳಕ್ಕೆ ಕಾಲಕ್ಕೆ ತಕ್ಕಂತೆ ಮಾಡುತ್ತೇವೆ ಎಂದು ಹೇಳುತ್ತಾರೆ. ಈ ಮುನೂದೆ ನೆರಕ್

(ಶ್ರೀ ಎಸ್. ರಂಗರಾಮಯ್ಯನವರು.)

ಸಮಿತಿಗೆ ಹೋಗುವುದರ ದೆಶೆಯಿಂದ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ ಸೆಕ್ಷನ್ 3ರ ಪ್ರಕಾರ ಇನಾಂ ಗ್ರಾಮಗಳನ್ನು ಒಂದೇ ಕಾಲದಲ್ಲಿ ರದ್ದುಪಡಿಸಲಾಗಿದೆ ಯೆಂದು ಘೋಷಣೆ ಹೊರಡಿಸಿ, ಆ ಗ್ರಾಮಗಳನ್ನು ಸಣ್ಣದಾಗಲೀ ದೊಡ್ಡದಾಗಲೀ ಸರ್ಕಾರದವರ ಮ್ಯಾನೇಜ್‌ಮೆಂಟಿಗೆ ತೆಗೆದುಕೊಂಡು ಇದೆಲ್ಲಾ ಇತ್ಯರ್ಥ ವಾಗುವವರೆಗೂ ಅವರಿಗೆ ಖರ್ಚು ಕಳೆದು ಇನಾಂದಾರ ರಿಗೆ ಆದಾಯ ಸಲ್ಲುವ ಹಾಗೆ ಮಾಡಿದರೆ ಬಹಳ ಸೌಕರ್ಯವುಂಟಾಗುತ್ತದೆ. ಮತ್ತು ಯಾರಿಗೂ ಇವತ್ತು ತೆಗೆದುಕೊಳ್ಳುತ್ತಾರೆ, ನಾಳೆ ತೆಗೆದುಕೊಳ್ಳು ತ್ತಾರೆ ಎಂಬ ಭೀತಿ ಇರುವುದಿಲ್ಲ. ಇಲ್ಲದಿದ್ದರೆ ಇನಾಂ ಗ್ರಾಮಗಳು ರದ್ದಾಗುತ್ತವೆ ಎಂದು ತಿಳಿದ ಕೂಡಲೇ ಅದರ ಆದಿತ ನಡೆಸುವ ಇನಾಂದಾರರಿಗೂ ಕೂಡ ಕಷ್ಟವಾಗುತ್ತದೆ. ಮತ್ತು ರೈತರೂ ಸಹ ಮನಸ್ಸಿಟ್ಟು ಶ್ರದ್ಧೆಯಿಂದ ಜಮೀನು ವ್ಯವಸಾಯ ಮಾಡುವುದು ತಪ್ಪುತ್ತದೆ. ಇದನ್ನು ತಡೆಗಟ್ಟಬೇಕಾದರೆ "vesting order ಇಟ್ಟುಕೊಳ್ಳಿ.

35ನೆಯ ಸೆಕ್ಷನ್ನನ್ನು ಸ್ವಲ್ಪ ಮಟ್ಟಿಗೆ ಈ ರೀತಿಯಾಗಿ ವಿಶದೀಕರಿಸಬೇಕು. ಏಕೆಂದರೆ ಈ ಸೆಕ್ಷನ್ನಿನಲ್ಲಿ ಹೇಳಿದೆ.

ಕ್ಲಾಸನ್ನು "After the date vesting, ... and all amounts so collected after deducting ten per cent thereof on account of collection charges shall be paid to the Inamdar:"

ಎಂದು. ಇದನ್ನು ಮಾಡಿಬಿಡುವ ಪಕ್ಕಕ್ಕೆ ಒಂದೇ ಕಾಲ ದಲ್ಲಿ ಈ ಇನಾಂ ಗ್ರಾಮಗಳೆಲ್ಲವೂ ರದ್ದಾಗುತ್ತವೆ. ಮತ್ತು ಅವರಿಗಿರುವ ಅಧಿಕಾರಗಳೆಲ್ಲವೂ ಹೊರಟು ಹೋಗುತ್ತವೆ.

ಇನ್ನೊಂದು, 21ನೆಯ ಕ್ಲಾಸಿನ ವಿಚಾರ. ಧರ್ಮ ಸಂಸ್ಥೆಗಳು, ಶೃಂಗೇರಿ ಮುಂತಾದ ಪಹಿಗೀರುಗಳಿಗೆ ಕೊಟ್ಟಿರತಕ್ಕ ಇನಾಂತಿಗಳ ವಿಷಯದಲ್ಲಿ ಎಲ್ಲರೂ ಬಹಳ ಉದಾರ ನೀತಿಯನ್ನನುಸರಿಸಿ ಅವುಗಳನ್ನು ಈಗಿನಂತೆಯೇ ನಡೆಸಿಕೊಂಡು ಹೋಗಬೇಕು, ಆ ಸಂಸ್ಥೆಗಳನ್ನೂ ಮಠಗಳನ್ನೂ ತೆಗೆದು ಹಾಕುವುದಕ್ಕೆ ಯಾರಿಗೂ ಇಷ್ಟ ವಿಲ್ಲವೆಂದು ಹೇಳಿದ್ದಾರೆ. ಅದಕ್ಕನುಸಾರವಾಗಿ ಇಲ್ಲಿ ಹೇಳಿರುವುದೂ ಬಹಳ ಶ್ಲಾಘನೀಯವಾಗಿದೆ. ಆದರೂ ಕೂಡ ಯಾವ ರೀತಿ ಈ ಸಂಸ್ಥೆಗಳು ಸಾರೋದ್ಧಾರವಾಗಿ ನಡೆದುಕೊಂಡಿದ್ದು ಇದುವರೆಗೂ ದೇಶಕ್ಕೂ ಜನಗಳಿಗೂ ಮತ್ತು ನಮ್ಮ ಸಂಸ್ಕೃತಿಗೂ ಏನೊಂದು ಅನುಕೂಲವಾಗುತ್ತಿತ್ತೋ ಅದು ಸಾರೋದ್ಧಾರವಾಗಿ ಮುಂದೆಯೂ ನಡೆಯುವಂತಾಗುತ್ತದೆಂದು ಹೇಳಿ ಇದನ್ನು ಮಾಡಿದ್ದಾರೆಂದು ಹೇಳುತ್ತೇನೆ.

ಇನ್ನೊಂದು ವಿಚಾರ ಮಾತ್ರ ನಾನಿಲ್ಲಿ ಹೇಳದೆ ವಿಧಿ ಯಿಲ್ಲ. ಇಲ್ಲಿ, 24ನೆಯ ಕ್ಲಾಸಿನಲ್ಲಿ ಒಂದು ಮಾತು ಹೇಳಿ ದ್ದಾರೆ. ಅದರ ವಿಷಯದಲ್ಲಿ ಸ್ವಲ್ಪ ಮಟ್ಟಿಗೆ ಇನ್ನೂ ಹೆಚ್ಚಿಗೆ ಕಾಲಾವಕಾಶ ಕೊಡಬೇಕಾಗಿದೆಯೆಂದು ನಾನು ಸೂಚಿಸುತ್ತೇನೆ. ಇಲ್ಲಿ, 'Notice to persons interested in compensation' ಎಂದರೆ ಭೋಗ್ಯ ಮುಂತಾದುವುಗಳನ್ನು ಮಾಡಿಕೊಂಡಿರುವವರಾಗಲೀ, ಅಥವ ಹಿಸ್ಸೆ ಬಾಧ್ಯತೆ ಹೊಂದಿರುವವರಾಗಲೀ, ಇಲ್ಲವೇ ಜೀವನಾಂಶ ಹೊಂದಿರುವವರಾಗಲೀ ಇದ್ದರೆ ಅವರು ಬಂದು ಹೇಳಿಕೊಂಡು ತಮ್ಮ claim ಹಾಕಿಕೊಳ್ಳುವುದಕ್ಕೆ ಒಂದು ಅವಧಿ ಕೊಟ್ಟಿದೆ. ಈ ಕ್ಲಾಸಿನ (2)ನೆಯ ಉಪ ವಿಧಿಯಲ್ಲಿ,

"Every claim against the compensation which is not made to the Deputy Commissioner within the time aforesaid shall cease to be enforceable."

ಎಂದು ಹೇಳಿ ಕ್ಲುಪ್ತ ಕಾಲದಲ್ಲಿ ತನ್ನ ಹಕ್ಕನ್ನು ಹೇಳದೆ ಇದ್ದರೆ ಪರಿಹಾರವೇ ದೊರಕುವುದಿಲ್ಲವೆಂದು ಹೇಳಿದೆ. ಈ ಕ್ಲುಪ್ತ ಕಾಲವೂ ಕೂಡ ಒಂದು ತಿಂಗಳು ಎಂದು ವಿಧಾಯಕಮಾಡಿದೆ. ಈ ಕಾಲ ಸಾಲದು ಇನ್ನೂ ಹೆಚ್ಚಿಗೆ ಕಾರಾವಕಾಶ ಕೊಡಬೇಕೆಂದು ನನ್ನ ಸೂಚನೆ.

ಆ ಮೇಲೆ ಅಪೀಲಿನ ವಿಚಾರದಲ್ಲಿ ಬಹಳ ಸಮರ್ಪಕ ವಾದ ಏರ್ಪಾಡು ನಡೆದಿದೆಯೆಂದು ನಾನು ಭಾವಿಸು ತ್ತೇನೆ. ಏಕೆಂದರೆ, ಮೊದಲು ಡೆಪ್ಯುಟಿ ಕಮಿಷನರ್ ಇದ್ದಾರೆ. ಅದರ ಮೇಲೆ Special Tribunal ಇರು ತ್ತದೆ. ಈ ಟ್ರಿಬ್ಯುನಲ್‌ನಲ್ಲಿಯೂ ಕೂಡ ಬಹಳ ಅನುಭವ ಸ್ಥರಾದ ಹೈಕೋರ್ಟಿನ ಜಡ್ಜಿಗಳೇ ಇರುತ್ತಾರೆ. ಇದರ ಮೇಲೆ ಹೈಕೋರ್ಟಿಗೂ ಸಹ ಅಪೀಲು ಹಾಕಿಕೊಳ್ಳುವು ದಕ್ಕೆ ಅಧಿಕಾರ ಕೊಟ್ಟಿರುವುದರಿಂದ ಯಾರಿಗೂ ಯಾವ ತೊಂದರೆಯೂ ಆಗುವುದಿಲ್ಲ. ಈ ಟ್ರಿಬ್ಯುನಲ್‌ನಲ್ಲಿ ಹೈಕೋರ್ಟಿನ ಜಡ್ಜಿಗಳೇ ಇರುವುದರಿಂದ ಎಂಥವರಿಗೂ ನಂಬಿಕೆ ಹುಟ್ಟುತ್ತದೆ. ಈ ಪ್ರಕಾರ ಏನಾದರೂ ವಿವಾದ ಹುಟ್ಟಿದರೆ ಅದನ್ನು ನಿರ್ಧಾರ ಮಾಡುವುದರಲ್ಲಿ ಸರ್ವಸಮರ್ಪಕವಾದ ಏರ್ಪಾಡಿದೆ, ಯಾರಿಗೂ ಅನ್ಯಾಯವಾಗುತ್ತದೆಂಬ ಶಂಕೆ ಪಡಬೇಕಾದ್ದಿಲ್ಲ ವೆಂದು ನಾನು ಹೇಳಬಲ್ಲೆ. ಇಷ್ಟು ಹೇಳಿ ಈ ಮಸೂದೆ ಯನ್ನು ನಾನು ಸ್ವಾಗತಿಸುತ್ತೇನೆ.

ಶ್ರೀ ಎಂ. ಎಸ್. ಜೋಯಿಸರು (ಮೈಸೂರು ಜಿಲ್ಲೆ).— ಮಾನ್ಯ ಅಧ್ಯಕ್ಷರೇ, ಇನಾಂ ಗ್ರಾಮಗಳನ್ನು ವಜಾ ಮಾಡತಕ್ಕಂಥ ಈ ಮಸೂದೆಯ ವಿಷಯದಲ್ಲಿ ಎರಡು ಭಾವನೆಗಳು ನಿನ್ನೆ ದಿವಸದಿಂದ ನಡೆದ ಡಿಬೇಟ್‌ಗಳಿಂದ ಕಾಣಬರುತ್ತವೆ. ಕೆಲವು ಸದಸ್ಯರು ಇನಾಂ ಗ್ರಾಮ ಗಳು ದೇಶಕ್ಕೆ ಒಂದು ಶನಿಕಾಟದ ಹಾಗಿತ್ತು, ಆದೀಗ ಹೊರಟು ಹೋಗಿ ಈಗ ಶುಕ್ರ ಮಹರ್ದೆಶೆ ದೇಶಕ್ಕೆ ಬರು ತ್ತದೆಂದು ಒಂದು ಅಭಿಪ್ರಾಯ, ಇನ್ನು ಕೆಲವರು, ಇದು ವರೆಗೂ ರೈತರಿಗೂ ಜೋಡಿದಾರರಿಗೂ ಇದ್ದ ತಿಕ್ಕಾಟ ಹೋಗಿ ಹೆಚ್ಚಿಗೆ ಆಹಾರ ಬೆಳೆಯುವುದಕ್ಕೆ ಅವಕಾಶ ವಾಗುತ್ತದೆ, ರೈತನು ಜಮೀನಿನ ಒಡೆಯನಾಗುತ್ತಾನೆ, ಅದರಿಂದ ದೇಶ ಉದ್ಧಾರವಾಗುತ್ತದೆಂದು ವಾದಿಸಿ ದ್ದಾರೆ. ರೈತರಿಗೂ ಜಮೀನ್ದಾರರಿಗೂ ತಿಕ್ಕಾಟ ವಿದ್ದುದು ಈಗ ಆ ತಿಕ್ಕಾಟ ಹೋಗಿ ದೇಶದಲ್ಲಿ ಆಹಾರ ಬೆಳೆದು ಸುಖಶಾಂತಿ ನೆಲಸುವುದೆಂಬುದನ್ನು ನಾನು ಒಪ್ಪ ರಾರೆ. ಜಗಳವಾಗುವುದಿದ್ದರೆ, ಅದು ಯಾರು ಹಾಲೆ ಜಮೀನಿನ ಒಡೆಯರಾಗಿರುತ್ತಾರೋ ಅವರೊಡನೆಯೇ ರೈತ ಜಗಳ ಮಾಡುತ್ತಾನೆ. ಇದುವರೆಗೂ ಜೋಡಿ ದಾರರೊಡನೆ ಜಗಳ ಮಾಡುತ್ತಿದ್ದರೆ ಇನ್ನು ಮೇಲೆ ಸರ್ಕಾರದವರೊಡನೆ ತಿಕ್ಕಾಟ ಮಾಡುವುದಕ್ಕೆ ತೊಡಗು ತ್ತಾನೆ ಅಷ್ಟೆ. ಇದುವರೆಗೂ ಶನಿಕಾಟವಿತ್ತು ಇನ್ನು ಶುಕ್ರಮಹರ್ದೆಶೆ ಬರುತ್ತದೆಂದೂ ಹೇಳುವುದಕ್ಕಾಗುವು ದಿಲ್ಲ. ಏಕೆಂದರೆ ಈಗಲೂ ಎಷ್ಟೋ ಜೋಡಿ ಗ್ರಾಮ ಗಳಲ್ಲ ಕೆರೆ ಕಟ್ಟೆ ಮುಂತಾದುವುಗಳು ಕಟ್ಟಲ್ಪಟ್ಟು ಬೇಕಾದಷ್ಟು ಅನುಕೂಲತೆಗಳಿವೆ. ಆದೇ ಸರ್ಕಾರದ ವಶದಲ್ಲಿರುವ ಎಲ್ಲಾ ಗ್ರಾಮಗಳಲ್ಲಿಯೂ ಕೆರೆ ಕೆಟ್ಟೆ ಗಳೆಲ್ಲವೂ ಸರಿಯಾಗಿ ಏರ್ಪಾಡಾಗಿ ಸಮೃದ್ಧಿಯಾಗಿ ಹೋಗುತ್ತಿದೆಯೆಂದು ಯಾರು ಹೇಳುವ ಸ್ಥಿತಿಯಲ್ಲಿಯೂ ಇಲ್ಲ. ಅಸಮಾಧಾನದ ಕೂಗುಗಳು ಸರ್ಕಾರಿ ಗ್ರಾಮ ಗಳಲ್ಲೂ ಕೂಡ ಇದ್ದೇ ಇವೆ. ಇವುಗಳೆಲ್ಲರತಕ್ಕ ದುರ್ದೆಶೆ

ಯನ್ನೂ ಕೂಡ ಈ ಸಭೆಯಲ್ಲೇ ಅನೇಕ ಸಾರಿ ಮಾನ್ಯ ಸದಸ್ಯರೇ ವರ್ಣಿಸಿದ್ದಾರೆ.

ಆದ್ದರಿಂದ ಇನಾಂ ಗ್ರಾಮಗಳು ಹೋಗಬೇಕೆಂದು ಹೇಳುವಾಗ ಈ ವಾದಕ್ಕಿಂತ, ಇನಾಂ ಗ್ರಾಮಗಳು ಏಕೆ ಬಂದವು, ಹೇಗೆ ಉದ್ಭವವಾದವು, ಇವತ್ತಿನ ದಿವಸ ಅವುಗಳ ಉಪಯೋಗ ಇದೆಯೇ ಇಲ್ಲವೇ ಎನ್ನುವುದನ್ನು ಯೋಚನೆ ಮಾಡುವುದು ಮುಖ್ಯ. ಅಷ್ಟೆ ಹೊರತು, ರೈತರಿಗೂ ಜೋಡಿದಾರರಿಗೂ ತಿಕ್ಕಾಟ ಹೋಗಿ ಹೆಚ್ಚಿಗೆ ಆಹಾರ ಬೆಳೆಯಲು ಅನುಕೂಲವಾಗುತ್ತದೆಂದು ಹೇಳುವ ವಾದದಲ್ಲೇನೂ ತಿರುಳಿಲ್ಲ. ಹಾಗೆಯೇ, ಇನಾಂ ಗ್ರಾಮಗಳು ಹುಟ್ಟಿದ್ದು ಹೇಗೆ, ಆ ಗ್ರಾಮಗಳನ್ನು ಯಾರು ಯಾರಿಗೆ ಏತಕ್ಕಾಗಿ ಕೊಟ್ಟಿದ್ದರು, ಆ ಇನಾಂದಾರಿಗಳಲ್ಲಿ ಯಾರ್ಯಾರು ಇದ್ದರು ಎಂಬುದನ್ನೆಲ್ಲಾ ತೆಗೆದು ನೋಡಿದರೆ, ಇವುಗಳು ದೇಶಕ್ಕೆ ಶನಿಕಾಟದ ಹಾಗೆ ಅಂಟಿದ್ದುವೆಂದು ಹೇಳುವುದೂ ಅನ್ಯಾಯವಾದ ಮಾತೆಂದೇ ಹೇಳಬೇಕು. ಈ ಇನಾಂ ಗ್ರಾಮಗಳು ಹುಟ್ಟುವಾಗ ಈಗಿನಂತೆ ಬೇಕಾದಷ್ಟು ಪಾಠಶಾಲೆಗಳೂ, ಧರ್ಮಶಾಲೆಗಳೂ ವೈದ್ಯಶಾಲೆಗಳೂ ಕೆರೆ ಕಟ್ಟೆಗಳ ಏರ್ಪಾಡುಗಳೂ ಇದ್ದುವೇ ಎಂಬುದನ್ನು ಯೋಚನೆ ಮಾಡಬೇಕು. ಇವಾವುವೂ ವಿಶೇಷವಾಗಿ ಅಂಥಾ ಕಾಲದಲ್ಲಿರಲಿಲ್ಲ. ಈ ಏರ್ಪಾಡುಗಳನ್ನು ನಡೆಸಿಕೊಟ್ಟಿದ್ದಕ್ಕಾಗಿ ಆ ಇನಾಂ ಗ್ರಾಮಗಳನ್ನು ಕೊಟ್ಟರೂ. ಕೂಡ, ಆ ಗ್ರಾಮಗಳಲ್ಲಿ ಎಲ್ಲಾ ಏರ್ಪಾಡುಗಳಿದ್ದುವೆಂದು ಹೇಳುವ ಹಾಗಿಲ್ಲ. ಆ ಗ್ರಾಮಗಳಿಗೆ ಬೇರೆ ಕಡೆಗಳಿಂದ ಜನರನ್ನು ಕರತಂದು ಅಲ್ಲೇನೆಲಸುವಂತೆ ಮಾಡಿ, ಈಗ ನೀವು ಹಳ್ಳಿಯಾಗಿರತಕ್ಕ ಪ್ರದೇಶದಲ್ಲಿ ಏನೇನು ಗ್ರೋ ಮೋರ್ ಪುಡ್ ಕಾರ್ಯಕ್ರಮವನ್ನು ನಡೆಸುತ್ತಿದ್ದೀರೋ ಪ್ರಾಯಶಃ ಅದಕ್ಕಿಂತ ಹೆಚ್ಚಾಗಿ ಇನಾಂದಾರನು ಕೆಲಸಕಾರ್ಯಗಳನ್ನು ಮಾಡಿಸಿ ಜಮಾನುಗಳನ್ನು ಆ ಬಾದಿಗೆ ತಂದಿರುತ್ತಾನೆ. ಆ ಗ್ರಾಮಗಳಿಂದ ಸಂಪತ್ತು ಬರುವಂತೆ ಮಾಡಿರುತ್ತಾನೆ.

ಒಬ್ಬ ಸದಸ್ಯರು.—ಈ ವಿಷಯ ನಿಮಗೆ ಎಲ್ಲಿಂದ ತಿಳಿದು ಬಂತು ?

ಶ್ರೀ ಎಂ. ಎಸ್. ಜೋಯಿಸ್‌ರವರು.—ಎಲ್ಲೆಲ್ಲಿ ಇನಾಂಗ್ರಾಮಗಳಿವೆಯೋ ಅಲ್ಲಿಗೆ ಹೋಗಿ ಅವುಗಳ ಒಡೆತನದ ಸನ್ನದನ್ನು ನೋಡಿದರೆ ಗೊತ್ತಾಗುತ್ತದೆ! ನೀವೇ ಬೇಕಾದರೆ ಆ ಸನ್ನದುಗಳನ್ನು ನೋಡಿ. ಎಷ್ಟೋ ಕಡೆಗಳಲ್ಲಿ ಕೆರೆ, ಕಟ್ಟೆ ಇತ್ಯಾದಿ ಕೆಲಸಗಳಿಗಾಗಿ ಇನಾಂಗ್ರಾಮಗಳನ್ನೂ ನರ್ಚಮಾನ್ಯ ಗ್ರಾಮಗಳನ್ನೂ ಕೊಟ್ಟಿರುವುದಕ್ಕೆ ಉದಾಹರಣೆಗಳಿವೆ. ಅವನ್ನು ನೋಡದೆ ನನ್ನನ್ನು ಕೇಳಿದರೆ ಏನು ಹೇಳಲಿ.

ಒಟ್ಟಿನಲ್ಲಿ ಈ ಗ್ರಾಮಗಳನ್ನು ಕೊಟ್ಟಿದ್ದು ಒಂದು ಒಳ್ಳೆಯ ದೃಷ್ಟಿಯಿಂದ ಎಂಬುದನ್ನು ಎಲ್ಲರೂ ಮನಗಾಣಬೇಕು. ಆ ದೃಷ್ಟಿಯಿಂದ ಕೊಟ್ಟು, ಹಾಗೆ ಕೊಟ್ಟಿದ್ದಕ್ಕನುಸಾರವಾಗಿ ಕೆಲಸಕಾರ್ಯಗಳು ನಡೆದು ಕೊಂಡು ಬಂದಿವೆ. ಹಾಗೆ ಕೊಟ್ಟಂಥ ಕಾಲದಲ್ಲಿ ದೇಶದಲ್ಲಿ ಏನಿದ್ದರೂ ಒಂದು "Police State" ನ ಪರಿಸ್ಥಿತಿ ಇತ್ತು, ಅಷ್ಟೆ. ಕೇವಲ ರಾಜ್ಯದಲ್ಲಿ ಗಲಭೆ ಗಲಾಟೆ ಆಗದಿರುವಂತೆ ರಾಜ ಮಹಾರಾಜರು, ಅಂದರೆ ಆಗಿನ ಸರ್ಕಾರದವರು ಏರ್ಪಾಡು ಮಾಡುತ್ತಿದ್ದರು. ಮಿಕ್ಕದ್ದನ್ನೆಲ್ಲಾ ಜನರೇ ನೋಡಿಕೊಳ್ಳುತ್ತಿದ್ದರು. ಈಗಿರುವ ಹಾಗೆ ರಸ್ತೆ, ಆಸ್ಪತ್ರೆ ಮುಂತಾದುವು ಯಾವುವೂ ಸರ್ಕಾರದಿಂದ ವಿಶೇಷವಾಗಿ ಏರ್ಪಾಡಾಗಿರಲಿಲ್ಲ. ಮತ್ತು ಅಲ್ಲಲ್ಲೇ ಜನಗಳಲ್ಲಿ ಒಂದು ವಿಧವಾದ ತಿನ್ನನ್ನು ಏರ್ಪಾಡು ಮಾಡುವುದಕ್ಕೆ ಒಂದು ವ್ಯವಸ್ಥೆ ಬೇಕಾಗಿತ್ತು. ಆ ದೃಷ್ಟಿಯಿಂದ ಇಂಥ ಸನ್ನದನ್ನು ಕೊಟ್ಟಿರುತ್ತಾರೆಂಬುದನ್ನು ನಾವು ಯೋಚನೆಮಾಡ ಬೇಕು. ಅಲ್ಲದೆ, ಇನಾಂಗ್ರಾಮಗಳಲ್ಲೂ ಎಲ್ಲವೂ ಒಂದೇ ತೆರನಾಗಿದೆಯೇ ! ಕೆಲವು ಗ್ರಾಮಗಳಲ್ಲಿ ಕೆಲವು ತರಹ ಅಧಿಕಾರಗಳನ್ನು ಕೊಟ್ಟಿರುತ್ತಾರೆ. ಇನ್ನು ಕೆಲವಕ್ಕೆ ಹೆಚ್ಚಿಗೆ ಅಧಿಕಾರಗಳಿರುವುದಿಲ್ಲ. ಇದೆಲ್ಲಾ ಆಯಾ ಕಾಲಕ್ಕೆ ಆಯಾ ಸಂದರ್ಭಕ್ಕೆ ಆಯಾ ಸನ್ನಿವೇಶಕ್ಕೆ ಏನೇನು ಬೇಕಾಗಿತ್ತೋ ಅದಕ್ಕನುಗುಣವಾಗಿ ಕೊಟ್ಟಿರುತ್ತಾರೆ.

ಈಗ ಆ "ಪೋಲೀಸ್ ರಾಜ್ಯ" (Police State) ಹೋಗಿ ಯಾವಾಗ Parent State, Welfare State ಎಂಬುದು ಬಂದಿತೋ, ಆಗ್ಗೆ ಇವುಗಳ ಉಪಯೋಗ ಎಷ್ಟರ ಮಟ್ಟಿಗೆ ಇದೆ, ಎಷ್ಟರ ಮಟ್ಟಿಗೆ ಇಲ್ಲ ಎಂಬುದನ್ನು ನೋಡಬೇಕಾಗಿದೆ. ಈಗ ಅವುಗಳ ಉಪಯೋಗ ಕಡಿಮೆಯಾಗಿದೆ, ಅವು ಬೇಕಾಗಿಲ್ಲವೆಂದು ಹೇಳಬಹುದಾಗಿದೆ. ಅದು ಬಿಟ್ಟು ಇನಾಂ ಗ್ರಾಮಗಳಿಗೆ ಕೊಟ್ಟಿದ್ದು ಕೆಟ್ಟದ್ದು ಎಂದು ಹೇಳುವ ವಾದವನ್ನು ನಾನು ಒಪ್ಪಲಾರೆ. It has outlived its utility and purpose ಎಂದು ಬೇಕಾದರೆ ಹೇಳಬಹುದು. ಆ ದೃಷ್ಟಿಯಿಂದ ಇನಾಂಗ್ರಾಮಗಳು ಇರಬೇಕಾಗಿಲ್ಲವೆಂದು ನಾನು ಅಭಿಪ್ರಾಯಪಡುತ್ತೇನೆ.

ಇನ್ನು ಅವರಿಗೆಲ್ಲ ಪರಿಹಾರ ಕೊಡತಕ್ಕ ವಿಚಾರ. ಈ ಪರಿಹಾರ ಎಷ್ಟು ಕೊಡಬೇಕು, ಏನು ಕೊಡಬೇಕು ಎಂಬುದು ಈಗಾಗಲೇ ಸೂಚಿತವಾಗಿದೆ. ಇದನ್ನು ಕೊಡುವ ರೀತಿ ನೀತಿಯ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಹೈದರಾಬಾದಿನಲ್ಲಿ ಇನಾಮ್‌ದಾರಿ ಮತ್ತು ಜಹಗೀರ್‌ದಾರಿಗಳನ್ನು ಈಗಾಗಲೇ ಮಜಾ ಮಾಡಿದ್ದಾರೆ. ಅಲ್ಲಿ ಅವರಿಗೆ ಎಷ್ಟು ಪರಿಹಾರ ಕೊಡ ಬೇಕೆಂದು ತೀರ್ಮಾನಮಾಡಿದ್ದಾರೆ. ಅದರೆ ಇನಾಮ್‌ದಾರರಿಗೆ ಈ ಹೊತ್ತಿನವರೆಗೂ ಏನು ಕೊಡಬೇಕಾಗಿದೆಯೋ ಅದನ್ನು ಕೊಟ್ಟಿಲ್ಲ. ಇನಾಮ್‌ ಜಮಾನುಗಳು ಮಾತ್ರ ಸರ್ಕಾರಕ್ಕೆ ಸೇರಿವೆ. ಇದರಿಂದ ಎಷ್ಟೋ ಜನ ಜೋಡಿದಾರರು ಕಷ್ಟದೆಶೆಯಲ್ಲಿರುವುದನ್ನು ನಾನು ನೋಡಿದ್ದೇನೆ. ಕಾಲೇಜು ನ್ಯೂಲುಗಳಲ್ಲಿ ಓದುತ್ತಿದ್ದ ತಮ್ಮ ಹುಡುಗರಿಗೆ ಫೀಜು ಕೊಡುವುದಕ್ಕೂ ಕೂಡ ಚೈತನ್ಯವಿಲ್ಲದೆ ಅವರ ವಿದ್ಯಾಭ್ಯಾಸವನ್ನು ತಪ್ಪಿಸುವ ಪರಿಸ್ಥಿತಿ ಬಂದಿರುವ ನಿದರ್ಶನಗಳಿವೆ. ಆ ರೀತಿ ನಮ್ಮ ದೇಶದಲ್ಲಿ ಆಗಬಾರದು. ಎಷ್ಟು ಪರಿಹಾರ ಕೊಡಬೇಕೆಂದು ತೀರ್ಮಾನಮಾಡುತ್ತಾರೋ ಅಷ್ಟನ್ನು ಜಾಗ್ರತೆ ಅವರಿಗೆ ಕೊಡಬೇಕು. ಅಲ್ಲದೆ, ಕೊಡುವಾಗ ಇವರನ್ನು ಎರಡು ಮೂರು ಭಾಗವಾಗಿ ವಿಂಗಡಿಸಿ ಕೊಡುವುದು ಒಳ್ಳೆಯದು. ಹೆಚ್ಚು ಜಮಾನಿದ್ದವರು ಎಂದರೆ ದೊಡ್ಡ ಜೋಡಿದಾರರಾಗಿದ್ದವರಿಗೆ ಸ್ವಲ್ಪ ಹೆಚ್ಚು ಹಣ ಕೊಡಬೇಕಾಗುತ್ತದೆ. ಅವರಿಗೆ ಕಾಲ ವಿಳಂಬಮಾಡಿ ನಾಲ್ಕೈದು ವರ್ಷಗಳಲ್ಲಿ ಕಂಕುಗಳ ಮೇರೆಗೂ ಕೊಟ್ಟರೂ ಚಿಂತೆಯಿಲ್ಲ. ಕೇವಲ ಸಣ್ಣ ಸರ್ವಮಾನ್ಯ ಗ್ರಾಮವಿದ್ದರೆ ಅದಕ್ಕೆ 16 ಜನ ಪಾಲುದಾರರಾಗಿರುತ್ತಾರೆ, ಒಬ್ಬೊಬ್ಬರಿಗೆ ಒಂದೊಂದಾಣೆ ಭಾಗವಿರುತ್ತದೆ. ಅಂಥವರಿಗೆ ಎರಡು ಮೂರು ಸಾವಿರ ರೂಪಾಯಿ ಕೊಡಬೇಕಾದ ಸಂದರ್ಭಗಳಲ್ಲಿ ಅದನ್ನು ವರ್ಷಕ್ಕೆ ಐನೂರು ರೂಪಾಯಿ ಅಥವಾ ಸಾವಿರ ರೂಪಾಯಿನಂತೆ ಕಂತುಗಳಲ್ಲಿ ಕೊಡುತ್ತೇವೆಂದರೆ ಅವರಿಗೆ ಬಹಳ ಕಷ್ಟವಾಗುತ್ತದೆ. ಸಣ್ಣಸಣ್ಣ ಇನಾಮ್‌ದಾರರಿಗೆ ಒಂದೇ ಮೊತ್ತದಲ್ಲಿ ಕೊಟ್ಟು, ದೊಡ್ಡ ದೊಡ್ಡವರಿಗೆ ಕಂತುಗಳಲ್ಲಿ ಕೊಡುವುದು ನ್ಯಾಯವೆಂದು ಕಾಣುತ್ತದೆ.

(ಶ್ರೀ ಎಂ. ಎಚ್. ಜೋಯ್ಸರವರು.)

ಈ ಇನಾಂಗ್ರಾಮಗಳ ಸಂಬಂಧವಾಗಿ ಇನ್ನೊಂದು ವಿಷಯ ಬಹಳವಾಗಿ ಚರ್ಚೆಯಾಗುತ್ತಿದೆ. ಅದೇನೆಂದರೆ ಎಲ್ಲೆಲ್ಲ ಸರ್ಕಾರಕ್ಕೆ ಅನುಕೂಲವೆಂದು ತೋರುತ್ತದೆಯೋ ಅಲ್ಲಿ ಈ ಕಾನೂನನ್ನು ಜಾರಿಗೆ ತರಬಹುದೆಂಬುದು. ಎಲ್ಲೆ ಸರ್ಕಾರಕ್ಕೆ ಸೌಕರ್ಯವಾಗುತ್ತದೆಯೋ ಅಲ್ಲಿಗೆ ಮಾತ್ರ ಕಾನೂನನ್ನು ಜಾರಿಗೆತರಲು ಸರ್ಕಾರಕ್ಕೆ ಅಧಿಕಾರವಿದೆ. ಇನಾಂ ಗ್ರಾಮಗಳೆಲ್ಲಾ ಹೋಗುತ್ತವೆ, ಇನಾಂದಾರಿ ಪದ್ಧತಿಯೇ ಹೊರಟು ಹೋಗುತ್ತದೆ ಎಂದು ದೇಶದಲ್ಲೆಲ್ಲಾ ಪ್ರಚಾರವಾಗುತ್ತಿರುವ ಕಾರಣ ಇನಾಂ ಗ್ರಾಮಗಳಲ್ಲಿ ಇದ್ದ ವ್ಯವಸ್ಥೆಯೆಲ್ಲ ಅವ್ಯವಸ್ಥೆಯಾಗಿದೆ. ಹೀಗಿರುವಾಗ ಕೆಲವು ಪ್ರದೇಶಗಳಲ್ಲಿ ಇದನ್ನು ಜಾರಿಗೆ ತರುತ್ತೇವೆ, ಆ ಮೇಲೆ ಇನ್ನೂ ಕೆಲವು ಪ್ರದೇಶಗಳಲ್ಲಿ ಜಾರಿಗೆ ತರುತ್ತೇವೆ, ಮೊದಲು ಕೋಲಾರ ಜಿಲ್ಲೆ, ಆ ಮೇಲೆ ಮೈಸೂರು ಜಿಲ್ಲೆ ಹೀಗೆ ಜಾರಿಗೆ ತರುತ್ತೇವೆಂದು ಹೇಳಿದರೆ, ಬಹಳ ಕಷ್ಟನಷ್ಟಗಳೂ ಅನ್ಯಾಯಗಳೂ ಆಗುತ್ತವೆ. ಈಗ ಉದಾಹರಣೆಗೆ ಪಾನನಿರೋಧವನ್ನು ಜಿಲ್ಲೆ ಜಿಲ್ಲೆಯಾಗಿ ಜಾರಿಗೆ ತರಬೇಕೆಂದು ಮಾಡಿದರು, ಮಧ್ಯದಲ್ಲಿ ಏನೋ ತೊಂದರೆ ಪರಿಸ್ಥಿತಿ ಬಂದು ಎಷ್ಟು ಮಾಡಬೇಕೋ ಅಷ್ಟು ಮಾಡಲಿಲ್ಲ. ಇದರಿಂದ ಪಾನನಿರೋಧ ಜಾರಿಯಲ್ಲಲ್ಲದೇಯಿರುವ ಜಿಲ್ಲೆಗಳಲ್ಲಿ ಎಷ್ಟೋ ಕಷ್ಟವುಂಟಾಗಿದೆ. ಇದೇ ರೀತಿ ಇನಾಂದಾರರಿಗೂ ಜೋಡಿದಾರರಿಗೂ ಕಷ್ಟಗಳು ಬರುತ್ತವೆ. ಆದುದರಿಂದ ಈ ರೀತಿ ಮಾಡದೆ ಯಾವುದಾದರೂ ಒಂದು ಶುಭದಿವಸವನ್ನು ನೋಡಿ ಆ ದಿನ ಇಡೀ ಮೈಸೂರು ದೇಶದಲ್ಲಿರುವ ಇನಾಂ ಮತ್ತು ಜೋಡಿ ಪದ್ಧತಿ ಹೋಗಬೇಕೆಂದು ಹೇಳುವುದು ನೂಕ್ತವೆಂದು ಕಾಣುತ್ತದೆ. ಹೀಗೆ ಎಲ್ಲವನ್ನೂ ಒಟ್ಟಿಗೆ ಮಾಡಬೇಕು, ಏರ್ಪಾ ಜೋಡಿ ಇನಾಂಗ್ರಾಮಗಳನ್ನೂ ಸರ್ಕಾರದವರು ಒಟ್ಟಿಗೆ ಒಂದೇಸಾರಿ ತೆಗೆದುಕೊಳ್ಳಬೇಕು. ಇದರಲ್ಲ ನ್ಯಾಯವಿದೆಯೇ ಹೊರತು, ಹಾಗೆ ಮಾಡದೆ ಹೋದರೆ ನೀವು ತೆಗೆದುಕೊಂಡು ಉಳಿದ ಇನಾಂ ಗ್ರಾಮಗಳಲ್ಲರ ತಕ್ಕ ಇನಾಂದಾರರ ಮತ್ತು ರೈತರ ಪರಿಸ್ಥಿತಿ ಬಹಳ ಕೆಳವಳಕ್ಕಾಸ್ಪದವಾಗತಕ್ಕ ಸಂದರ್ಭ ಬರುತ್ತದೆಂದು ಹೇಳಬಲ್ಲೆ.

ಕೊನೆಯದಾಗಿ, ಇದು ಒಂದು ಒಳ್ಳೆಯ ಮಸೂದೆ. ಇಂಗ್ಲಿಷಿನಲ್ಲಿ ಒಂದು ವಾಕ್ಯವನ್ನು ಹೇಳುತ್ತಾರೆ—

"Old order changeth yielding place to new, God fulfils himself in many ways, lest one good custom should corrupt the world" ಎಂದು ಒಂದು ಪದ್ಧತಿ ಅಥವ ವ್ಯವಸ್ಥೆ ಎಷ್ಟೇ ಒಳ್ಳೆಯದಾಗಿದ್ದರೂ ಕೂಡ ಅತಿ ಹೆಚ್ಚು ಕಾಲ ಜಾರಿಯಲ್ಲಿದ್ದು ಬಿಡುವುದು ಒಳ್ಳೆಯದಲ್ಲ ಅದನ್ನು ಬದಲಾವಣೆ ಮಾಡಬೇಕು. ಈಗ ಈ ಬದಲಾವಣೆಯನ್ನು ಮಾಡತಕ್ಕ ಸೌಭಾಗ್ಯ, ಒಳ್ಳೆಯ ಅದೃಷ್ಟ ನಮ್ಮ ಪಾಲಿಗೆ ಬಂದಿದೆ. ಹೀಗೆ ಮಾಡತಕ್ಕ ಕಾಲದಲ್ಲಿ ಸರಿಯಾಗಿ ಮಾಡೋಣ, ಹೊಸ ಪರಿಸ್ಥಿತಿಯನ್ನು ಸ್ಥಾಪನೆ ಮಾಡೋಣ. ಆದರೆ ಹಾಗೆ ಮಾಡುವಾಗ ಯಾವ ಕಳವಳಕ್ಕೂ ಎಡೆಗೊಡದೆಯಿರುವ ಹಾಗೆ ಮಾಡೋಣ. ಇದಕ್ಕಾಗಿ ನಾನು ಹೇಳಿರುವ ಈ ಎರಡು ಮೂರು ವಿಷಯಗಳನ್ನು ಸೆಲೆಕ್ಟ್ ಕಮಿಟಿಯವರು ಕೂಲಂಕಷವಾಗಿ ಯೋಚನೆಮಾಡಿ ಸೂಕ್ತ ಸಲಹೆ ಮಾಡುತ್ತಾರೆಂದು ನಂಬಿ, ಈ ಸೂಚನೆಗೆ ನಾನು ಒಪ್ಪುತ್ತೇನೆ.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಸ್ವಾಮಿ, ಇನಾಂ ಗ್ರಾಮಗಳಿಗೆ ಸಂಬಂಧಪಟ್ಟ ಈ ಮಸೂದೆ ಸೆಲೆಕ್ಟ್ ಸಮಿತಿಗೆ ಹೋಗಬೇಕೆಂಬ ಸೂಚನೆ ಬಂದು ನಾನು ಸೆಲೆಕ್ಟ್ ಕಮಿಟಿಯ ಸದಸ್ಯನಾಗಿ ಇರುವಾಗ ಇದರ ವಿಚಾರದಲ್ಲಿ ಮಾತನಾಡಬೇಕೆಂದಿರಲಿಲ್ಲ. ಆದರೆ ನೆನ್ನೆಯ ದಿನ ಮತ್ತು ಈದಿನ ಮಧ್ಯಾಹ್ನ ಮಾತನಾಡಿದ ಕೆಲವು ಮಾನ್ಯ ಸದಸ್ಯರು ತಾಳಿದ ಧೋರಣೆಯಿಂದ ಈ ನಭೆಯಲ್ಲಿ ಇದರ ವಿಚಾರದಲ್ಲಿ ತಪ್ಪು ಅಭಿಪ್ರಾಯಗಳು ಮೂಡಬಹುದೆಂಬ ಶಂಕೆ ಬಂದದ್ದರಿಂದ, ಇದನ್ನು ನಿವಾರಣೆ ಮಾಡುವ ಉದ್ದೇಶದಿಂದ ಮಾತನಾಡಬೇಕೆಂದು ನಿಂತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು ಹೇಳಿದ ಹಾಗೆ ನಾವಿರಾರು ವರ್ಷಗಳಿಂದ, ಇನ್ನು ಕೆಲವರು ಹೇಳಿದ ಹಾಗೆ ಬಹು ಕಾಲದಿಂದ ಇನಾಂದಾರರಿಗೆ ಇರುವ ಒಂದು ಹಕ್ಕನ್ನು ಈ ಮಸೂದೆಯಿಂದ ಕಿತ್ತುಕೊಂಡು ಹಕ್ಕೇ ಇಲ್ಲದೇ ಯಿರುವ ರೈತರಿಗೆ ದಾನವಾಗಿ ಕೊಡುತ್ತೇವೆಂತಲೂ, ಇನಾಂದಾರರಿಗೆ ಅನ್ಯಾಯ ಮಾಡಿ ರೈತರಿಗೆ ಮಹೋಪಕಾರ ಮಾಡುತ್ತೇವೆಂತಲೂ ನೆನ್ನೆ ಮಾತನಾಡಿದ ಮಾನ್ಯ ಸದಸ್ಯರನೇಕರ ಭಾಷಣದಿಂದ ಹೊರಬೀಳುತ್ತದೆ. ಹಿಂದೆ ಒಂದು ನಿರ್ಜನವಾದ ಪ್ರದೇಶವನ್ನು, ಸರ್ಕಾರದವರೇ ಆಗಲಿ ಮಹಾರಾಜರವರೇ ಆಗಲಿ, ಯಾರಿಗಾದರೂ ಮುಫತ್ತಾಗಿ ಕೊಟ್ಟಿದ್ದು ಅವರು ಬೆವರು ಸುರಿಸಿ, ಕಷ್ಟಪಟ್ಟು, ಅದನ್ನು ರೂಢಿನಲು ಶ್ರಮಪಟ್ಟು ಊರ್ಜಿತಮಾಡಿಕೊಂಡು ಒಂದು ಆಸ್ತಿ ಮಾಡಿಕೊಂಡಿದ್ದುದನ್ನು ಈ ಹೊತ್ತು ಸರ್ಕಾರದವರು ಮಸೂದೆ ಮಾಡಿ ಅವರಿಂದ ಕಿತ್ತುಕೊಂಡರೆ ಅದು ಅನ್ಯಾಯವೇ ಸರಿ. ಆದರೆ ಹಿಂದೆ ಈ ಇನಾಂಗಳಾಗಿ ಅಥವ ಜೋಡಿಗಳಾಗಿ ನಿರ್ಜನ ಪ್ರದೇಶಗಳಲ್ಲಿ ಸರ್ಕಾರಕ್ಕೆ ಸೇರಿದ ಜಮೀನುಗಳಲ್ಲಿ ಕೊಟ್ಟದ್ದು. (Question!) ಯಾವ ಗ್ರಾಮಗಳನ್ನು ಇನಾಮುಗಳಾಗಿ ಕೊಟ್ಟರೋ ಆ ಗ್ರಾಮಗಳಲ್ಲಿ ರೈತರು ವಾಸವಾಗಿದ್ದರು. ಆ ರೈತರು ತಲತಲಾಂತರದಿಂದ ಆ ಜಮೀನುಗಳನ್ನು ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು, ಅಂಥವರನ್ನು, ಈ ಜಮೀನು ಇನಾಮಾಗಿ ಕೊಡುವಾಗ ಸರ್ಕಾರದವರೇ ಆಗಲೀ ಆ ಇನಾಂ ಕೊಟ್ಟವರೇ ಆಗಲೀ 'ನಿಮ್ಮ ಅಭಿಪ್ರಾಯವೇನು' ಎಂದು ಕೇಳಲಿಲ್ಲ. ಅಥವ ಆ ರೈತರಿಗೆ 'ನಿಮಗೆ ಬಹಳ ಕ್ರಾಂತಿಯಿಂದ ಬಂದಿರತಕ್ಕ ಒಂದು ಹಕ್ಕನ್ನು ಭೋಗ್ಯದವರಿಗೆ ಕೊಡುವುದಕ್ಕಾಗಿ ತೆಗೆದುಕೊಳ್ಳುತ್ತಿದ್ದೇವೆ ಇದಕ್ಕಾಗಿ ನಿಮಗೆ ಪರಿಹಾರ ಕೊಡುತ್ತೇವೆ' ಎಂದು ಹೇಳಿ ಅವರಿಗೆ ಯಾವ ಪರಿಹಾರವನ್ನೂ ಕೊಡಲಿಲ್ಲ. ಅಗಿನ ಸಮಾಜ ಮತ್ತು ಆಡಳಿತ ವರ್ಗದ ಧೋರಣೆಯಿದ್ದಂತೆ ಅದು ನಡೆದುಹೋಯಿತು. ರೈತರು ದನಗಳ ಗುಂಪು, ನಮ್ಮ ದನಗಳನ್ನು ಹೇಗೆ ಇನ್ನೊಬ್ಬರಿಗೆ ಕೊಡುತ್ತೇವೆಯೋ ಹಾಗೆ ರೈತರಿಗೆ ಸೇರಿದ ಜಮೀನನ್ನು ಇನಾಂದಾರರಿಗೆ ದಾನ ಮಾಡಿದರು. ಯಾರದನ್ನೋ ಯಾರಿಗೋ ದಾನ ಮಾಡಿದರು ಎಂದು ಹೇಳುವ ಹಾಗೆ ಮಾಡಿದರು. ಈಗ ನನ್ನ ಮೈಮೇಲ್ಲರುವ ಅಂಗಿ ನನ್ನದು, ನನ್ನ ಮನೆ ನನ್ನದು ಎಂಬುದು ಎಷ್ಟು ಸತ್ಯವಾಗಿದೆಯೋ ಆ ಜಮೀನು ರೈತರದಾಗಿತ್ತು ಎಂಬುದೂ ಅಷ್ಟೇ ಸತ್ಯ. ಹೀಗಿರುವಾಗ ಅವರನ್ನು ಹೇಳದೆ ಕೇಳದೆ ಇನಾಮಾಗಿ ಕೊಟ್ಟು, ಆ ರೈತರಿಗೆ ಅನ್ಯಾಯ ಮಾಡಿದರು. ಇನಾಂ ಕೊಟ್ಟದ್ದು ಅನ್ಯಾಯವೆಂದು ನಾನು ಹೇಳುವುದಿಲ್ಲ. ಅವರು ಸರ್ಕಾರಕ್ಕೆ ಆಗ ಮಹೋಪಕಾರ ಮಾಡಿರಬಹುದು, ದೊಡ್ಡ ಸೇವೆ ಮಾಡಿರಬಹುದು. ಆದರೆ ಯಾರದನ್ನೋ ತೆಗೆದುಕೊಂಡು ಹೋಗಿ ಯಾರಿಗೋ ದಾನ ಮಾಡಿದ್ದುದು ಸರಿಯಲ್ಲವೆಂದು ನಾನು ಹೇಳುವುದು. ಸರ್ಕಾರದ ಹಣ

ವನ್ನೋ ಅಥವಾ ಯಾರಿಗೂ ಹಕ್ಕಿಲ್ಲದ ಪ್ರದೇಶವನ್ನೋ ದಾನವಾಗಿ ಕೊಡಬಹುದಾಗಿತ್ತು. ಆದರೆ ಹಾಗೆ ಮಾಡಲಿಲ್ಲ. ಆದುದರಿಂದ ಈ ಮಸೂದೆಯನ್ನು ತಂದು ಇದ್ದನ್ನು ಕಾನೂನಾಗಿ ಮಾಡಿ ಇನಾಂದಾರರಿಗೆ ಸೇರಿರುವ ಜಮೀನನ್ನು ಯಾವ ಯಾವ ರೈತರು ಬಹುಕಾಲ ದಿಂದ ಆ ಜಮೀನುಗಳನ್ನು ವ್ಯವಸಾಯ ಮಾಡಿಕೊಂಡು ಬರುತ್ತಿದ್ದರೋ ಅವರಿಗೆ ವಾಪಸು ಕೊಡುತ್ತಿದ್ದಾರೆ. ಇದರಲ್ಲಿ ಯಾವ ಅನ್ಯಾಯವೂ ಇಲ್ಲ. ಇದರಿಂದ ಯಾರ ಹಕ್ಕನ್ನೂ ಕಸಿದುಕೊಳ್ಳುತ್ತಿಲ್ಲ. ಹಿಂದೆ ಈ ಇನಾಂದಾರರಿಗೆ ಕೊಟ್ಟಿರುವ ಹಕ್ಕಾದರೂ ಏನೆಂಬುದನ್ನು ನಾವು ಯೋಚನೆ ಮಾಡೋಣ. ಅವರಿಗೆ ಕೊಟ್ಟಿರತಕ್ಕ ನನ್ನೆದುಗಳನ್ನು ನೋಡಿದರೆ, ಅವುಗಳ ಪ್ರಕಾರ ಅವರಿಗೆ ಕೊಟ್ಟಿರತಕ್ಕ ಹಕ್ಕೇನೆಂದರೆ, ಆ ಭೂಮಿಯನ್ನು ಯಾರಿಗಾದರೂ ಅವರು ಮಾರಬಹುದೆಂಬ ಅಧಿಕಾರ ಕೊಟ್ಟಿಲ್ಲ. ಆ ಜಮೀನಿನಲ್ಲಿ ಬರುವ ವರಮಾನವನ್ನು, ಸುವರ್ಣಾದಾಯವನ್ನು ಆ ಇನಾಂದಾರರು ಉಪ ಯೋಗಿಸಿಕೊಳ್ಳಬಹುದೆಂದು ಒಂದೇ ಹಕ್ಕನ್ನು ಕೊಟ್ಟಿರುವುದು. ಹೀಗಿದ್ದರೂ ಕೂಡ ಇನಾಂದಾರರು ತಮಗೆ ಇಲ್ಲದಿರುವ ಹಕ್ಕನ್ನು ಇದೆಯೆಂದು ಭಾವಿಸಿ ಬೇರೆಯವರಿಗೆ ಮಾರಿಕೊಂಡಿದ್ದಾರೆ. ಈ ರೀತಿ ಮಾರಿಕೊಳ್ಳಲು ಹಕ್ಕಿರಲಿಲ್ಲ. ಸರ್ಕಾರದವರೂ ಸಹ ಇದನ್ನೇನೂ ಆಕ್ಷೇಪಿಸಿಲಿಲ್ಲ. ಮಾರಿಕೊಂಡು ಕಣ್ಣುಮುಚ್ಚಿ ಕುಳಿತು ಕೊಂಡರು. ಸುವರ್ಣಾದಾಯಕ್ಕೆ ಕೊಟ್ಟಿರುವ ಜಮೀನನ್ನು ತಮಗೆ ಮಾರುವುದಕ್ಕೂ ಹಕ್ಕಿದೆ ಎಂದು ಯಾರೋ ಮಾರಿದರು, ಅದನ್ನು ನೋಡಿಕೊಂಡು ಸರ್ಕಾರದವರೂ ಸುಮ್ಮನಿದ್ದರು. ಅಜನ್ಮಸಿದ್ಧವಾದ ಹಕ್ಕನ್ನು ಯಾರೇ ಆದರೂ ಕಸಿದುಕೊಳ್ಳುವುದು ಅನ್ಯಾಯವೆಂದು ಶ್ರೀಮಾನ್ ಚನ್ನಬಸಪ್ಪನವರು ವಾದಿಸಿದರು. ಇಂಥವರು, ಈ ಗ್ರಾಮಗಳನ್ನು ಇನಾಂದಾರರಿಗೆ ವಹಿಸಿದ ಕಾಲದಲ್ಲಿದ್ದಿದ್ದರೆ ಖಂಡಿತವಾಗಿಯೂ ರೈತರಿಗೆ ಈ ಅನ್ಯಾಯವಾಗುವುದಕ್ಕೆ ಅವಕಾಶ ಕೊಡುತ್ತಿರಲಿಲ್ಲ. ಇಂತಹ ಒಬ್ಬ ಮುಖಂಡರಿದ್ದಿದ್ದರೂ ಆ ಅನ್ಯಾಯ ಮಾಡಲು ಅವಕಾಶ ಕೊಡುತ್ತಿರಲಿಲ್ಲ. ಇನಾಂದಾರರಿಗೆ ಸಿದ್ಧವಾರತಕ್ಕ ಹಕ್ಕು ಆದಾಯವನ್ನು ಮಾತ್ರ ಉಪಯೋಗಿಸಿಕೊಳ್ಳುವುದು, ಅಷ್ಟೆ. ಈ ವಿಧಿಸ ಅವರು ಈ ಹಕ್ಕನ್ನು ದುರುಪಯೋಗ ಮಾಡಿಕೊಂಡರೆ, ಹೆಚ್ಚಿನ ಪ್ರತಿಫಲಕ್ಕೆ ಅಪೇಕ್ಷಿಟ್ಟು ಆ ಜಮೀನು ಗಳನ್ನು ಪಾರ್ಟಿದ್ದರೆ ಅದು ನ್ಯಾಯವಲ್ಲ. ಯಾವ ದೃಷ್ಟಿ ಯಿಂದ ನೋಡಿದರೂ ಕೂಡ ಇದರಿಂದ ಇನಾಂದಾರರಿಗೆ ಅನ್ಯಾಯವಾಗುವುದೇ ಇಲ್ಲ.....

ಶ್ರೀ ಟಿ. ಎಂ. ಚನ್ನಬಸಪ್ಪನವರು.—ಇನಾಂದಾರರಿಗೆ ಪ್ರತಿಫಲ ಅಥವ ಪರಿಹಾರ ಕೊಡಬಾರದೆಂದು ಮಾನ್ಯ ಸದಸ್ಯರ ಅಭಿಪ್ರಾಯವೆ?

ಶ್ರೀ ಎಂ. ಗೋಪಿಂದರೆಡ್ಡಿಯವರು.—ಹಾಗಲ್ಲ, ನಾನು ಇನ್ನೂ ಪೂರ್ತಿಯಾಗಿ ಹೇಳಿಲ್ಲ. ತಾವೇ ಇದ್ದಿದ್ದರೆ ಆಗ ಇನಾಂದಾರರಿಗೆ ಕೊಟ್ಟ ದಾನಕ್ಕೆ ಅವಕಾಶ ಕೊಡುತ್ತಿರಲಿಲ್ಲವೆಂದು ಹೇಳಿದೆ, ಅಷ್ಟೆ.

ಮತ್ತೊಂದು ವಿಷಯವೇನೆಂದರೆ ಈ ದಿವಸ ಸರ್ಕಾರದವರು ಈ ಹಕ್ಕನ್ನು ಸುಮ್ಮನೆ ಏಕಾಏಕಿ ಯಾರಿಂದಲೂ ಕಿತ್ತುಕೊಳ್ಳುತ್ತಿಲ್ಲ. ಇದು ಅವರಿಗೆ ಯಾವುದೋ ಒಂದು ಕಾಲದಲ್ಲಿ ಸರ್ಕಾರದವರು ಯಾವುದೋ ಒಂದು ಕಾರಣ ಕ್ಕಾಗಿ ಹಕ್ಕಿಕೊಟ್ಟಂಥ ಜಹಗೀರುಗಳು ಮತ್ತು ಇನಾಮುಗಳು ಆಗಿರುತ್ತವೆ. ಹಾಗೆ ಈ ಜಮೀನುಗಳ ಒಂದು ಹಕ್ಕು ಅವರಿಗೆ ಬಹಳ ಕಾಲದಿಂದ ಬಂದಿರುವುದಾಗಿದೆ. ಆದರೆ ಅಂಥಾದ್ದನ್ನೆಲ್ಲಾ ಈಗ ಸರ್ಕಾರದವರು ಅದಕ್ಕೆ ತಕ್ಕಷ್ಟು ಪ್ರತಿಫಲವನ್ನು ಕೊಟ್ಟೇ ತಗೆದುಕೊಳ್ಳತಕ್ಕವರಾಗಿದ್ದಾರೆ. ಈ ವಿಷಯವನ್ನು ಈ ಮಸೂದೆಯಲ್ಲೇ ತಿಳಿಸಲಾಗಿದೆ. ಹೀಗೆ ಒಂದು ನ್ಯಾಯವಾದ ಪ್ರತಿಫಲವನ್ನು ಕೊಟ್ಟು ಆ ಇನಾಂ ಜಮೀನುಗಳನ್ನೆಲ್ಲಾ ಈಗ ಸರ್ಕಾರದವರು ದೇಶದ ಅಭ್ಯುದಯಕ್ಕಾಗಿ ತೆಗೆದುಕೊಳ್ಳಬೇಕೆಂದು ಹೇಳುತ್ತಿರುವಾಗ ಇದರಿಂದ ಯಾರಿಗೂ ಯಾವ ಅನ್ಯಾಯವನ್ನೂ ಮಾಡಿದಂತಾಗಿರುವುದಿಲ್ಲ. ಆದಾಗ್ಯೂ ಕೆಲವರು ಈ ಸಭೆಯಲ್ಲಿ ಈ ಸಂಬಂಧವಾಗಿ ವಾದ ನಡೆಸಿರುವುದು ಬಹಳ ಆಶ್ಚರ್ಯವನ್ನುಂಟುಮಾಡತಕ್ಕವಾಗಿದೆ.

ಇನ್ನು ಎರಡನೇಯದಾಗಿ ಕೆಲವು ಮಾನ್ಯ ಸದಸ್ಯರು ಈ ಸಭೆಯಲ್ಲಿ ವಾದಿಸಿದ್ದು, ಈ ಮಸೂದೆಯನ್ನು ಜಾರಿಗೆ ತಂದರೆ ಇದರಿಂದ ದೇಶದ ಆಹಾರ ಪರಿಸ್ಥಿತಿ ಸುಧಾರಣೆಯಾಗುತ್ತದೆಂಬುದು ಸರಿಯಾದ ಭಾವನೆಯಲ್ಲವೆಂದು ಹೇಳಿದರು. ಆದರೆ ಹಾಗೆ ಅವರು ತಿಳಿದುಕೊಂಡಿದ್ದಿರೆ ಅವರ ಅಭಿಪ್ರಾಯವೇ ಸರಿಯಲ್ಲ; ಅದು ತಪ್ಪು ಅಭಿಪ್ರಾಯವೆಂದು ನಾನು ಹೇಳಬೇಕಾಗಿದೆ. ಈಗ ಈ ಸಂಬಂಧವಾಗಿ ನನಗೆ ತಿಳಿದಿರುವ ಮಟ್ಟಿಗೂ ಇಂದು ನಮ್ಮ ದೇಶದ ರೈತನು ಇರತಕ್ಕ ಸ್ಥಿತಿ ಕೇವಲ ಕಾಬೂರ್ ಮತ್ತು ಖಾಂದಾಹಾರ್‌ಗಳಂತೆ ಒಂದು ದಿವಸ ಈ ಗ್ರಾಮದಲ್ಲಿದ್ದರೆ ನಾಳೆ ಅಲ್ಲಿಂದ ಓಡಿಸಲ್ಪಟ್ಟು ಮತ್ತೊಂದು ಗ್ರಾಮದಲ್ಲಿರುತ್ತಾ ಅವರ ಇರುವಿಕೆ ಮತ್ತು ಜೀವನದ ಸ್ಥಿತಿಗಳೇ ಬಹಳ ಅನಿಶ್ಚಿತವಾಗಿದ್ದು ರೈತಾಪಿವರ್ಗದವರು ಯಾರೂ ಕಷ್ಟಪಟ್ಟು ಕೃಷಿಮಾಡದೆ ಅವರಲ್ಲಿ ನಿರುತ್ಸಾಹ, ನಿರ್ಲಕ್ಷ್ಯ ತುಂಬಿ ಕೈ ಕಟ್ಟಿ ಕುಳಿತಿದ್ದಾರೆ. ಈ ರೀತಿಯ ಪರಿಸ್ಥಿತಿಯುಂಟಾಗಿ ಅನೇಕ ಇನಾಂ ಗ್ರಾಮಗಳಲ್ಲಿ ವಿಶೇಷವಾಗಿ ಜಮೀನು ಪಾಳುಬಿದ್ದಿರುತ್ತದೆ. ಆ ಇನಾಂದಾರರಾದರೋ ಇಂದು ಒಬ್ಬನಿಗೆ ಜಮೀನನ್ನು ಕೊಟ್ಟಿದ್ದರೆ, ನಾಳೆ ಮತ್ತೊಬ್ಬ ಬಂದು ಮತ್ತಷ್ಟು ಹೆಚ್ಚು ಕಾಳು ಬೆಟ್ಟುಕೊಡುತ್ತೇನೆಂದು ಹೇಳಿದರೆ ಆತನಿಗೆ ಕೊಡುತ್ತಾ ಅವರಲ್ಲಿ ಒಂದು ನಿರ್ಧಾರವಾದ ನಡವಳಿಕೆ ಇಲ್ಲದೆ ಇಂದು ಅಲ್ಲರತಕ್ಕ ಇನಾಂದಾರರಿಗೂ ರೈತರಿಗೂ ಜಗಳಗಳೂ ತಿಕ್ಕಾಟಗಳೂ ಉಂಟಾಗಿವೆ. ಪರಿಸ್ಥಿತಿ ಹೀಗೆ ಬಿಗಡಾಯಿಸಿರುವುದರಿಂದ ಇಂದು ಸರ್ಕಾರದವರು ಈ ಪ್ರಶ್ನೆಯನ್ನು ತಮ್ಮ ಪರ್ಯಾಲೋಚನೆಗೆ ತೆಗೆದುಕೊಂಡು ಜೋಡಿದಾರರಿಗೂ ಮತ್ತು ರೈತರಿಗೂ ಉಂಟಾಗಿರುವ ಅಸ್ತವ್ಯಸ್ತೆಯನ್ನು ಸರಿಪಡಿಸಿ ಯಾರ್ಯಾರ ಹಕ್ಕುಗಳು ಎಷ್ಟೆಷ್ಟರಮಟ್ಟಿಗಿರುತ್ತವೆಂಬುದನ್ನು ಪರಿಶೀಲಿಸಿ, ಅವರವರ ಹಕ್ಕಿನ ಪ್ರಕಾರ ಒಂದು ನಿರ್ಧಾರಕ್ಕೆ ಬಂದು ತನ್ಮೂಲಕ ದೇಶದಲ್ಲುಂಟಾಗಿರುವ ಆಹಾರಾಭಾವವನ್ನು ನೀಗಲು ಇದರಿಂದ ಬೇಗ ಸಹಾಯವಾಗುತ್ತದೆಂದು ಈ ಸಭೆಯ ಮುಂದೆ ಈ ಮಸೂದೆಯನ್ನು ಮಂಡಿಸುವ ಕಾಲದಲ್ಲಿ ಹೇಳಿದ್ದಾಗಿದೆ.

ಇನ್ನು ಮೂರನೆಯದಾಗಿ ಈ ಮಸೂದೆಯನ್ನು ಪೂರ್ಣ ಇನಾಂ ಗ್ರಾಮಗಳಿಗೆ ಅನ್ವಯಿಸುವಂತೆ ರೆವೆನ್ಯೂ ಗ್ರಾಮಗಳಲ್ಲಿ ಇರುವ ಇನಾಂ ಗ್ರಾಮಗಳಿಗೆ ಅನ್ವಯವಾಗದಂತೆಯೂ ಇದೆ. ಇದನ್ನು ಎರ್ಪಾ ಇನಾಂ ಜಮೀನುಗಳಿಗೂ ಅನ್ವಯವಾಗುವ ರೀತಿಯಲ್ಲಿ ಮಾಡಬೇಕಾದ್ದು ನ್ಯಾಯವಾಗಿರುತ್ತೆಂದು ನನ್ನ ಅಭಿಪ್ರಾಯ. ಆದರೆ ಈ ಮಸೂದೆ ಸೆಲೆಕ್ಟ್ ಸಮಿತಿಯವರ ಮುಂದೆ ಹೋಗತಕ್ಕುದ್ದಾಗಿರುವುದರಿಂದ ಅವರು ಈ ಅಂಶಗಳನ್ನೆಲ್ಲಾ ತಮ್ಮ ಗಮನದಲ್ಲಟ್ಟುಕೊಂಡು ಅವಶ್ಯಕವಾದ ಬದಲಾವಣೆಗಳನ್ನು ಮಾಡುತ್ತಾರೆಂದು ಭಾವಿಸಿ ನಾನು ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಕೆ. ಸಿಂಗಾರಿಗೌಡರು (ಮಂಡ್ಯ ಜಿಲ್ಲೆ).— ಮಾನ್ಯ ಅಧ್ಯಕ್ಷರೇ, ಈ ಮಸೂದೆಯನ್ನು ನಾನು ಸ್ವಾಗತಿಸುತ್ತ, ಇದು ಸದ್ಯದರ್ಲ್ಲೇ ಸೆರೆಕ್ಟ್ ಸಮಿತಿಯವರ ಪರ್ಯಾಲೋಚನೆಗೆ ಹೋಗತಕ್ಕದ್ದಾಗಿರುವುದರಿಂದ ಇದರ ಬಗ್ಯೆ ಒಂದೆರಡು ವಿಷಯಗಳನ್ನು ಮಾತ್ರ ನಭೆಯವರ ಗಮನಕ್ಕೆ ತರಬೇಕೆಂದಿದ್ದೇನೆ.

ಮೊಟ್ಟಮೊದಲನೆಯದಾಗಿ ನಾನು ತಿಳಿಸಬೇಕಾಗಿರುವುದೇನೆಂದರೆ, ಈಗಾಗಲೇ ಅನೇಕ ಜೋಡಿದಾರರೂ, ಇನಾಂದಾರರೂ ತಮ್ಮ ತಮ್ಮ ಹಿಡಿತದಲ್ಲಿದ್ದ ಜಮೀನುಗಳನ್ನೆಲ್ಲಾ ಪರಭಾರೆ ಮಾಡಿದ್ದಾರೆ. ಜೋಡಿದಾರರಿಂದ ಅಥವಾ ಅಂಥಾ ಜೋಡೀ ಜಮೀನುಗಳ ಮೇಲೆ ಯಾವುದಾದರೂ ಹಕ್ಕಿರತಕ್ಕವರಿಗೆ ಹಣ ಬರಬೇಕಾಗಿದ್ದಲ್ಲ, ಸದರೀ ಜನರು ಜಿಲ್ಲಾಧಿಕಾರಿಗಳಿಗೆ ಆ ಬಗ್ಯೆ ಅರ್ಜಿ ಹಾಕಿಕೊಳ್ಳಬೇಕೆಂದು ಸೆಕ್ಷನ್ 27 ; ಕ್ಲಾಸ್ (2) ರಲ್ಲಿ ತಿಳಿಸಿದೆ. ಒಬ್ಬ ಜೋಡಿದಾರ ತನ್ನ ಗ್ರಾಮವನ್ನು ಬೇರೆ ಬೇರೆ 3-4 ಜನಗಳಿಗೆ ಪರಭಾರೆ ಮಾಡಿದ್ದಾಗ, ಅಂಥಾವರಿಗೆ ಆ ರೀತಿಯ ಒಂದು ಹಕ್ಕನ್ನುಂಟುಮಾಡಿಕೊಡುವಾಗ 6 ಸಾವಿರ ರೂಪಾಯಿ ಪರಿಹಾರ ಬರತಕ್ಕದ್ದನ್ನೇ ಕೇವಲ 12 ಸಾವಿರ ರೂಪಾಯಿಗಳಿಗೆ ಪರಭಾರೆ ಮಾಡಿದ್ದರೆ ಆಗ ಆತನಿಗೆ ಕೊಡತಕ್ಕ ಹಣ ಯಾವ ನಿಯಮಕ್ಕನುಗುಣವಾಗಿರುತ್ತೆಂಬುದನ್ನು ಸೆಕ್ಷನ್ 27, ಒಳಪ್ರಕರಣ (2) ರಲ್ಲಿ ನಮೂದಿಸಲಾಗಿದೆ. ಇದರ ಪ್ರಕಾರ ಲೆಕ್ಕ ಹಾಕಿ ನೋಡಿದರೆ ಸರ್ಕಾರದವರು ಏನೊಂದು ಪರಿಹಾರದ್ರವ್ಯವನ್ನು ಆ ಜೋಡಿದಾರರಿಗೆ ಕೊಡಬೇಕೆಂದು ನಿರ್ಧರಿಸುತ್ತಾರೋ ಅದಕ್ಕಿಂತ ಜಾಸ್ತಿ ಹಣವನ್ನು ಕೊಡಕೂಡದೆಂದು ಹೇಳಿದ್ದಾರೆ. ಹೀಗೆ ಮಾಡುವುದರಿಂದ ಕೆಲವು ಜನ ಸಾಲ ಕೊಟ್ಟವರಿಗೆ ಬಹಳ ಅನ್ಯಾಯವಾಗುತ್ತದೆ. ಇದೂ ಅಲ್ಲದೆ ಒಬ್ಬ ಬಾಕೀದಾರನು ತನಗೆ ಎಷ್ಟೇ ಬಾಕಿ ಇದ್ದರೂ ಈ ಜೋಡಿದಾರನು ತನ್ನ ಹಕ್ಕನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟ ಮೇಲೆ ಸರ್ಕಾರದವರು ಕೊಡುವ ಮೊಬಲಗಿಗಿಂತ ಹೆಚ್ಚಾದ ಸಾಲ ಕೊಟ್ಟವನು ತನಗೆ ಬರಬೇಕಾಗಿದ್ದ ಇತರ ಬಾಕಿಯನ್ನೆಲ್ಲಾ ಕೈಬಿಡಬೇಕೆಂದು ತಿಳಿಸಿದೆ. ಈ ಕಾರಣದಿಂದಲೂ ಹಣ ಕೊಳ್ಳುವವರಿಗೆ ಬಹಳ ಅನಾನುಕೂಲವಾಗುತ್ತದೆ. ಈ ಅಂಶಗಳನ್ನೆಲ್ಲಾ ಸೆರೆಕ್ಟ್ ಸಮಿತಿಯವರು ವಿಮರ್ಶೆ ಮಾಡಬೇಕಾಗಿದೆ. ಹೀಗೆ ನಿಲ್ಲುವ ವಿಶಿಷ್ಟ ಬಾಕಿಯನ್ನೂ ವಸೂಲು ಮಾಡಿಕೊಳ್ಳುವುದಕ್ಕೆ ತಕ್ಕ ವಹಾರಗಳನ್ನು ಕಟ್ಟಿಕೊಡುವುದು ಸೂಕ್ತವಾದುದೆಂದು ನನ್ನ ಅಭಿಪ್ರಾಯ.

ಇನ್ನು ಎರಡನೆಯದಾಗಿ ಈ ಮೈನರ್ ಇನಾಂಗಳ ಬಗ್ಯೆ ಅಲ್ಲಿರತಕ್ಕ ಜಮೀನುಗಳ ಬಗ್ಯೆ ಕೆಲವರು ಇರಬೇಕೆಂದೂ ಮತ್ತೆ ಕೆಲವರು ಸೆಕ್ಷನ್‌ಗಳು ಅನಾವಶ್ಯಕವೆಂದು ತಿಳಿಸಿದ್ದಾರೆ. ಆದರೆ ನಮ್ಮ ಮೈಸೂರು ದೇಶದಲ್ಲಿ ಸಾಧಾರಣವಾಗಿ ಮೈನರ್ ಇನಾಂಗಳೇ ಹೆಚ್ಚಾಗಿದ್ದಾಂತೆ ಕಂಡುಬರುತ್ತಿದೆ. ಇದರ ಬಗೆಯೂ ಸೂಕ್ಷ್ಮಾಲೋಚನೆ ಮಾಡಬೇಕಾಗಿದೆ. ಇನ್ನು ದೇವಾದಾಯದ ಬಗ್ಯೆ ಎಲ್ಲೋ ಅಲ್ಪ ಸ್ವಲ್ಪವಾಗಿ ಅಲ್ಲಲ್ಲೇ 3-4-5 ಎಕರೆಗಳಷ್ಟು ಭೂಮಿಯನ್ನು ಬಿಟ್ಟಿದ್ದಾರ್ಯ್ಯಕೂಡ ಕೆಲವರು ಅದನ್ನೂ ಕಿತ್ತುಕೊಳ್ಳಬೇಕೆಂದು ತಿಳಿಸಿದ್ದಾರೆ. ಅದರೆ ಇಲ್ಲಯತನಕ ಈ ಜಮೀನುಗಳನ್ನೆಲ್ಲಾ ದೇವರ ಹೆಸರಿನಲ್ಲೋ ಅಥವಾ ಸರ್ಕಾರದ ಹೆಸರಿನಲ್ಲೋ ಇಟ್ಟಿದ್ದು, ಆ ಬಗ್ಯೆ ಬರುತ್ತಿದ್ದ ಉತ್ಪತ್ತಿಯಿಂದ ಆಯಾಯ ದೇವಸ್ಥಾನಗಳಲ್ಲಿ ಪೂಜೆ ವಗ್ಯೆರೆ ಕಾರ್ಯಗಳು ಇಲ್ಲಯತನಕ ಜರುಗುತ್ತಿದ್ದವು. ಆದರೆ ಈಗ ಎಲ್ಲೆಲ್ಲಿಯೂ ನೈತಿಕ ಪತನವಾಗುತ್ತಿರುವ ಕಾಲದಲ್ಲಿ ಹೀಗೆ ಈ ದೇವಸ್ಥಾನಗಳ ಇನಾಂತಿಗಳನ್ನು [illegible] ಕೊಳ್ಳುವುದು ನಮ್ಮ ಜನತೆಯ ನೈತಿಕ ಮಟ್ಟದ ಮೇಲ್ಮೈಯ ಬುಡಕ್ಕೆ ಕೊಡಲ ಹಾಕಿದ ಹಾಗಾಗುತ್ತದೆ. ಆದ್ದರಿಂದ ಸರ್ಕಾರದವರು ಇಂಥಾ ವಿಚಾರದಲ್ಲಿ ಸ್ವಲ್ಪ ದೀರ್ಘಾಲೋಚನೆ ಮಾಡಬೇಕಾದ್ದು ಸೂಕ್ತವಾಗಿದೆ. ಇಂಥ ಸನ್ನಿವೇಶಗಳಾದರೂ ಎಷ್ಟಿವೆ, ಎಲ್ಲೋ ಕೇವಲ 200-300 ಇದ್ದರೆ ಹೆಚ್ಚಾಯಿತು. ಆದ್ದಕಾರಣ ಇಂಥಾ ಮಸೂದೆಗಳನ್ನು ನಭೆಯ ಮುಂದೆ ತರುವಾಗ ದೇವಸ್ಥಾನದ ಸರ್ಕಾರಿ ಕೊಡಗಿಗಳನ್ನೇ ಮುಟ್ಟದೆ ದೊಡ್ಡ ದೊಡ್ಡವನ್ನು ತಂದರೆ ಅನುಕೂಲವೆಂದು ನಾನು ಅಭಿಪ್ರಾಯಪಡುತ್ತೇನೆ. ಅದರೆ ಕೆಲವು ಮಾನ್ಯ ಸದಸ್ಯರು ಒಂದು ಅಂಶವನ್ನು ವ್ಯಕ್ತಪಡಿಸಿದ್ದಾರೆ. ಅದೇನೆಂದರೆ ಈ ಜೋಡಿದಾರರುಗಳಿಂದ ಜಮೀನುಗಳನ್ನು ಕಿತ್ತುಕೊಂಡರೆ ದೇಶದಲ್ಲಿರತಕ್ಕ ಆಹಾರ ಪರಿಸ್ಥಿತಿ ಉತ್ತಮಗೊಳ್ಳಲಾರದು ಎಂದು. ಆದರೆ ಇದು ಶುದ್ಧ ತಪ್ಪು ಅಭಿಪ್ರಾಯವೆಂದೂ, ಆ ಜೋಡಿ ಗ್ರಾಮಗಳ ಅನುಭವವಿಲ್ಲದವರು ಹೇಳತಕ್ಕ ಮಾತಾಗಿದೆಯೆಂದು ನಾನು ತಿಳಿಸಬೇಕಾಗಿದೆ. ನಾನೂ ಒಂದು ಜೋಡೀ ಗ್ರಾಮದಿಂದಲೇ ಬರತಕ್ಕವನಾಗಿದ್ದೇನೆ. ನನಗೆ ಆ ಗ್ರಾಮಗಳ ವಿಚಾರವೆಲ್ಲ ಚೆನ್ನಾಗಿ ಗೊತ್ತಿದೆ. ಮೇಲೆ ಸೂಚಿಸಿದ ಅಭಿಪ್ರಾಯಗಳನ್ನು ತಿಳಿಸಿದಂಥ ಮಾನ್ಯ ಸದಸ್ಯರಿಗೆ ಜೋಡೀ ಗ್ರಾಮಗಳ ಅನುಭವವೇ ಇಲ್ಲವೆಂದು ನಾನು ಹೇಳಬಲ್ಲೆ. ಜೋಡಿ ಗ್ರಾಮದಲ್ಲರ ತಕ್ಕ ರೈತನು ತನಗೆ ಇಷ್ಟಬಂದ ಬೆಳೆಯನ್ನು ಬೆಳೆಯುವ ಹಾಗಿಲ್ಲ. ಜೋಡೀದಾರನ ಇಷ್ಟದ ಪ್ರಕಾರವೇ ನಡೆಯಬೇಕಾಗಿದೆ. ಹೀಗಾಗಿ ಆ ರೈತರಿಗೂ, ಜೋಡಿದಾರರಿಗೂ ಜಿಗುಪ್ಸೆಗಳುಂಟಾಗಿವೆ. ಈಗ ಆ ಜೋಡಿ ಗ್ರಾಮಗಳಲ್ಲರುವ ರೈತರುಗಳಲ್ಲಿ ನಾವು ತಲೆತಲಾಂತರಗಳಿಂದ ದುಡಿಯುತ್ತಿದ್ದರೂ, ನಾವು ಇನ್ನೂ ಭೂಮಿಯ ಹಕ್ಕುದಾರರಾಗತಕ್ಕ ಅವಕಾಶವೇ ಸಿಕ್ಕಿಲ್ಲಲ್ಲವಲ್ಲ ಎಂಬ ಅಭಿಪ್ರಾಯ ಮೂಡಿ ಅವರು ಈ ಜನಜೀವನದಲ್ಲಿ ಯಾವ ಆಶಾಕಿರಣವನ್ನೂ ಕಾಣದೆ ನಿರುತ್ಸಾಹಿಗಳಾಗಿದ್ದಾರೆ. ಅಂಥವರಿಗೆ ಈ ಮಸೂದೆಯಿಂದ ಬಹಳ ಉಪಕಾರವಾಗುತ್ತದೆ.

20ನೆಯ ಸೆಕ್ಷನ್‌ನಲ್ಲಿ ಸೂಚಿಸಿರುವ ಪರಿಹಾರವು ಬಹಳಮಟ್ಟಿಗೆ ಹೆಚ್ಚಾಗಿದೆಯೆಂದು ನಾನು ಭಾವಿಸಿದ್ದೇನೆ, ಕಾರಣ ಇಷ್ಟೆ. ಈ ಜೋಡಿ ಪದ್ಧತಿಯು ಹಿಂದೆ ಯಾವಾಗ ಜಾರಿಗೆ ಬಂತು ಎಂಬುದನ್ನು ನಾನು ಹೀಗೆ ತಿಳಿದುಕೊಂಡಿದ್ದೇನೆ. ಹಿಂದೆ ರಾಜರು ಪ್ರಜಾಸ್ವತ್ತು ಎಂಬುದನ್ನು ಮರೆತು ನಿರಂಕುಶರಾಗಿ ವರ್ತಿಸಿದಾಗ ಕೆಲವು ಕಾರಣಗಳಿಗಾಗಿ ಇಷ್ಟಬಂದಾಗ ದೇಶದ ಅಭ್ಯುದಯಕ್ಕಾಗಿ ಸೇವೆ ಯಾರು ಮಾಡಿದರೋ ಅಥವಾ ರಾಜಾಸ್ಥಾನದಲ್ಲಿ ಯಾರು ಸೇವೆ ನಲ್ಲಿಸಿದರೋ ಅಂಥವರಿಗೆ ಆ ಕಾಲದಲ್ಲಿ ಕೆಲವು ಮಾನ್ಯಗಳನ್ನು ಕೊಟ್ಟರು, ಅದು ಹಾಗೆಯೇ ನಡೆದುಕೊಂಡು ಬಂದಿದೆ. ಈ ಒಂದು ದೃಷ್ಟಿಯಿಂದ ನೋಡಿದರೆ ಅಂಥ ಜೋಡಿಗಳನ್ನು ಜೋಡಿದಾರರು ವಂಶಪಾರಂಪರ್ಯವಾಗಿ ಅನುಭವಿಸಿಕೊಂಡು ಬರುತ್ತಿದ್ದಾರೆಂದು ಕಂಡುಬರುತ್ತದೆ. ನಾನು ನೋಡಿರುವ ಹಾಗೆ ಕೆಲವು ಕಡೆ ರಾಗಿ ಹೆಚ್ಚಾಗಿ ಬೆಳೆದರೂ ಹೆಸರನ್ನು ಗುತ್ತಿಗೆಯಾಗಿ ತೆಗೆದುಕೊಳ್ಳುತ್ತಿದ್ದಾರೆ ಈಗಲೂ ಅದಕ್ಕೆ ರಸೀತಿಯಿದೆ, ಈಗಲೂ ಹೆಸರು ಕಾಳನ್ನೇ ಕೆಲವರು ಗುತ್ತಿಗೆ ಕೊಡುತ್ತಿದ್ದಾರೆ, ಏಕೆ ಹಾಗೆ ಮಾಡಿದರೋ ಗೊತ್ತಿಲ್ಲ: ಪೂರ್ವಿಕರು ನಿಸ್ವಾರ್ಥ ಸೇವೆಯನ್ನು ರಾಜರಿಗೆ ನಲ್ಲಿಸಿ ಅವರಿಂದ ಒಂದು ಕಾಣಿಕೆಯನ್ನು ಹೇಗೆ ತೆಗೆದುಕೊಂಡರೋ, ರಾಜರೂ ಸಹ ಉದಾರ ಮನಸ್ಸಿನಿಂದ ಯಾವುದೋ

ಒಂದು ದೃಷ್ಟಿಯಿಂದ ಜೋಡಿಯನ್ನು ಕೊಟ್ಟರೋ, ಈಗ ಅದೇದೃಷ್ಟಿಯಿಂದ, ಅದೇ ಉದಾರಭಾವನೆಯಿಂದ ಹೆಚ್ಚು ಹಣ ಆರ್ಜನೆ ಮಾಡಬೇಕೆಂಬ ಅಭಿಲಾಷೆ ಇದ್ದರೆ ಕಾಲ ಬದಲಾಯಿಸಿರುವುದನ್ನು ಮನಗಂಡು ಪ್ರಜೆಗಳ ನ್ಪತ್ತು ಅದು ಎಂದುಜೋಡಿದಾರರುಗಳು ಭಾವಿಸಬೇಕು, ಅವರ ಜೀವನಕ್ಕೆ ಸ್ವಲ್ಪ ಹಣ ಬೇಕು. ಸೆಲೆಕ್ಟ್ ಕಮಿಟಿ ಯವರು ಅವರ ಜೀವನ ಸಾಗಿಸಲು ಎಷ್ಟು ಬೇಕೆಂಬುದನ್ನು ಒಂದು ಆಧಾರವಾಗಿಟ್ಟುಕೊಂಡು ಈ ಒಂದು ಮಸೂದೆಯನ್ನು ಸಭೆಗೆ ಒಪ್ಪಿಸಬೇಕು. ಜೋಡಿದಾರರು ಜನರ ಅಭ್ಯುದಯವಾಗಬೇಕೆಂಬ ಒಂದು ಮನೋಭಾವನೆಯಿಂದ ಬಹಳ ಉದಾರವಾಗಿ ವರ್ತಿಸಿ ಮುಂದು ವರಿಯಬೇಕಾಗಿದೆ. ಆದ್ದರಿಂದ ಇದನ್ನು ಸೆಲೆಕ್ಟ್ ಸಮಿತಿಗೆ ಕಳುಹಿಸಿ ಪರಿಶೀಲಿಸಬೇಕೆಂದು ಸೂಚಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

Janab MOHAMED HANIEF (Bangalore—Muslim).—Mr. Speaker, it is with the greatest pleasure that I support the Bill. It is obvious that political equality cannot be obtained without economic equality. The Hon'ble Member Sri Krishnappa has put it in his own way on this aspect very pointedly. Inams, whatever may be the history or the causes that brought them into existence in the past, no longer hold good at the present day. Equality between man and man has to be established and every citizen of this country must have an opportunity to rub shoulder with another with perfect equality. Here under the Inam system people without working get the benefits; the tiller of the soil is made to sweat and still he has no the chance to keep the fruit of his own labour; that is left to the Inamdar. Why should such state of affairs exist? It must go root and branch. No consideration should prevail or come in the way of the abolition of Inams. This Bill is very conservative. It does as a matter of fact, take note of the existence of Inamdars and provides for compensation to them, for reasons which carry no conviction to me. Inams came into existence long age. There are Inams which are given gratis. It may be due to the whims and fancies of some monarch or any otherbody. They had it all these years and enjoyed the fruits thereof and still want compensation? And yet Government, because of some interests, think it fit to give them some money by way of compensation. And in so doing, I am perfectly certain that the Government will not be oblivious of the fact that the money given by way of compensation comes from the common Exchequer. It is not, from the tiller of the soil that the money is taken. The land is given to the tiller and he is made the owner of it. He pays nothing to the Government and why should the Inamdar be compensated for no reason whatever. The Inamdars were getting the cream for so many years and the cream is taken away now from them. Yet some attempt is made to give them compensation. Judicial machinery is provided for the people who are not satisfied with the compensation to agitate their claims and get higher or lower compensation in Courts. Such being the case, all the aspects of the case should be kept in view. There is no reason why we should hesitate to pass this Bill in toto even without sending it before the Select Committee.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಇನಾಂ ಗ್ರಾಮಗಳನ್ನು ರದ್ದುಪಾಡಲು ತಂದಿರತಕ್ಕ ಬಹಳ ಉಪಯೋಗಕರವಾದ ಈ ಮಸೂದೆಯನ್ನು ಬಹಳ ನಂತೋಷದಿಂದಲೂ ಮತ್ತು ಆದರದ್ದಿಂದಲೂ ಸ್ವಾಗತಿಸುತ್ತಾ ಇದರಲ್ಲಿ ಬಹಳ ಕ್ರಾಂತಿಕಾರಕವಾದ ಬದಲಾವಣೆಯಾಗಬೇಕಾಗಿದೆ ಎಂದು ನೂಚಿಸ ಬಯಸುತ್ತೇನೆ. ಎರಡು ದಿವಸಗಳಿಂದಲೂ ಕೂಡ ಅನೇಕ ಮಿತ್ರರು ಈ ಮಸೂದೆಯನ್ನು ಸ್ವಾಗತಿಸಿದ್ದಾರೆ. ಅನೇಕ ಮಿತ್ರರು ಜೋಡಿದಾರರಾಗಿದ್ದಾರೆ, ಅವರೂ ಕೂಡ ಯಾವ ದೃಷ್ಟಿಯಿಂದ ಈ ಮಸೂದೆಯನ್ನು ಸ್ವಾಗತಿಸಿದ್ದಾರೆಂಬ ವಿಷಯ ಇಲ್ಲಿ ಗೊತ್ತಾಗಿದೆ. ದುರಾದೃಷ್ಟವಶಾತ್ ಜೋಡೀಗ್ರಾಮದ ರೈತರ ಪೈಕಿ ಯಾವ ನದಸ್ಯರೂ ಇಲ್ಲಿ ನದಸ್ಯರಾಗಿಲ್ಲ. ಹಾಗೆ ಕೆಲವರಿದ್ದು ಅವರ ಅಭಿಪ್ರಾಯವನ್ನು ಈ ನಂದರ್ಭದಲ್ಲಿ ವ್ಯಕ್ತಪಡಿಸಿದ್ದರೆ ಯಾವ ಒಂದು ದೃಷ್ಟಿಯಿಂದ ಅವರು ಈ ಮಸೂದೆಯನ್ನು ನೋಡುತ್ತಿದ್ದರು ಎಂಬುದು ಬಹಳ ಸುಲಭವಾಗಿ ತವಗೆ ಗೊತ್ತಾಗುತ್ತಿತ್ತು. ಆದರಿಂದ ಈ ದಿವಸ ಜೋಡಿಗ್ರಾಮದ ಸ್ಥಿತಿ ಹೇಗಿದೆಯೆಂಬುದು ಬಹಳ ಚೆನ್ನಾಗಿ ಗೊತ್ತಾಗುತ್ತಿತ್ತು, ಜೋಡಿಗ್ರಾಮದ ರೈತನ ಹೃದಯವೇದನೆ ಗೊತ್ತಾಗುತ್ತಿತ್ತು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಜೋಡಿಗ್ರಾಮಗಳು ಹೋಗಬೇಕು, ಇನಾಂ ಪದ್ಧತಿ ಹೋಗಬೇಕು ಎಂದು ಅನೇಕ ಮಾನ್ಯ ಮುಖಂಡರು ಶಾಸನ ಸಭೆಯಲ್ಲೂ ಮತ್ತು ಇತರ ಕಡೆಗಳಲ್ಲೂ ಅಭಿಪ್ರಾಯಪಟ್ಟು ಠರಾವು ಮಾಡಿದರು, ಅಮೇಲೆ ಅದಕ್ಕೆ ಒಂದು ಸಮಿತಿ ಕೂಡ ಆಗಿ ಕಾರ್ಯಕ್ರಮ ಪ್ರಾರಂಭವಾಗುವುದಕ್ಕೆ ಮುಂಚೆ ಜೋಡಿಗ್ರಾಮದಲ್ಲಿ ಯಾವ ಪರಿಸ್ಥಿತಿ ಉಂಟಾಯಿತು ಎಂದು ಜ್ಞಾಪಕ ಮಾಡಿಕೊಳ್ಳುವುದು ಒಳ್ಳೆಯದು, ಕೆಲವು ಕಾಲ ಜೋಡಿದಾರರಿಗೂ ಮತ್ತು ರೈತರಿಗೂ ಮಧುರ ಬಾಂಧವ್ಯ ಇತ್ತು. ಅದು ತಪ್ಪಿ ಗಲಾಟೆಯಾಗಿದೆಯೆಂದು ಹೇಳಿದರು. ಅದು ವಾಸ್ತವಾಂಶಕ್ಕೆ ದೂರವಾದ ವಿಷಯ. ದೇಶಕ್ಕೆ

(ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.)

ಸ್ವಾತಂತ್ರ್ಯ ಬಂತೆಂದು ಎಲ್ಲರೂ ಕೂಡ ಅವರವರ ಹಕ್ಕುಬಾಧ್ಯತೆಗಳನ್ನು ಅರಿತು ಹೋರಾಡುವುದಕ್ಕೆ ಪ್ರಾರಂಭಿಸಿದರು. ಆದರೆ ಜೋಡಿಗ್ರಾಮಗಳಲ್ಲಿ ಯಾವ ಉದ್ದೇಶದಿಂದ ಹೋರಾಟವಾಯಿತು, ಜೋಡಿದಾರರಿಂದ ಆಯಿತೇ, ರೈತರಿಂದ ಆಯಿತೇ, ಹೇಗೆ ಎಂಬ ಪರಿಸ್ಥಿತಿಯನ್ನು ಪರಿಶೀಲಿಸಿದರೆ ಗೊತ್ತಾಗುವುದು.

ಜೋಡಿ ಗ್ರಾಮದ ಜೋಡಿದಾರರು ವಿದ್ಯಾವಂತರು. ಅವರು ಮುಂದೆ ಆಗುವ ಆಗುಹೋಗುಗಳನ್ನು ಚೆನ್ನಾಗಿ ಬಲ್ಲವರಾಗಿರುತ್ತಾರೆ. ಜೋಡಿ ಗ್ರಾಮಗಳ ರದ್ದು ಇಷ್ಟರಲ್ಲೇ ಆಗುತ್ತದೆ ಅದಕ್ಕೆ ಮೊದಲೇ ತಕ್ಕ ಹಕ್ಕು ಬಾಧ್ಯತೆಗಳನ್ನು ಮಾಡಿಕೊಳ್ಳಬೇಕು ಎಂಬ ಹೋರಾಟ ಪ್ರಾರಂಭವಾದದ್ದು ಮೊದಲು ಜೋಡಿದಾರರಿಂದಲೇ ಎಂದು ಹೇಳಿದರೆ, ಅದೇನೂ ಉತ್ಪ್ರೇಕ್ಷೆಯಲ್ಲವೆಂದು ಮಾನ್ಯ ಸದಸ್ಯರಲ್ಲಿ ತಿಳಿಸಬಯಸುತ್ತೇನೆ. ತಮ್ಮ ಹಕ್ಕನ್ನು ಉಳಿಸಿಕೊಳ್ಳಲು ಒಬ್ಬ ರೈತನಿಗೆ ಕೊಟ್ಟಿದ್ದ ಜಮೀನನ್ನು ಕಿತ್ತುಕೊಂಡು ಮತ್ತೊಬ್ಬ ರೈತನಿಗೆ ಕೊಡಲು ಅವರು ಪ್ರಾರಂಭಮಾಡಿದರು. ಮತ್ತೆ ರೈತರಿಗೆ ಆ ಜಮೀನುಗಳನ್ನು ಖರೀದಿ ಮಾಡಿಕೊಳ್ಳಬೇಡಿ ಎಂದು ಹೇಳಿದರು. ಜೋಡಿ ಗ್ರಾಮಗಳಲ್ಲಿ ದನಕರುಗಳಿಗೆ ಮೇಯುವುದಕ್ಕೋಸ್ಕರ ಇರುವ ಗೋಮಾಳಗಳನ್ನು ಪಕ್ಕದ ಊರಿನವರಿಗೋ ಅಥವಾ ಅದೇ ಊರಿನವರಿಗೋ ಮಾರುವುದಕ್ಕೆ ಪ್ರಾರಂಭ ಮಾಡಿ ದನಕರುಗಳಿಗೆ ಹುಲ್ಲು, ನೀರು ಸಿಕ್ಕದೆ ತೊಂದರೆಪಡುವಂತಾಗಿದೆ. ಜೋಡಿ ಗ್ರಾಮಗಳು ರದ್ದಾದರೆ ನಮಗೆ ಏನೂ ಸಿಕ್ಕುವುದಿಲ್ಲವೆಂದು ಆ ಗ್ರಾಮಗಳಲ್ಲಿದ್ದ ಮರಗಳನ್ನು ಕಡಿದುಹಾಕುವುದಕ್ಕೆ ಪ್ರಾರಂಭ ಮಾಡಿದರು. ಹೀಗೆ ನಾನಾ ವಿಧವಾಗಿ, ಕಿರುಕುಳ ಪ್ರಾರಂಭವಾದದ್ದು ಜೋಡಿದಾರರಿಂದಲೇ ಹೊರತು ರೈತರಿಂದ ನಿಜವಾಗಿಯೂ ಪ್ರಾರಂಭವಾಗಲಲ್ಲ. ಇನ್ನೊಂದು ವಿಷಯ ಗಮನಿಸಬೇಕು. ಅದೇನೆಂದರೆ ಜೋಡಿ ಗ್ರಾಮದ ಹಕ್ಕುಬಾಧ್ಯತೆಗಳು ಬಹಳ ಅನಿಶ್ಚಿತ. ಭೂ ಸುಧಾರಣಾ ಸಮಿತಿಯವರೂ ಹೇಳಿದ್ದಾರೆ. ಸಂಸ್ಥಾನದಲ್ಲರ ತಕ್ಕ 2,100 ಇನಾಂ ಗ್ರಾಮಗಳ ಪೈಕಿ 700 ಗ್ರಾಮಗಳಲ್ಲಿ ಮಾತ್ರ ಸರ್ವೆ ಸೆಟ್ಲ್‌ಮೆಂಟ್ ನಡೆದಿದೆ. 1,400 ಗ್ರಾಮಗಳಲ್ಲಿ ಸರ್ವೆ ಸೆಟ್ಲ್‌ಮೆಂಟ್ ಆಗಿಲ್ಲ. ಆ ಗ್ರಾಮಗಳಲ್ಲೇ ಮುಖ್ಯವಾಗಿ ಈ ಒಂದು ಹೋರಾಟ, ಕಡಿದಾಟ ಮೊದಲು ಪ್ರಾರಂಭವಾದದ್ದು. ಆ ಗ್ರಾಮಗಳ ಪರಿಸ್ಥಿತಿ ಇವತ್ತು ಯಾವ ವಿಧವಾಗಿದೆ ಎಂದರೆ ಆ ರೈತರ ಹಕ್ಕುಗಳು ಬಹಳ ಅನಿಶ್ಚಿತ. ಯಾವುದೊಂದು ದಾಖಲೆ ಕೂಡ ಆ ಗ್ರಾಮಗಳಲ್ಲಿ ಇರುವುದಿಲ್ಲ. 14-15 ನೇ ಅಕೌಂಟ್ಸ್ ಎಂದು ಇರುತ್ತದೆ. ಆ ಲೆಕ್ಕಗಳಲ್ಲಿ ರೈತರ ಮತ್ತು ಜೋಡಿದಾರರ ಹಕ್ಕುಬಾಧ್ಯತೆಗಳೆಲ್ಲಿ ವನ್ನೂ ನಮೂದಿಸಿರಬೇಕು. ಅಲ್ಲಿ ಪಜೀಲ, ಶ್ಯಾನುಭೋಗರು ಇರುವುದಿಲ್ಲ. ಅಮಲ್ದಾರರು ಮೇಲ್ವಿಚಾರಣೆ ನಡೆಸುವುದಿಲ್ಲ. ಆ ಊರಿಗೆ ಸಂಬಂಧಪಟ್ಟ ಜಮೀನಿನ ಹಕ್ಕುಬಾಧ್ಯತೆಗಳು, ಮರಗಳ ಮೇಲಿನ ಹಕ್ಕು ಇವುಗಳಿಗೆ ಸಂಬಂಧಪಟ್ಟ ಲೆಕ್ಕ ಇರುವುದಿಲ್ಲ; ಮತ್ತು ರೈತರುಗಳಿಗೆ ಯಾವ ವಿಧವಾದ ದಾಖಲೆಯನ್ನು ಕೂಡ ಜೋಡಿದಾರರು ಆ ಗ್ರಾಮಗಳಲ್ಲಿ ಕೊಟ್ಟಿರುವುದಿಲ್ಲ. ಅಷ್ಟೇ ಅಲ್ಲದೇ ಇನ್ನೂ ಏನೇನೂ ಮಾಡಿದ್ದಾರೆಂದರೆ, ಸಾಮಾನ್ಯವಾಗಿ ಜೋಡಿದಾರರು ವಿದ್ಯಾವಂತರು. ಅವರು ಆ ಗ್ರಾಮದಲ್ಲೇ ಇರುವುದಿಲ್ಲ; ಕೆಲವರು ಇರುತ್ತಾರೆ. ಅವರು ಏನು ಮಾಡಿದ್ದಾರೆಂದರೆ ರೈತರುಗಳಿಗೆ ರಶೀದಿ ಕೊಡುತ್ತಾರೆ, ಆದರೆ ಖಾಯಂ ರೈತ ಎಂಬುದಾಗಿ ರಿಜಿಸ್ಟರ್ ಮಾಡಿ ಕೊಡುವುದಿಲ್ಲ. ಖಾಲ್ ಕಾಗದದ ಮೇಲೆ ಕೊಡುವುದರಿಂದ ಅದು ಕೋರ್ಟಿನಲ್ಲಿ ನಿಲ್ಲುವುದಿಲ್ಲ. ಇನ್ನು ಕೆಲವು ಜೋಡಿದಾರರು ರೈತನಿಂದ ದುಡ್ಡು ತೆಗೆದುಕೊಂಡು ಅದಕ್ಕೆ ತಕ್ಕ ಕಾಗದ ಪತ್ರ ಮಾಡಿಕೊಡದೆ ನೀನೇ ಆ ಜಮೀನನ್ನು ವಂಶಪಾರಂಪರ್ಯವಾಗಿ ಅನುಭವಿಸು ಎಂದು ಹೇಳುವುದು ಈರೀತಿ ಎಲ್ಲಾ ಮಾಡಿದ್ದಾರೆ. ಕೆಲವು ಊರುಗಳಲ್ಲಿ ಕಂದಾಯ ಕೊಟ್ಟಿದ್ದರೂ ರಶೀದಿ ಕೊಡುವುದಿಲ್ಲ. ಉದಾಹರಣೆಗೆ ಕೋಲಾರದಲ್ಲಿ ಯರಂಗಟ್ಟ ಎಂಬ ಒಂದು ಜೋಡಿ ಗ್ರಾಮ ಇದೆ. ನಾನು ಅಲ್ಲಿಗೆ ಹೋಗಬೇಕಾದ ಪ್ರಮೇಯ ಬಿತ್ತು. ಆ ಸಮಯದಲ್ಲಿ ಜೋಡಿದಾರ ಒಂದು ದೂರು ಹೇಳಿದ. ಏನೆಂದರೆ ಕಾಲ ಬದಲಾಯಿಸಿ ಹೋಯಿತು, ರೈತರು ನಮ್ಮ ಮಾತು ಕೇಳುವುದಿಲ್ಲ. ಕಂದಾಯ ಕೊಟ್ಟಿದ್ದರೂ ರಶೀದಿ ಕೇಳುತ್ತಾರೆ ಎಂದ, ಅದರಲ್ಲಿ ತಪ್ಪೇನು ಎಂದು ಪರಿಶೀಲಿಸಿದ್ದಕ್ಕೆ ಜಮೀನು ಕೊಟ್ಟಿದ್ದೇವೆ, ಆಗಿನಿಂದಲೂ ಕಂದಾಯ ಕಟ್ಟುತ್ತಾರೆ, ಜಮೀನನು ಅನುಭವಿಸುತ್ತಾರೆ. ಅದಕ್ಕೆ ರಶೀದಿ ಏಕೆ ಕೊಡಬೇಕು ಎಂದು ಹೇಳಿದ. ಕಂದಾಯ ಕೊಟ್ಟಿದ್ದಕ್ಕೆ ರಶೀದಿ ಕೇಳಿದರೆ ಈರೀತಿ ಒಂದು ದೊಡ್ಡ ದೂರು ತಂದ. ಹೀಗೆ ರಶೀದಿ ಕೊಟ್ಟಿರುವುದಿಲ್ಲ. ಕೆಲವು ಊರುಗಳಲ್ಲಿ ಕೊಟ್ಟಿರುವ ಕಡೆ ಏನಾಗಿದೆ ಎಂದು ನೋಡೋಣ. ಇಷ್ಟನೇ ವರ್ಷಕ್ಕೆ ಕಂದಾಯ ಬಂದಿದೆ ಎಂಬುದಾಗಲೀ, ಇಂಥಾ ಜಮೀನು, ನಂಬರು, ಆಕಾರ ವಗೈರೆ ಆಗಲೀ, ಸಂಪೂರ್ಣವಾಗಿ ಆ ರಶೀದಿಯಲ್ಲಿ ಇರುವುದಿಲ್ಲ. 2ನೇ ವರ್ಷಕ್ಕೇ ರಶೀದಿ ಕೊಟ್ಟಿರುವುದಿಲ್ಲ ಮೂರನೇ ವರ್ಷಕ್ಕೆ ಫಸಲು, ಗುತ್ತಿಗೆ ಬಂದಿದೆ ಎಂದು ಬರೆದಿರುತ್ತಾರೆ. ಆದ್ದರಿಂದ 12 ವರ್ಷಕ್ಕೆ ಮೇಲ್ಪಟ್ಟು ಜಮೀನು ಕಂದಾಯ ಕೊಟ್ಟಿದ್ದೇವೆ ಎಂದು ಕೇಸು ಹಾಕಿರುವ ಸಂದರ್ಭ ತೋರಿ ಸೋಣವೆಂದರೆ ದಾಖಲೆ ಇರುವುದಿಲ್ಲ. ಈರೀತಿ ಜೋಡಿದಾರರು ರೈತರಿಂದ ಕಂದಾಯ ವಸೂಲು ಮಾಡುತ್ತಾ ಹೋಗಿರುತ್ತಾರೆ. ಈರೀತಿ ನಾನಾ ವಿಧವಾಗಿದೆ. ಹೀಗೆ ಜೋಡಿ ಗ್ರಾಮಗಳ ರೈತರ ಹಕ್ಕುಬಾಧ್ಯತೆಗಳು ಬಹಳ ಅನಿಶ್ಚಿತವಾಗಿದೆ. ಅವರಿಗೆ ಯಾವ ವಿಧವಾದ ದಾಖಲೆಯೂ ಇಲ್ಲ. ದೇಶದಲ್ಲಿ ಸ್ವಾತಂತ್ರ್ಯ ಬಂದಮೇಲೆ ಹೋರಾಟ ಪ್ರಾರಂಭವಾದದ್ದು ಜೋಡಿದಾರರಿಂದಲೇ ಹೊರತು ಜೋಡಿ ಗ್ರಾಮಗಳಲ್ಲಿರತಕ್ಕ ರೈತರಿಂದಲ್ಲ. ಜೋಡಿದಾರರು ಏನೇ ಮಾಡಿದರೂ, ಗರಾಜೆಯಾದ ಸಂದರ್ಭದಲ್ಲಿ ಆ ಊರಿನ ಮುಖಂಡರನ್ನು ಅಥವಾ ತಿಳಿದವರನ್ನು ಕೇಳಿ ರೈತರು ಕೆಲಸ ಮಾಡುತ್ತಾರೆಯೇ ವಿನಃ ಅವರು ಯಾವ ವಿಧವಾದ ಅನ್ಯಾಯವನ್ನೂ ಮಾಡಿಲ್ಲ. ಸರ್ಕಾರದವರು ಈ ಮೊದಲೇ ಜೋಡಿ ರೈತರಿಗೆ ರಕ್ಷಣೆ ಕೊಡೋಣವೆಂದು ಆ ಗ್ರಾಮಗಳಲ್ಲಿರುವ ತಕ್ಕ ಮರಗಳನ್ನು ಕಡಿಯದಂತೆಯೂ, ಜಮೀನು ಪರಭಾರೆ ಮಾಡದಂತೆಯೂ, ಗೋಮಾಳ ಮತ್ತು ರಿಸರ್ವ್ ಜಮೀನನ್ನು ಇತರರಿಗೆ ಕೊಡದಂತೆಯೂ ತಡೆಗಟ್ಟುವುದಕ್ಕಾಗಿ ಒಂದು ಕಾನೂನನ್ನು ತಂದಿರುವುದನ್ನು ನೋಡಿದರೆ ಜೋಡಿ ಗ್ರಾಮದ ರೈತರಿಗೆ ಎಷ್ಟುಮಟ್ಟಿನ ಕಿರುಕುಳ, ಅನ್ಯಾಯವಾಗುತ್ತಾ ಇತ್ತು ಎಂಬುದು ಅದರಿಂದಲೇ ಗೊತ್ತಾಗುತ್ತದೆ. ಇನಾಂ ಪದ್ಧತಿಯನ್ನು ರದ್ದು ಮಾಡಲು ತಂದಿರುವ ಮಸೂದೆಯಲ್ಲಿ ಒಂದು ವಿಷಯ ತಿಳಿಸಿದ್ದಾರೆ. ಅದೇನೆಂದರೆ 1948ನೇ ಇಸವಿ ಜುಲೈ ಒಂದನೇ ತಾರೀಖಿನ ಲಾಗಾಯ್ತು ಜೋಡಿದಾರರು ಅಥವಾ ಇನಾಂದಾರರು ಜಮೀನನ್ನು ಖಾಯಂ ಟೆನೆಂಟಿಗೆ ಕೊಟ್ಟಿದ್ದರೆ, ಆ ಜಮೀನನ್ನು ಡೆಪ್ಯುಟಿ ಕಮಿಷನರು ಪರಿಶೀಲಿಸಿ ತೀರ್ಮಾನ ಮಾಡಬಹುದೆಂದು ವಿಧಿಸಿದ್ದಾರೆ. ನಾನು ಹೇಳುವುದೇನೆಂದರೆ ಜೋಡಿ ಹೋಗುತ್ತದೆ

ಎಂಬ ಭಯದಿಂದ ಜೋಡಿ ಗ್ರಾಮಗಳು ರದ್ದಾಗುವುದಕ್ಕೆ ಮೊದಲೇ ಹೆಚ್ಚು ಲಾಭವನ್ನು ಪಡೆಯೋಣ ಎಂಬ ಉದ್ದೇಶದಿಂದ ಜೋಡಿದಾರರು 1946-47ನೇ ಇಸವಿಯಿಂದಲೇ ಅನೇಕ ಸಂದರ್ಭಗಳಲ್ಲಿ ಪರಭಾರೆ ಮಾಡುವುದಕ್ಕೆ ಪ್ರಾರಂಭ ಮಾಡಿರುವುದರಿಂದ 1948 ರಿಂದ ಹೊಸದಾಗಿ ಆಗಿರತಕ್ಕ ಖಾಯಂ ಟೆನೆಂಟ್ಸ್ ಅಷ್ಟೇ ಅಲ್ಲದೇ ಅದಕ್ಕಿಂತ ಹಿಂದೆ 2 ವರ್ಷದಲ್ಲಿ ಮಾಡಿರತಕ್ಕ ಪರಭಾರೆಗಳನ್ನೂ ಸೇರಿಸಿಕೊಂಡು ಅವುಗಳಿಗೂ ಮನ್ನಣೆ ಕೊಡಬಂತೆ ಮಾಡುವುದಕ್ಕೆ ಸೆಲೆಕ್ಟ್ ಸಮಿತಿಯವರು ಗಮನಿಸಬೇಕೆಂದು ಪ್ರಾರ್ಥಿಸುತ್ತೇನೆ. ಇಷ್ಟು ಹೊತ್ತು ಹೇಳಿದಹಾಗೆ ಈ ಕಾನೂನು ಬರುತ್ತದೆ ಎಂಬ ಉದ್ದೇಶದಿಂದ ಬಹಳ ಪರಭಾರೆಗಳಾಗಿವೆ. ಯಾವ ವಿಧವಾಗಿದೆ ಎಂಬುದನ್ನು ನೋಡಿದ್ದರಲ್ಲಿ ಆಗಲೇ ಹೇಳಿದಂತೆ ಆ ರೈತರಲ್ಲಿ ಯಾವ ಒಂದು ದಾಖಲೆಯೂ ಇರುವುದಿಲ್ಲ. ಬೇಕಾದಷ್ಟು ಅನ್ಯಾಯ ಅನೇಕ ಗ್ರಾಮಗಳಲ್ಲಿ ನಡೆದಿದೆ. ನಮ್ಮ ಮಾನ್ಯ ಮಿತ್ರರು ಒಂದು ವಿಧವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಜೋಡಿ ಗ್ರಾಮಗಳಲ್ಲಿ ಜೋಡಿ ರೈತರು ಅನುಭವಿಸುತ್ತಾ ಇರತಕ್ಕ ತೊಂದರೆ, ಕಷ್ಟ, ಕಾರ್ಪಣ್ಯ ಹೆಚ್ಚಾಗಿ ಅವರ ಗಮನಕ್ಕೆ ಬಂದಿಲ್ಲವೆಂದು ಕಾಣುತ್ತದೆ. ಈ ವಿಷಯ ಅವರಿಗೆ ನಿಜವಾಗಿಯೂ ಗೊತ್ತಿದ್ದರೆ ಅರೀತಿ ಹೇಳುತ್ತಿರಲಿಲ್ಲ. ರೈತರಿಗೆ ಬಹಳ ಅನ್ಯಾಯವಾಗುತ್ತಾ ಇದೆ. ಇದಕ್ಕೆ ಅನೇಕ ನಿದರ್ಶನಗಳಿವೆ. ಒಂದು ಉದಾಹರಣೆ ಹೇಳುವುದಾದರೆ ಬಂಗಾರಪೇಟೆ ತಾಲ್ಲೂಕಿನಲ್ಲಿ ಜೋಡಿ ಸೂರಿಗಾನಹಳ್ಳಿ ಎಂದು ಇದೆ. ಅಲ್ಲಿ ಒಬ್ಬ ಜೋಡಿದಾರರು ಇದ್ದಾರೆ. ಜೋಡಿ ನಮಸ್ಯೆಗೆ ಸಾಮಾನ್ಯವಾಗಿ ಒಂದು ಕೋಮುವಾರ ಬಣ್ಣವನ್ನು ಹಚ್ಚುತ್ತಾರೆ. ಅದು ತಪ್ಪು. ಅಲ್ಲಿ ಜೋಡಿದಾರರಾಗಿರತಕ್ಕವರು ಬ್ರಾಹ್ಮಣರಲ್ಲ. ಬೇರೆ ಜಾತಿಯವರು. ಈ ಸಭೆಯಲ್ಲಿ ಅವರ ಹೆಸರು ಹೇಳುವುದಕ್ಕೆ ನನಗೆ ಇಷ್ಟವಿಲ್ಲ. ಅಲ್ಲಿ ಏನಾಗಿದೆ ಎಂದರೆ ರೈತರು ಮನೆ ಕಟ್ಟಿಕೊಂಡಿದ್ದರು. ಅವರನ್ನು ಇವತ್ತು ಓಡಿಸಿ ಆ ಮನೆಗಳಲ್ಲಿ ದನ ಕರುಗಳನ್ನು ಕಟ್ಟಿಕೊಳ್ಳುತ್ತಾ ಇದ್ದಾರೆ. ಆ ರೈತರು ಪಕ್ಕದ ಹಳ್ಳಿಗೆ ಹೋಗಿ ವಾಸಮಾಡುತ್ತಾ ಇದ್ದಾರೆ. ಚಿನ್ನದ ಗಣಿ ಕೋರ್ಟಿನಲ್ಲಿ ಆ ರೈತರು ತಮ್ಮ ಮನೆಗಳಲ್ಲಿ ಶ್ರೀಗಂಧದ ಮರಗಳನ್ನಿಟ್ಟುಕೊಂಡಿದ್ದರೆಂದು ಅವರು ಕೇಸು ಹಾಕಿಸಿದ್ದರು. ಅದು ವಜಾ ಆಯಿತು. ಮನೆಗಳೆಲ್ಲಾ ಅವರ ಸ್ವಾಧೀನದಲ್ಲೇ ಇದೆ. ಅದನ್ನು ಅವರೇ ಇಟ್ಟುಕೊಂಡಿದ್ದರು.

ಆಮೇಲೆ ಇನ್ನೊಂದು ಗ್ರಾಮದ ವಿಷಯ ಹೇಳುತ್ತೇನೆ. ಮಾಲೂರು ತಾಲ್ಲೂಕಿನಲ್ಲಿ ಜೋಡಿ ಗಂಗಾಪುರ ಎಂದಿದೆ. ಅಲ್ಲಿ ರೈತರಿಗೆ ಆಗಿರತಕ್ಕ ಅನ್ಯಾಯ ಹೇಳತೀರದು. ಆ ಜೋಡಿದಾದರೂ ಬ್ರಾಹ್ಮಣರಲ್ಲ. ಆ ಊರಿನಲ್ಲಿ ಏನಾಗಿದೆಯೆಂದರೆ, ಅಲ್ಲಿನ ರೈತರು ಬೆಳೆಯನ್ನು ಇನ್ನೇನು ಕೈಗೆ ತೆಗೆದುಕೊಳ್ಳಬೇಕು ಎನ್ನುವ ಸಮಯದಲ್ಲಿ, ಆ ಜೋಡಿದಾರರು ತಮ್ಮ ಒಂದು ಗುಂಪನ್ನು ಕಟ್ಟಿಕೊಂಡು ಬಂದು—ಜೋಡಿದಾರರೆಂದರೆ ಅವರಿಗೆ ಸಹಾಯಕರಾಗಿ ಅವರ ಕೈಕೆಳಗೆ ಬೇಕಾದಷ್ಟು ದರೋಡೆಕಾರರು ಇರುತ್ತಾರೆ. ಈರೀತಿ ಹೊನ್ನಕೋಟೆ ಮುಂತಾದ ಕಡೆಗಳಿಂದ ಎಷ್ಟೋ ಜನರನ್ನು ಕರೆದುಕೊಂಡು ಬಂದು ಅಲ್ಲಿನ ಎಲ್ಲಾ ಬೆಳೆಗಳನ್ನೂ ಕೊಯ್ದುಕೊಂಡು ಹೊರಟುಹೋದರು. ಈ ವಿಚಾರದಲ್ಲಿ ಪೋಲೀಸಿನವರಿಗೂ ದೂರು ಕೊಟ್ಟಿದ್ದಾಯಿತು. ಆದರೆ ಪೋಲೀಸಿನವರು ಬಂದು ತನಿಖೆಮಾಡಿ investigation ಮಾಡುವಷ್ಟರಲ್ಲಿ ಬೆಂಗಳೂರಿಗೆ ಜೋಡಿದಾರರು ಬಂದು ರಾಯರೊಬ್ಬರನ್ನಿಟ್ಟು ಆ ಜೋಡಿ ಗ್ರಾಮದಲ್ಲಿದ್ದುದೆಲ್ಲಾ ಜೋಡಿದಾರರದೇ ಎಂದು ಹೇಳಿ ಒಂದು temporary injunction ಕೂಡ ತಂದರು. ಈ ರೀತಿಯಾಗಿ ಬೆಳೆ ಕೈಗೆ ಬರುತ್ತದೆನ್ನುವಷ್ಟರಲ್ಲಿ ಹೀಗೆಲ್ಲಾ ಆಗಿ, ಅದೂ ಇಂಥಾ ಕಷ್ಟಕಾಲದಲ್ಲಿ ಎಷ್ಟು ಕಷ್ಟಕ್ಕೆ ಒಳಗಾಗಬೇಕಾಯಿತೆಂಬುದನ್ನು ದಯವಿಟ್ಟು ತಾವು ಗಮನಿಸಬೇಕೆಂದು ಪ್ರಾರ್ಥಿಸುತ್ತೇನೆ.

ಇಷ್ಟು ವಿಷಯವನ್ನು ಹೇಳಿ ಈ ಬಿಲ್ಲಿನ ವಿಷಯಗಳನ್ನು ಸ್ವಲ್ಪಮಟ್ಟಿಗೆ ನಾನು ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ಈ ಮಸೂದೆಯ ಪ್ರಕಾರ ಪರಿಹಾರವನ್ನು ಕೊಡುವುದರಲ್ಲಿ Basic annual sum ಎಂಬುದನ್ನು ಕಂಡು ಹಿಡಿದುಕೊಂಡು ಅದರ ಆಧಾರದ ಮೇಲೆ, ಒಟ್ಟು ಆದಾಯ ಸಾವಿರವಾಗುವ ಪಕ್ಷಕ್ಕೆ 25 ರಷ್ಟನ್ನೂ, ಮೂರು ಸಾವಿರದವರೆಗೂ ಇರುವ ಹಾಗಿದ್ದರೆ 20 ರಷ್ಟನ್ನೂ 2,000 ಕ್ಕೆ ಮೇಲ್ಪಟ್ಟಿದ್ದರೆ 15 ರಷ್ಟು ಅಥವಾ 60,000 ರೂಪಾಯಿಗಳಲ್ಲಿ ಯಾವುದು ಹೆಚ್ಚಾಗಿದ್ದರೆ ಅದನ್ನು ಜೋಡಿದಾರರುಗಳಿಗೇ ಕೊಡಬೇಕೆಂದು ಹೇಳಿದ್ದಾರೆ. ಹಾಗೆಯೇ permanent tenant ಮತ್ತು quasi permanent tenant ಗಳು ಜೋಡಿದಾರರಿಗೆ ಕೊಡಬೇಕಾದ ಬೆಲೆಯನ್ನೂ ಕೂಡ ಜೋಡಿ ರೈತರಿಂದ annual income ಎಷ್ಟಿತ್ತೋ ಅದಕ್ಕೆ 10ರಷ್ಟು ಎಂದು ಗೊತ್ತುಮಾಡಿದ್ದಾರೆ. ಇದನ್ನೆಲ್ಲಾ ನೋಡಿದರೆ ಶ್ರೀವರ್ಮಾ ರಂಗರಾಮಯ್ಯನವರು ಹೇಳಿದಂತೆ ಜೋಡಿದಾರರುಗಳಿಗೆ ಪರಿಹಾರವನ್ನು ಬಹಳ ಉದಾರವಾಗಿಯೇ ಕೊಟ್ಟಿದ್ದಾರೆಂದು ಹೇಳಬಹುದು : ಅದನ್ನು ಇನ್ನೂ ಸ್ವಲ್ಪ ಉದಾರವಾಗಿ ಮಾಡಬೇಕೆಂದು ಅವರು ತಮ್ಮ ಭಾಷಣದಲ್ಲಿ ತಿಳಿಸಿದರು. ಆಮೇಲೆ ಸರ್ವೆ ಮತ್ತು ಸೆಟಲ್‌ಮೆಂಟ್ ಆಗಿರತಕ್ಕ ಗ್ರಾಮಗಳಲ್ಲಿ ಈ basic annual income ಎನ್ನುವುದನ್ನು gross assessment ಮೇಲೆ ಗೊತ್ತುಮಾಡಬೇಕೆಂದು ಹೇಳಿದ್ದಾರೆ. ಇಲ್ಲ gross assessment ಎನ್ನುವುದು ಏನೆಂಬುದು ಸರಿಯಾಗಿ ಅರ್ಥವಾಗುವುದಿಲ್ಲ. ಬಹುಶಃ ಇದು ಗ್ರಾಮದ ಆದಾಯಕ್ಕೆ ಅನ್ವಯಿಸಬಹುದು. ಈ ಪ್ರಕಾರ gross income ಎಂದು ಭಾವಿಸುವುದಾದರೆ ಅದು ಬಹಳ ಹೆಚ್ಚಿನ ಹಣವಾಗುತ್ತದೆ. ಇದರಲ್ಲೇನೂ ಜೋಡಿ ಗ್ರಾಮದ Reserved lands, Religious institutions ಗಳಿಗೆ ಸೇರಿದ ಜಮೀನುಗಳೂ ಜೋಡಿದಾರರಿಗೆ ಸೇರಬೇಕೆಂದು ಎಲ್ಲಿಯೂ ಹೇಳದೆ ಇದ್ದರೂ, ಈ ಎಲ್ಲಾ ಜಮೀನುಗಳನ್ನೂ ಸೇರಿಸಿಕೊಂಡು gross income ರೀತ್ಯಾ ಅದರ ಮೇಲೆ 20ರಷ್ಟು 15 ರಷ್ಟು, ಎಂದೆಲ್ಲಾ ಪರಿಹಾರ ಕೊಡುವುದೆಂದರೆ ಬಹಳ ಹೆಚ್ಚಿನ ಹಣವಾಗುತ್ತದೆ. ಸೆಲೆಕ್ಟ್ ಸಮಿತಿಯವರ ಈ ಅಂಶವನ್ನೂ ಗಮನಿಸಬೇಕೆಂದು ಹೇಳುತ್ತೇನೆ.

ಇನ್ನೊಂದು ಅಂಶವೇನೆಂದರೆ, ಇದರಲ್ಲಿ ಕೇವಲ annual basic sum ಮಾತ್ರ ಎಂದೂ ಹೇಳಿಲ್ಲ. ಆದಕ್ಕೆ ಅಮರಾಯಿ, ಅರಣ್ಯದಿಂದ ಬರತಕ್ಕ ಸಂಪಾದನೆ ಮರಗಳು, ಹಿಡುವಳಿ, ಸುವರ್ಣಾದಾಯ—ಇವೆಲ್ಲಾ ಸೇರಬೇಕೆಂದು ಹೇಳಿದ್ದಾರೆ. ಅದೂ ಸೇರುವುದು ಒಂದು ವರ್ಷದಲ್ಲಿ ಹತ್ತು ವರ್ಷದ ಅರಣ್ಯದ ಆದಾಯ, 5 ವರ್ಷದ ಅಮರಾಯಿ, ಆದಮೇಲೆ ಎಷ್ಟು ಭಾರಿ ಮೊಬಲಗಾಯಿತು ನೋಡಿ!! ಇಷ್ಟೇ ಅಲ್ಲ; ಸರ್ವೆ ಮತ್ತು ಸೆಟಲ್‌ಮೆಂಟ್ ಯಾವ ಗ್ರಾಮಗಳಿಗೆ ಅನ್ವಯಿಸಿಲ್ಲವೋ ಆ ಗ್ರಾಮಗಳ ಸಂಬಂಧದಲ್ಲಿ, ಇನ್ನಾ ಸೆಟಲ್‌ಮೆಂಟ್ ಸಂದರ್ಭದಲ್ಲಿ ಆ ಗ್ರಾಮದ ಆದಾಯ ಎಷ್ಟು ಎಂದು ಗೊತ್ತುಮಾಡಲಾಗಿತ್ತೋ ಅದಕ್ಕೆ $1\frac{1}{2}$ ಯಷ್ಟು ಎಂದು ಆದಾಯ ಪರಿಗಣಿಸಬೇ

(ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.)

ಕೆಂದು ಹೇಳಿದ್ದಾರೆ. ಇದಕ್ಕೂ ಯಥಾ ಪ್ರಕಾರ ಅಮರಾಯ್ಕ, ಅರಣ್ಯ ಮುಂತಾದುವುಗಳ ವರಮಾನ ಸೇರುತ್ತೆ. ಈ ಹಣದಮೇಲೆ 25 ರಷ್ಟು, 20ರಷ್ಟು ಪರಿಹಾರವೆಂದು ಮತ್ತೂ ಹೆಚ್ಚಾಗುತ್ತದೆ.

ಈ ರೀತಿಯಾಗಿ ಪ್ರತಿಯೊಂದು ವಿಧದಲ್ಲೂ ಪರಿಹಾರವನ್ನು ಹೆಚ್ಚು ಹೆಚ್ಚಿಗೆ ಕೊಡುವಂತೆ ಮಾಡಿರುವುದನ್ನು ನೋಡಿದರೆ ಬಹುಶಃ ಈ ಮಸೂದೆಯನ್ನು ಕೇವಲ ಜೋಡಿದಾರರ ದೃಷ್ಟಿಯಿಂದಲೇ ಮಾಡಿರುವಂತೆ ಕಾಣುತ್ತದೆ. ಈ ರೀತಿಯಾಗಿ ಶಿಫಾರಸುಮಾಡಿದ ಭೂಸುಧಾರಣಾ ಸಮಿತಿಯಲ್ಲಿ ಜೋಡಿದಾರರೇ ಸಾಮಾನ್ಯವಾಗಿ ಹೆಚ್ಚಾಗಿದ್ದು ರೈತರ ಪರವಾಗಿರುವವರು ಅಷ್ಟಾಗಿ ಇರಲಿಲ್ಲವೆಂದು ಕಾಣುತ್ತೆ.

ಅದೇನೇ ಇರಲಿ, ಶ್ರೀ ರಂಗರಾಮಯ್ಯನವರು ಹೇಳಿದಂತೆ ಇಲ್ಲ ಪರಿಹಾರವನ್ನು ಕೊಟ್ಟಿರುವುದು ಬಾಕಿ ಎಲ್ಲಾ ಕಡೆಗಳಿಗಿಂತಲೂ ಜಾಸ್ತಿಯಾಗಿಯೇ ಇದೆ. ಮುಖ್ಯವಾಗಿ ಈ ಇನಾಂ ಗ್ರಾಮಗಳು ಜೋಡಿದಾರರುಗಳಿಗೆ ಹೇಗೆ ಬಂತೆಂಬುದನ್ನು ಶ್ರೀ ಗೋವಿಂದರೆಡ್ಡಿಯವರು ಬಹಳ ಚೆನ್ನಾಗಿ ಹೇಳಿದ್ದಾರೆ. ಪೂರ್ಣಯ್ಯನವರ ಕಾಲದಲ್ಲೋ ಟಿಪ್ಪು ಸುರ್ತಾ ಕಾಲದಲ್ಲೋ ಇಲ್ಲವೇ ಮಾಗಡಿ ಕೆಂಪೇಗೌಡನ ಕಾಲದಲ್ಲೋ ಸರ್ಕಾರದವರು ಈ ಜೋಡಿಗಳನ್ನೆಲ್ಲಾ ಕೇವಲ ಅಲ್ಪ ಕಾರಣಗಳಿಗಾಗಿ ಕೊಟ್ಟಿದ್ದಾರೆ. ಯಾವನೋ ನತ್ಯ ಕೊಟ್ಟಿದ್ದಕ್ಕೆ, ಒಂದು ಸಂಗೀತ ಕಚೇರಿ ಕಟ್ಟಿಕೊಂಡು ಕಾಣಿದಾಡಿದ್ದಕ್ಕೆ—ಈ ರೀತಿಯಾಗಿ ಅಲ್ಪ ಕಾರಣಗಳಿಗಾಗಿ ಜಮೀನುಗಳನ್ನು ಕೊಟ್ಟಿರುತ್ತಾರೆ. ಅಷ್ಟೇ ಹೊರತು ಏನೋ ಬಹಳ ಕಷ್ಟಪಟ್ಟು ಕೆಲಸಮಾಡಿ ಜಮೀನನ್ನು ಉತ್ಪತ್ತಿಮಾಡಿ ಇಟ್ಟುಕೊಂಡಿದ್ದರೆ ಅಂಥವರಿಗೆ ಜಮೀನು ಹೋಗುತ್ತದೆಂದು ಹೇಳಿದರೆ ಏನಾದರೂ ನ್ಯಾಯಾದ ಪರಿಹಾರ ಕೊಡಿ ಎಂದು ಹೇಳುವುದು ನ್ಯಾಯವೆಂದು ಭಾವಿಸಬಹುದು. ಹಾಗೇನೂ ಇಲ್ಲದಿರುವ ಸಂದರ್ಭದಲ್ಲಿ ಅವರಿಗೆ ಇಷ್ಟು ದೊಡ್ಡ ನಿಧಿ ಕೊಡಬೇಕೆಂದು ಹೇಳಿರುವುದು ಬಹಳ ಅನ್ಯಾಯ.

ಮತ್ತು ಜೋಡಿಗ್ರಾಮದ ರೈತರಿಂದ ವಸೂಲಾಗುವ ವಿಷಯದಲ್ಲೂ ಕೂಡ ಅವರಿಂದ ತಾವೇ ಹೆಚ್ಚು ಹಣ ವಸೂಲ ಮಾಡಿಕೊಳ್ಳುವ ಏರ್ಪಾಡನ್ನು ಮಾಡಿದ್ದಾರೆ. Quasi permanent tenants ಎಂದು ಹೇಳಿದ್ದರೂ ಅವರು ಎಷ್ಟು ವರ್ಷದಿಂದ ಮಾಡುತ್ತಿರುತ್ತಾರೆ? ಅದಕ್ಕೆ ಅವರಲ್ಲಿ ದಾಖಲೆಗಳಿರುವುದಿಲ್ಲ. ಆಥವರಿಂದಲೂ 10 ವರ್ಷಗಳ net income ವಸೂಲು ಮಾಡಬೇಕೆಂದು ಹೇಳಿದ್ದಾರೆ. ಆ ಮೇಲೆ permanent tenant ಗಳ ವಿಷಯದಲ್ಲೂ ಅವರು 10 ವರ್ಷಗಳ ಕಂದಾಯ ಕೊಡಬೇಕೆಂದು ಹೇಳಿದ್ದಾರೆ. ಅವರು ಎಷ್ಟೋ ವರ್ಷಗಳಿಂದ ಆ ಜಮೀನನ್ನು ಉಳುಮೆಮಾಡಿ ಬೇಸಾಯಮಾಡಿ ಫಲವತ್ತಾಗಿ ಮಾಡಿಕೊಂಡಿದ್ದರೆ ಅವನೂ ಇಷ್ಟು ಹಣವನ್ನು ಸರ್ಕಾರಕ್ಕೆ ಕೊಡಬೇಕೆನ್ನುವುದು ಬಹಳ ಅನ್ಯಾಯ. ರೈತರುಗಳಿಗೆ ಇದರಿಂದ ಬಹಳ ತೊಂದರೆಯಾಗುತ್ತದೆ. ಇದನ್ನು ಇನ್ನೂ ಕಡಿಮೆಮಾಡಬೇಕೆಂದು ನನ್ನ ಪ್ರಾರ್ಥನೆ.

ಈ ಸಂದರ್ಭದಲ್ಲಿ ಇಂಡಿಯಾದೇಶದ ಇತರ ಪ್ರಾಂತ್ಯಗಳಲ್ಲಿ ಹೇಗೆ ಪರಿಹಾರವನ್ನು ಸೂಚಿಸಿದ್ದಾರೆಂಬುದನ್ನು ತಾವು ಸ್ವಲ್ಪ ಯೋಚನೆಮಾಡಬೇಕು. ಉತ್ತರ ಪ್ರದೇಶದಲ್ಲಿ net income ನ ಕೇವಲ 8ರಷ್ಟು ಎಂದು ಹೇಳಿದ್ದಾರೆ. ಬೀಹಾರಿನಲ್ಲಿ ಒಂದು graded ಸ್ಕೇಲ್ ರೀತಿಯಲ್ಲಿ ಪರಿಹಾರವನ್ನು ನಿಗದಿಮಾಡಿದ್ದಾರೆ. ಅದರಂತೆ 50 ರೂಪಾಯಿನಷ್ಟಿದ್ದರೆ 20ರಷ್ಟು ಪರಿಹಾರವನ್ನೂ, ಅವಕ್ಕೆ ಜಾಸ್ತಿಯಿದ್ದರೆ ಸ್ಕೇಲ್ ಪ್ರಕಾರ ಇಷ್ಟಿಷ್ಟು ಕೊಡಬೇಕೆಂದು ಹೇಳಿ ಕೊನೆಯಲ್ಲಿ ಲಕ್ಷದಷ್ಟು ಆದಾಯವಿದ್ದರೆ ಕೇವಲ 3% ಮಾತ್ರ ಪರಿಹಾರ ಕೊಡಬೇಕೆಂದು ಹೇಳಿದ್ದಾರೆ.

ಒಬ್ಬ ಸದಸ್ಯರು.—ಕಾಶ್ಮೀರದಲ್ಲಿ?

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ಕಾಶ್ಮೀರದಲ್ಲಿ ಆ ಪರಿಹಾರದ ಪ್ರಶ್ನೆಯೇ ಬಂದಿಲ್ಲ. ಮುಂದೇನಾದರೂ ಆ ಪ್ರಶ್ನೆ ಬಂದರೆ ಆಗ್ಗೆ ಯೋಚನೆಮಾಡೋಣ ಎಂದು ಹೇಳಿದ್ದಾರೆ. ಈಗ ಅಲ್ಲಿ ರಾಜ್ಯಾಂಗ ಸಭೆ ಸೇರುತ್ತದೆ. ಆ ಸಭೆಯವರು ಪರಿಹಾರಕೊಡಬೇಕೆಂದು ಹೇಳುತ್ತಾರೋ ಅಥವ ಏನನ್ನೂ ಕೊಡುವುದು ಬೇಡವೆಂದು ಹೇಳುತ್ತಾರೋ ಗೊತ್ತಿಲ್ಲ. ಹೀಗೆ ಜೋಡಿದಾರರು ಈಗಾಗಲೇ ಅನ್ಯಾಯದಿಂದಲೂ ಅಧರ್ಮದಿಂದಲೂ ಬೇಕಾದಷ್ಟು ಆದಾಯವನ್ನು ಪಡೆದಿದ್ದಾರೆ. ಹೀಗಿದ್ದರೂ ಇಷ್ಟೊಂದು ಹಣವನ್ನು ರೈತರು ಕೊಡಬೇಕೆಂದು ಮಾಡಿರುವುದು ಬಹಳ ಅನ್ಯಾಯವೆಂದು ಹೇಳಬೇಕಾಗಿದೆ.

ಇದರಲ್ಲಿ ಇನ್ನೊಂದು ವಿಷಯವಿದೆ. ಅದೇನೆಂದರೆ, ಜೋಡಿ ಇನಾಂ ಗ್ರಾಮಗಳಲ್ಲಿರತಕ್ಕ ದೇವಸ್ಥಾನಗಳು, ಛತ್ರಗಳು, ಇಂತಹ ಮತಧರ್ಮ ಸಂಸ್ಥೆಗಳಿಗೆ ಸಂಬಂಧಪಟ್ಟ ಜಮೀನುಗಳನ್ನು ಇನಾಂದಾರರ ಹೆಸರಿಗೆ ರಿಜಿಸ್ಟರು ಮಾಡಬೇಕೆಂದು ವಿಧಾಯಕಮಾಡಿದ್ದಾರೆ. ಯಾವ ಕಾರಣದಿಂದ ಹೀಗೆ ಮಾಡಿದ್ದಾರೋ ಗೊತ್ತಿಲ್ಲ. ಕೆಲವರು ದೇವಸ್ಥಾನ ಮುಂತಾದ ಧರ್ಮ ಸಂಸ್ಥೆಗಳಿಗಾಗಿ ಸ್ವಲ್ಪ ಹಣವನ್ನು ಆಗಾಗ ಕೊಡುತ್ತಾ ಇರಬಹುದು. ಜಮೀನ್ದಾರ ಅಥವಾ ಇನಾಂದಾರನನ್ನೂ ಅಂತಹ ಸಂಸ್ಥೆಗಳಿಗೆ ಸೇರಿದ ಜಮೀನಿಗೆ occupants ಆಗಿ ರಿಜಿಸ್ಟರ್ ಮಾಡಬೇಕೆಂದು ಹೇಳಿದೆ. ಆದರೆ ಆ ದೇವಸ್ಥಾನ ಅಥವಾ ಧರ್ಮ ಸಂಸ್ಥೆಗಳ ಜೀರ್ಣೋದ್ಧಾರ ಮತ್ತು ಆವಾದು ಖರ್ಚಿಗೆ ಸರ್ಕಾರದವರು ಹಣ ಕೊಡಬೇಕೆಂದು ಹೇಳಿದೆ. ಇದರಿಂದ ಅನ್ಯಾಯವಾಗುತ್ತದೆ. ಈ ವಿಚಾರವನ್ನೂ ಸೆಲೆಕ್ಟ್ ಕಮಿಟಿಯವರು ಸರಿಪಡಿಸಬೇಕೆಂದು ಪ್ರಾರ್ಥಿಸುತ್ತೇನೆ.

ಆ ಮೇಲೆ ಖಾಸ್ ಜಮೀನೆಂದು ಇನಾಂದಾರರುಗಳ ಸ್ವಂತ ಜಮೀನಿಗೆ ಸಂಬಂಧಪಟ್ಟ ವಿಚಾರ. ಇದಕ್ಕೆ ಯಾವುದು ಖಾಸಾ ಜಮೀನು ಎಂಬುದು ಅರ್ಥವಾಗುವುದಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಇನಾಂದಾರರು ಎಲ್ಲವೂ ಖಾಸ್ ಜಮೀನೆಂದು ಹೇಳಿದರೆ, ಅಲ್ಲ ಎಂದು ಹೇಳುವುದಕ್ಕೆ ಕಷ್ಟವಾಗುತ್ತದೆ. ಏಕೆಂದರೆ, ಯಾವುದೂ ಅದಕ್ಕೆ ದಾಖಲೆಗಳಿರುವುದಿಲ್ಲ. ನಾನು ಆಗಲೇ ಹೇಳಿದ ಹಾಗೆ ರಶೀತಿಗಳೂ ಕಾಗದಪತ್ರಗಳೂ ಯಾವುದೂ ಇರುವುದಿಲ್ಲ. ಆದ್ದರಿಂದ ಅವರು ಗೋವಾಳ ಅಥವಾ ಬೇರೆ ಜಮೀನು ಎಲ್ಲವೂ ತಮ್ಮದೇ ಎಂದು ಹೇಳಿದರೂ ಅಲ್ಲವೆಂದು ಹೇಳುವುದಕ್ಕೆ ಕಷ್ಟವಾಗುತ್ತದೆ.

ಡೆಪ್ಯುಟಿ ಕಮಿಷನರ ತೀರ್ಮಾನದ ಮೇಲೆ ಅಪೀಲು ಮಾಡಬೇಕಾದ Special Tribunal ಎಂದುಮಾಡಿದೆ. ಈ ಕೆಲಸಕ್ಕಾಗಿ ನೇಮಕವಾಗಿರುವವರು ಸರಿಯಾಗಿ ವಿಚಾರಣೆ ನಡೆಸಲು ಸ್ಥಳ ಪರಿಶೀಲನೆ ಮಾಡಬೇಕು. ಸ್ಥಳಕ್ಕೆ ಹೋಗಿ ಜನರಿಂದ ವಿಚಾರಗಳನ್ನು ಸರಿಯಾಗಿ ತಿಳಿದುಕೊಂಡು, ವಿಚಾರವಿನಿಮಯ ಮಾಡಿ ಪ್ರತಿಯೊಂದು ಅಂಶವನ್ನು ಕೂಲಂಕಷವಾಗಿ ಪರಿಶೀಲನೆಮಾಡಿ ಆಮೇಲೆ ತೀರ್ಮಾನಮಾಡುವುದು ಅವಶ್ಯಕ. ಇಷ್ಟು ವಿಷಯಗಳನ್ನು ಹೇಳಿ ಈ ಮಸೂದೆಯನ್ನು ಸ್ವಾಗತಿಸುತ್ತೇನೆ. ಇದರಲ್ಲಿ ಆಗಬೇಕಾಗಿರುವ ಬದಲಾವಣೆಗಳನ್ನು ಸೆಲೆಕ್ಟ್ ಕಮಿಟಿಯವರು

ದಯೆಯಿಟ್ಟು ಮಾಡಬೇಕೆಂದು ಕೋರುತ್ತೇನೆ. ಅಲ್ಲದೆ ಈ ಕಾನೂನು ಅದಷ್ಟು ಜಾಗ್ರತೆ ಜಾಗೆ ಬರುವುದು ಅವಶ್ಯಕ. ಬಹಳ ದಿನಗಳ ಹಿಂದೆಯೇ ಇದು ಜಾರಿಗೆ ಬರಬೇಕಾಗಿತ್ತು. ಕಾರಣಾಂತರಗಳಿಂದ ನಿಧಾನವಾಯಿತು. ಶ್ರೀಮಾನ್ ಜೋಯಿಸರು ಹೇಳಿದ ಹಾಗೆ ನಿಧಾನವಾದಷ್ಟೂ ಅನ್ಯಾಯವಾಗುತ್ತದೆ. ಈಗಾಗಲೇ ಈ ವಿಚಾರದಲ್ಲಿ ಕೋರ್ಟುಗಳಲ್ಲಿ ಮೊಕದ್ದಮೆಗಳು ನಡೆಯುತ್ತಿವೆ ಇದಕ್ಕೆ ಏನುಮಾಡಬೇಕೆಂಬುದನ್ನೂ ಸರ್ಕಾರದವರು ಯೋಚನೆಮಾಡುವುದು ಒಳ್ಳೆಯದೆಂದು ಹೇಳಿ ಮುಕ್ತಾಯಮಾಡುತ್ತೇನೆ.

Mr. SPEAKER.—The House is adjourned for lunch half an hour.

The Assembly adjourned for lunch at Thirty-Seven Minutes past Three of the Clock and reassembled at Ten Minutes past Four of the Clock, Mr. Speaker (The Hon'ble Sri V. Venkatappa) in the Chair.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು:—(ಚಿತ್ರದುರ್ಗ ಜಿಲ್ಲೆ).—ಮಾನ್ಯ ಅಧ್ಯಕ್ಷರೆ, ಈಗ ಸಭೆಯ ಮುಂದೆ ಚರ್ಚೆಗೆ ಬಂದಿರತಕ್ಕ ಕಾನೂನಿನ ವಿಷಯದಲ್ಲಿ ಈಗಾಗಲೇ ಮಾನ್ಯ ಸದಸ್ಯರುಗಳು ಅನೇಕ ವಿಚಾರಗಳನ್ನು ತಿಳಿಸಿದ್ದಾರೆ ಆದುದರಿಂದ ನಾನು ಹೇಳುವುದರಲ್ಲಿ ಹೊಸದೇನೂ ಕಂಡುಬರಲಾರದು, ಇದುವರೆಗೂ ಮಾತನಾಡಿದ ಸದಸ್ಯರೆಲ್ಲರೂ ಸರ್ವಾನುಮತದಿಂದ ಈ ಕಾನೂನನ್ನು ಸ್ವಾಗತಿಸಿರುತ್ತಾರೆ. ನಾನಾದರೂ ಇಂತಹ ಉತ್ತಮವಾದ ಮತ್ತು ದೇಶಹಿತಸಾಧಕವಾದ ಕಾನೂನನ್ನು ಸರ್ಕಾರದವರು ಧೈರ್ಯಮಾಡಿ ಸಭೆಯ ಮುಂದೆ ಮುಂಡಿಸಿದುದಕ್ಕಾಗಿ ಅವರನ್ನು ನಾನು ಹೊಟ್ಟೆಪೊದಲು ಅಭಿನಂದಿಸತಕ್ಕದ್ದು ನನ್ನ ಮುಖ್ಯ ಕರ್ತವ್ಯವಾಗಿದೆ. ನಮ್ಮ ಸಂಸ್ಥಾನದಲ್ಲಿ ಇತರೆ ಕಡೆಗಳಲ್ಲಿರುವ ಹಾಗೆ ಭಾರಿ ಭೂಪ್ರದೇಶಗಳನ್ನೊಳಗೊಂಡಿರುವ ಜಹಗೀರ್ ಗಳಿಲ್ಲ. ಎಲ್ಲು ದೊಡ್ಡ ಜಹಗೀರುಗಳನ್ನು ಬಿಟ್ಟರೆ ಬಿಕ್ಕವು ನಣ್ಣನಣ್ಣ ಗ್ರಾಮಗಳೇ. ಆದರೆ ಒಡಳಿತ ದೃಷ್ಟಿಯಲ್ಲಿ ರಾಜ್ಯದಲ್ಲಿ ಒಳರಾಜ್ಯಗಳಿರುವಂತೆ ಅವು ನಡೆದುಕೊಂಡು ಬರುತ್ತಿವೆ. ಸರ್ಕಾರದವರು ಇಲ್ಲಿ ತಮ್ಮ ಆಡಳಿತಕ್ಕೊಳಪಟ್ಟಿರುವ ಗ್ರಾಮಗಳಿಗೆ ಲಕ್ಷ್ಯ ಕೊಡುತ್ತಿರುವಂತೆ ಈ ಗ್ರಾಮಗಳಿಗೆ ಕೊಡುತ್ತಿಲ್ಲ. ಜೋಡೀ ಜಹಗೀರು ಗ್ರಾಮಗಳಲ್ಲಿರತಕ್ಕ ಜನರು ಆಯಾಯ ಜೋಡಿದಾರರ ಅಥವಾ ಜಹಗೀರುದಾರರ ಅಧೀನದಲ್ಲಿರುತ್ತಾರೆ. ಹೀಗಾಗಿ ಅನೇಕ ಕಡೆ ಜೋಡೀ ಮತ್ತು ಜಹಗೀರುದಾರರ ಅಲಕ್ಷೆಯಿಂದ ಅವರ ಗ್ರಾಮಗಳ್ಳರತಕ್ಕ ನಿವಾಸಿಗಳ ಯೋಗಕ್ಷೇಮಗಳನ್ನು ನೋಡಿಕೊಳ್ಳುವವರೇ ಇರುವುದಿಲ್ಲ. ಆ ಜೋಡಿ ಮತ್ತು ಜಹಗೀರು ಗ್ರಾಮಗಳ ಸ್ಥಿತಿಗತಿಗಳು ಸರ್ಕಾರಿ ಗ್ರಾಮಗಳ ರೀತಿನೀತಿಗಳಿಗೆ ಸಮನಾಗಿರುವುದು ಅಪರೂಪ. ಆ ಗ್ರಾಮಗಳಲ್ಲಿ ತಕ್ಕ ಪಾಠಶಾಲೆಗಳ ವ್ಯವಸ್ಥೆಯಿರುವುದಿಲ್ಲ; ಸರಿಯಾದ ರಸ್ತೆಗಳಿರುವುದಿಲ್ಲ; ಗ್ರಾಮಾಭಿವೃದ್ಧಿ ಕೆಲಸಕಾರ್ಯಗಳು ನಡೆಯುವುದಿಲ್ಲ. ಒಂದು ವೇಳೆ ಜೋಡಿದಾರರು ತಮ್ಮ ಜೋಡಿ ಗ್ರಾಮದಲ್ಲೇ ವಾಸವಾಗಿರದೆ ಎಲ್ಲಿಯೋ ಇದ್ದರೆ ಅವುಗಳು ಇನ್ನೂ ಹೀನಸ್ಥಿತಿಗೆ ಬರುತ್ತವೆ. ಹೀಗೆ ದಿನೇ ದಿನೇ ಆ ಗ್ರಾಮಗಳು ಹೀನಸ್ಥಿತಿಗೆ ಬರುತ್ತಿರುವುದನ್ನು ತಪ್ಪಿಸಬೇಕೆಂದು ಎಷ್ಟೋ ಒತ್ತಾಯಗಳು ಪದೇ ಪದೇ ಬಂದುದರಿಂದ ಹಿಂದಿದ್ದ ಸರ್ಕಾರದವರು ಈ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ಕೈಕೊಂಡಿದ್ದರು. ಈಗ ಸುಮಾರು 15-16 ವರ್ಷಗಳ ಕೆಳಗೆ ನಾನೂ ಮತ್ತು ಈಗಿನ ಮಾನ್ಯ ಮುಖ್ಯ ಮುಂತ್ರಿಗಳಾದ ಶ್ರೀಮಾನ್ ಕೆ ಚೆಂಗಲರಾಯರೆಡ್ಡಿಯವರೂ ಶಾಸನಸಭೆಯ ಸದಸ್ಯರಾಗಿದ್ದೆವು. ಆ ಕಾಲದಲ್ಲಿ ನಡೆದ ಒಂದು ನಂಗತಿಯನ್ನು ಈ ಸಭೆಯವರ ಗಮನಕ್ಕೆ ತರಬಯಸುತ್ತೇನೆ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಾವು ಹೇಳತಕ್ಕದ್ದು 1933ನೆಯ ಇಸವಿಯ ವಿಚಾರ.

ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು.—ಹೌದು 1935ನೆಯ ಇಸವಿಯಲ್ಲಿ ಈ ಜೋಡಿ ಜಹಗೀರು ಗ್ರಾಮಗಳ ಸ್ಥಿತಿಗತಿಗಳನ್ನುತ್ತಮಪಡಿಸಲು ಸಲಹೆ ಕೊಡಲು ಒಂದು ಸಮಿತಿಯನ್ನು ಏರ್ಪಡಿಸಿದ್ದರು. ಶ್ರೀ ಹಿರಣ್ಣಯ್ಯನವರು ಆ ಸಮಿತಿಯ ಅಧ್ಯಕ್ಷರಾಗಿದ್ದರು. ನಾನು ಮತ್ತು ಶ್ರೀ ಕೆ. ಚೆಂಗಲರಾಯರೆಡ್ಡಿಯವರಿಬ್ಬರೂ ಅದರಲ್ಲಿ ಖಾಸಗೀ ಸದಸ್ಯರಾಗಿದ್ದೆವು. ಆಗ್ಗೆ ನಾವುಗಳು ಬೆಂಗಳೂರು, ಕೋಲಾರ ಮತ್ತು ಮೈಸೂರು ಜಿಲ್ಲೆಗಳಲ್ಲಿ ಸಂಚಾರ ಮಾಡಿ ಅನೇಕ ಇನಾಂ ಗ್ರಾಮಗಳನ್ನು ಖುದ್ದಾಗಿ ಪರಿಶೀಲಿಸಿದೆವು, ಆಗಲೇ ಜೋಡಿ ಜಹಗೀರುಗಳನ್ನು ತೆಗೆದುಹಾಕುವುದೇ ಉತ್ತಮವಾದುದೆಂದು ನನ್ನ ಅಭಿಪ್ರಾಯವಾಗಿತ್ತು. ಆದರೆ ಅದು ಆಗ ಸಾಧ್ಯವಾಗಲಿಲ್ಲ. ಸರ್ಕಾರಕ್ಕೆ ಒಪ್ಪಿಸಿದ ವರದಿಯಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಸೂಚಿಸಿದ್ದಾಯಿತೇ ವಿನಾ ಅಷ್ಟು ಉದಾರ ಭಾವನೆಯಿಂದ ಉತ್ತಮ ದರ್ಜೆಯ ಸುಧಾರಣೆಗಳು ಹೊರಪಡಲಿಲ್ಲ. ಆದರೆ ಕಾಂಗ್ರೆಸ್ ಸರ್ಕಾರಗಳು ಅಧಿಕಾರಕ್ಕೆ ಬಂದಮೇಲೆ ರಾಜ್ಯದಲ್ಲಿ ಒಳರಾಜ್ಯಗಳಿರಬಾರದು, ಇದು ದೇಶಾಭಿವೃದ್ಧಿಗೆ ಸಹಕಾರಿಯಲ್ಲವೆಂಬ ತತ್ವಾಧಾರದ ಮೇಲೆ ಅವುಗಳೆಲ್ಲವನ್ನೂ ಒಟ್ಟುಗೂಡಿಸಿರತಕ್ಕ ಅಂಶವು ತಮಗೆಲ್ಲರಿಗೂ ಗೊತ್ತಿರುವುದೇ ಆಗಿದೆ. ನಮ್ಮ ಸಂಸ್ಥಾನದಲ್ಲಿ 1948ನೆಯ ಇಸವಿಯಲ್ಲಿ ಎಲ್ಲಾ ಅಂಶಗಳನ್ನೂ ಪರಿಶೀಲಿಸಲು ಶ್ರೀ ಎಚ್. ಬಿ. ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಏರ್ಪಡಿಸಲಾಯಿತು. ಆ ಸಮಿತಿಯವರು ದೀರ್ಘವಾಗಿ ಆಲೋಚಿಸಿ ಈ ಇನಾಂ ಮತ್ತು ಜೋಡಿ, ಜಹಗೀರುಗಳೆಲ್ಲಾ ವಜಾ ಮಾಡಬೇಕೆಂದು ಸಲಹೆ ಮಾಡಿ ಸರ್ಕಾರಕ್ಕೆ ವರದಿಯನ್ನು ಒಪ್ಪಿಸಿದ್ದಾರೆ. ಅವರ ಸಲಹೆ ಮೇರೆಗೆ ಸರ್ಕಾರದವರು ಈ ಮಸೂದೆಯನ್ನು ರಚಿಸಿ ಸಭೆಯ ಮುಂದೆ ತಂದಿರುತ್ತಾರೆ. ಇದಕ್ಕಾಗಿ ನಾನು ಮಾನ್ಯ ಮಂತ್ರಿಗಳನ್ನು ಮನಃಪೂರ್ವಕವಾಗಿ ವಂದಿಸುತ್ತೇನೆ. ಹಿಂದೆ 1935ರಲ್ಲಿ ನಾನು ಏನು ಮಾಡಬೇಕೆಂದು ಆಶಿಸಿದ್ದೆನೊ ಅದು ಈಗ ಕಾರ್ಯರೂಪಕ್ಕೆ ಬಂದುದಕ್ಕಾಗಿ ತುಂಬಾ ಸಂತೋಷಿಸುತ್ತೇನೆ. ಮತ್ತು ಈ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

ಇನ್ನು ಇನಾಂ ಜೋಡಿಗ್ರಾಮಗಳನ್ನು ವಜಾಮಾಡಿದರೆ ಪರಿಹಾರವನ್ನು ಯಾವ ದರದಲ್ಲಿ ಕೊಡಬೇಕು, ಯಾವ ಆಧಾರದಮೇರೆ ಕೊಡಬೇಕು, ಯಾವ ರೂಪದಲ್ಲಿ ಕೊಡಬೇಕು ಎಂಬೀ ವಿಚಾರಗಳ ಬಗ್ಗೆ ಕೆಲವು ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಭಾರತ ರಾಜ್ಯಾಂಗದ ಕಾನೂನಿನಲ್ಲಯೇ ಹೀಗೆ ಯಾವುದಾದರೂ ಭೂಭಾಗಗಳನ್ನು ಸರ್ಕಾರದವರು ತೆಗೆದುಕೊಂಡರೆ ಆ ಬಗ್ಗೆ ಪರಿಹಾರ ದ್ರವ್ಯವನ್ನು ಕೊಡಲೇಬೇಕೆಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಆದುದರಿಂದ ಈ ಮಸೂದೆ ಸೆಲೆಕ್ಟ್ ಸಮಿತಿಯವರ ಮುಂದೆ ಹೋದಾಗ ಅವರು ಈ ವಿಷಯವನ್ನು ಕೂಲಂಕಷವಾಗಿ ಏಮರ್ಶೆ ಮಾಡಬೇಕಾಗಿದೆ.

ಈ ಕಾನೂನಿನಿಂದ ಯಾರಿಗೂ ಏನೂ ತೊಂದರೆಯಾಗುವುದಿಲ್ಲ, ಎಲ್ಲರಿಗೂ ಒಳ್ಳೆಯದೇ ಆಗುತ್ತದೆ.

(ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು).

ಕೆಲವು ಇನಾಂದಾರರು ರೈತರ ವಿಷಯದಲ್ಲಿ ಬಹಳ ಚೆನ್ನಾಗಿ ವರ್ತಿಸುತ್ತಿದ್ದಾರೆ. ಉದಾಹರಣೆಗೆ ಉಡುಗಳ್ಳಿಯಲ್ಲಿರುವ ಶ್ರೀ ಕೃಷ್ಣಯ್ಯಂಗಾರ್ಯರೂ ಮತ್ತು ಅಲ್ಲಿನ ರೈತರೂ ಸದಸ್ಯರ ಸಹಕಾರದಿಂದ ನಡೆದುಕೊಳ್ಳುತ್ತಿದ್ದಾರೆ. ಆದರೆ ಇನಾಂದಾರರಿಗೂ ರೈತರಿಗೂ ಅನ್ಯೋನ್ಯತೆ ಇಲ್ಲದಿರುವ ಸಂದರ್ಭಗಳೇ ಹೆಚ್ಚು. ಇನಾಂ ಗ್ರಾಮಗಳಲ್ಲಿ ಸರ್ವೆ ಇಲ್ಲವಾಗಿದ್ದರಿಂದ ಆಗುವ ತೊಂದರೆ ಹೇಳತೀರದು. ಸರ್ವೆ ಆಗದಿರುವ ಇನಾಂ ಗ್ರಾಮಗಳು ಬಹಳವಾಗಿವೆ. ಹಾಗೆ ಸರ್ವೆ ಆಗದೇ ಇರುವುದರಿಂದ ಅಲ್ಲಿರತಕ್ಕ ರೈತರಿಗೆ ಮತ್ತು ಇನಾಂದಾರರಿಗೆ ವ್ಯಾಜ್ಯ ವ್ಯವಹಾರಗಳು ತಾನಾಗಿಯೇ ಹುಟ್ಟುತ್ತವೆ. ಸರ್ಕಾರಿ ಗ್ರಾಮಗಳಲ್ಲಿರತಕ್ಕ ಯಾವ ವ್ಯವಸ್ಥೆಯೂ ಇನಾಂ ಗ್ರಾಮಗಳಲ್ಲಿರುವುದಿಲ್ಲ, ಆಗ ಇನಾಂಗ್ರಾಮಗಳ ರೈತರು ತಾವು ಎಷ್ಟೇ ಖದೀಂ ರೈತನಾಗಿದ್ದಾಗ್ಯೂ, ಜೋಡೀದಾರರಮೇರೆ ಕೋರ್ಟಿನಲ್ಲಿ ವ್ಯಾಜ್ಯ ಹೂಡಿದರೆ ಗೆಲ್ಲುವುದಕ್ಕೆ ಆಗುವುದಿಲ್ಲ. ಹೀಗೆ ಹತ್ತಾರು ಕೇಸುಗಳಲ್ಲಿ ಆಗಿರುವುದನ್ನು ನಾನೇ ಖುದ್ದಾಗಿ ನೋಡಿದ್ದೇನೆ. ಕಾರಣವೇನೆಂದರೆ ಅವರಿಗೆ ರಹೀತಿಗಳಿರುವುದಿಲ್ಲ; ಕಂದಾಯದ ಪಟ್ಟಿಗಳಿರುವುದಿಲ್ಲ. R. R. ದಾಖಲಾತಿಗಳಿರುವುದಿಲ್ಲ, ಊರಿನ ಜನಗಳೇನಾದರೂ ಬಂದು ಸಾಕ್ಷಿ ಹೇಳಿದರೆ ಅವರೆಲ್ಲರೂ ಒಂದು ಗುಂಪಿಗೆ ಸೇರಿದವರಾದ್ದರಿಂದ ಅವರ ಸಾಕ್ಷಿತ್ವಕ್ಕೆ ಬೆಲೆ ಸಿಗುವುದಿಲ್ಲ. ಹೀಗಾಗಿ ಕೇಸುಗಳೆಲ್ಲಾ ವಜಾ ಆಗಿ ಹೋಗುತ್ತವೆ. ಹಾಲಿ ಸರ್ಕಾರಿ ಗ್ರಾಮಗಳಲ್ಲಿರುವ ರೈತರು ಅಭಿವೃದ್ಧಿಹೊಂದುತ್ತಿರುವಂತೆ, ಇನಾಂ ಮತ್ತು ಜೋಡಿ ಗ್ರಾಮಗಳಲ್ಲಿರುವ ರೈತರು ಯಾವ ಅನುಕೂಲವನ್ನೂ ಹೊಂದಿರುವುದಿಲ್ಲ. ಒಂದು ದೇಶದಲ್ಲಿಯೇ ಈ ರೀತಿಯ ವ್ಯತ್ಯಾಸಗಳಿರುವುದು ಸರಿಯಲ್ಲ. ಸರ್ಕಾರಿ ಗ್ರಾಮಗಳು ಹೇಗೆ ಅಭಿವೃದ್ಧಿಹೊಂದುತ್ತಿವೆಯೋ ಅದೇರೀತಿ ಈ ಗ್ರಾಮಗಳೂ ಅಭಿವೃದ್ಧಿಹೊಂದಬೇಕಾದುದು ಅಗತ್ಯ. ಆದುದರಿಂದ ಈ ಕಾನೂನಿಗೆ ನಾನು ಮನಃಪೂರ್ವಕವಾಗಿ ಸ್ವಾಗತ ನೀಡುತ್ತೇನೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ—ನಿಮ್ಮಿ ಪಂಗಡ).—ಅಧ್ಯಕ್ಷ ಮಹಾಶಯರೇ, ಈ ಮಸೂದಾ ಕಾನೂನನ್ನು ತಂದಿರುವ ಮಾನ್ಯ ಮಂತ್ರಿಗಳಿಗೆ ಬಹಳ ಸ್ವಾಗತವನ್ನು ನೀಡುತ್ತೇನೆ, ಅವರು ಒಂದು ಹೆಜ್ಜೆ ಮುಂದಿಟ್ಟು ಇನಾಂ ಗ್ರಾಮಗಳನ್ನು ವಜಾ ಮಾಡಲು ಒಂದು ಮಸೂದೆಯನ್ನು ತಂದಿದ್ದಾರೆ, ಅದೇನೋ ಸರಿಯೆ, ಆದರೆ ಇದರ ಜೊತೆಗೆ ವಂಶಪಾರಂಪರ್ಯವಾಗಿ ಬಂದಿರುವ ಪಟೇಲ ಶ್ಯಾನುಭೋಗರ ಹಕ್ಕನ್ನು ತೆಗೆಯಲು ವ್ಯವಸ್ಥೆ ಮಾಡಿದ್ದರೆ ಚೆನ್ನಾಗಿತ್ತು,

ಶ್ರೀ ಎಂ. ವಿ. ಕೃಷ್ಣಪ್ಪನವರು.—ಅದು ಸಂರ್ಕ್ಷಿಪ್ತ ಆದ ಮೇಲೆ.

ಶ್ರೀ ಟಿ. ಹನುಮಯ್ಯನವರು.—ಆ ವಿಚಾರ ಹಾಗಿರಲಿ, ನನಗೆ ತಿಳಿದ ಮಟ್ಟಿಗೆ ಇನಾಂ ಎಂದರೆ ಬಹು ಮಾನವೆಂದು ಅರ್ಥವಾಗುತ್ತದೆ, ರಾಜ ಮಹಾರಾಜರುಗಳು ಯಾವುದೋ ಒಂದು ಕಾರಣದಿಂದ ಕೆಲವು ಗ್ರಾಮಗಳನ್ನು ಬಹುಮಾನವಾಗಿ ಕೆಲವರ ವಶದಲ್ಲಿ ಬಿಟ್ಟಿದ್ದಾರೆ. ಇಂಡಿಯಾ ದೇಶದಲ್ಲಿ ಅನೇಕ ಸಣ್ಣಸಣ್ಣ ರಾಜರು ಇರುವಹಾಗೆ ಜೋಡಿದಾರರೂ ನಮ್ಮ ದೇಶದಲ್ಲಿದ್ದಾರೆ. ದಿವಂಗತ ಸರ್ದಾರ್ ಪಟೇಲರು ಸಣ್ಣಸಣ್ಣ ರಾಜರನ್ನು ತೆಗೆದು ಬಿಟ್ಟು ಅವರಿಗೆ ಪೆನ್‌ಷನ್ ಕೊಟ್ಟರು. ಆದರೆ ಹಿಂದೆ ಇನಾಂ ಗ್ರಾಮಗಳನ್ನು ಜೋಡಿದಾರರಿಗೂ ಮತ್ತು ಜಹಗೀರುದಾರರಿಗೂ ಕೊಟ್ಟಿರುವ ಉದ್ದೇಶ ಆ ಗ್ರಾಮಗಳಲ್ಲಿ ಬರುವ ಕಂದಾಯ ವಗೈರೆ ಉತ್ಪತ್ತಿಯನ್ನು ಉಪಯೋಗಿಸಿಕೊಂಡು ಜೀವನ ನಡೆಸಬೇಕು ಎಂದು ನನಗೆ ತಿಳಿದು ಬರುತ್ತದೆ. ಏಕೆಂದರೆ ಈಗ ದೇಶದಲ್ಲಿರುವ ರಾಜರಿಗೆ ಅಲ್ಲಿಯ ಜಮೀನಿನ ಹಕ್ಕು ಬಾಧ್ಯತೆಯಿದ್ದರೂ ಕೂಡ ಪ್ರಜೆಗಳಿಗೂ ಸಹ ಹೆಚ್ಚಿನ ಹಕ್ಕು ಬಾಧ್ಯತೆ ಇರುತ್ತದೆ ಎಂದು ಹೇಳಬೇಕಾಗಿದೆ. ಜೋಡೀದಾರರಿಗೆ ಇನಾಂ ಗ್ರಾಮದಿಂದ ವರ್ಷವರ್ಷ ಬೇಕಾದಷ್ಟು ಆದಾಯ ಬರುತ್ತಿತ್ತು. ಆ ಆದಾಯದಿಂದಲೇ ಅವರು ಇದುವರೆಗೆ ಬೇಕಾದಷ್ಟು ಸುಖ ಸಂತೋಷದಿಂದ ಬಾಳಿದ್ದಾರೆ ಅಷ್ಟೇ ಅಲ್ಲದೆ ಜೋಡಿ ಗ್ರಾಮದಲ್ಲಿರುವ ರೈತರಿಗಿಂತ ಬಹಳ ತೊಂದರೆಯಾಗಿದೆ. ಏಕೆಂದರೆ ಪಕ್ಕದ ಗ್ರಾಮಗಳಲ್ಲಿರುವವರಿಗೆ ಏನು ಒಂದು ಸ್ವಾತಂತ್ರ್ಯವಿರುತ್ತದೊ ಆ ಸ್ವಾತಂತ್ರ್ಯ ಜೋಡಿ ಗ್ರಾಮಗಳಲ್ಲಿರುವ ರೈತರಿಗೆ ಇಲ್ಲ ಎಂದು ಹೇಳಬೇಕಾಗಿದೆ. ಇನಾಂ ಗ್ರಾಮಗಳಲ್ಲಿರುವ ರೈತರು ಕಂದಾಯವನ್ನು ಸರ್ಕಾರಕ್ಕೆ ಕೊಡುತ್ತಿಲ್ಲ, ಜೋಡಿದಾರರಿಗೂ ಮತ್ತು ಜಹಗೀರುದಾರರಿಗೂ ಕೊಡುತ್ತಿದ್ದಾರೆ. ಅವರು 500 ರೂಪಾಯಿಗಳ ಕಂದಾಯ ಕೊಟ್ಟರೂ ಈಗ ಅವರಿಗೆ ಓಟು ಕೊಡುವ ಹಕ್ಕಿಲ್ಲ. ನಮ್ಮ ಜಿಲ್ಲೆಯಲ್ಲಿ ಕಂದಾಯ ಕೊಡುವ ಕೆಲವು ರೈತರಿಗೆ ಓಟಿನ ಹಕ್ಕಿದೆ, ಅವರು ಓಟು ಕೊಡುತ್ತಾರೆ ಎಂದು 1945ರಲ್ಲಿ ನಾನು ಭಾವಿಸಿದ್ದೆ. ಆದರೆ ಓಟು ಕೊಡುವ ಸ್ಥಳಕ್ಕೆ ಬಂದು ನೋಡಿದಾಗ 50 ರೂಪಾಯಿಗಳ ಕಂದಾಯ ಕೊಡುವ ರೈತರಿಗೆ ಕೂಡ ಓಟು ಕೊಡುವ ಹಕ್ಕಿರಲಿಲ್ಲ. ಅದನ್ನು ನೋಡಿ ಬಹಳ ಆಶ್ಚರ್ಯವಾಯಿತು. ಒಂದೇ ದೇಶದಲ್ಲಿ ಇಷ್ಟು ವ್ಯತ್ಯಾಸವಿರುವುದನ್ನು ನೋಡಿ ಬಹಳ ವ್ಯಸನವಾಯಿತು. ಇಷ್ಟೇ ಅಲ್ಲದೆ ನಿಜವಾಗಿಯೂ ನೋಡಿದರೆ ಜೋಡಿಗ್ರಾಮದಲ್ಲಿರುವ ರೈತರಿಗೆ ತುಂಬಾ ಕಷ್ಟವಿತ್ತು. ಸರ್ಕಾರದಿಂದ ಅವರಿಗೆ ಒಂದು ಬಾವಿ ಅಥವಾ ಕೆರೆ ಪಡೆಯಲು ಅವಕಾಶವಿರಲಿಲ್ಲ ಮತ್ತು ಸರ್ಕಾರಿ ಪಟೇಲ ಶ್ಯಾನುಭೋಗರು ಅಥವಾ ಅಧಿಕಾರಿಗಳು ಇನಾಂ ಗ್ರಾಮಗಳಿಗೆ ಹೋಗಿ ಅಲ್ಲಿನವರ ಕಷ್ಟ ಸುಖಗಳನ್ನು ಕೇಳುವುದಕ್ಕೆ ಕೂಡ ಅವಕಾಶವಿರಲಿಲ್ಲ. ಇದನ್ನು ನೋಡಿದರೆ ತುಂಬಾ ವ್ಯಸನವಾಗುತ್ತದೆ. ಆದ್ದರಿಂದ ಸರ್ಕಾರದವರು ಧೈರ್ಯಮಾಡಿ ಈ ಮಸೂದೆಯನ್ನು ತಂದು ರೈತರಿಗೆ ಅನುಕೂಲ ಮಾಡಬೇಕೆಂದಿದ್ದಾರೆ.

ಇನ್ನೊಂದು ವಿಷಯ, ಈಗ ನುಮಾರು 10–12 ವರ್ಷಗಳು ಒಬ್ಬ ಒಂದು ಜಮೀನಿಗೆ ಕಂದಾಯ ಕೊಟ್ಟರೆ ಸಾಮಾನ್ಯವಾಗಿ ಆ ಜಮೀನು ಹಕ್ಕು ಆ ರೈತನಿಗೆ ಬರುತ್ತದೆ ಎಂದು ರೆವೆನ್ಯೂ ಕೋಡಿನಲ್ಲಿ ಹೇಳಿದೆ, ಆದರೆ ಈ ಇನಾಂ ಗ್ರಾಮ ಮತ್ತು ಜೋಡಿಗ್ರಾಮಗಳಲ್ಲಿ 25 ರಿಂದ 50 ವರ್ಷಗಳವರೆಗೆ ಜಮೀನು ಮಾಡಿದರೂಕೂಡ ಮಾಡಿದವರಿಗೆ ಯಾವ ಹಕ್ಕು ಬಾಧ್ಯತೆಯೂ ಸಹ ಈ ದಿವಸದವರೆಗೆ ಬಂದಿರುವುದಿಲ್ಲ. ಹಾಗಿರುವಾಗ ಈ ದಿವಸ ಸರ್ಕಾರದವರು ಮುಂದೆ ಬಂದು ಆ ಜಮೀನುಗಳಿಗೆ ಪರಿಹಾರ ಕೊಟ್ಟು ಅವನ್ನು ಕೊಂಡು ರೈತರಿಗೆ ಕೊಡಬೇಕೆಂದು ಹೇಳಿದರೆ ಬಹಳ ಕಷ್ಟವಾಗುತ್ತದೆ, ಏಕೆಂದರೆ ಈಗ ಬಡ್ಜೆಟ್ 38 ಲಕ್ಷ ರೂಪಾಯಿಗಳವರೆಗೆ ಕಡಮೆಯಾಗಿರುವುದರಿಂದ ಆ ಜಮೀನನ್ನು ಕೊಂಡು ಪುನಃ ರೈತರಿಗೆ ಕೊಡಬೇಕೆಂದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಸರ್ದಾರ್ ವಲ್ಲಭಾಯಿ ಪಟೇಲರು ಯಾವ ರೀತಿ ರಾಜರುಗಳನ್ನು ಕಿತ್ತುಹಾಕಿ ಪೆನ್‌ಷನ್ ಕೊಟ್ಟರೋ ಹಾಗೆಯೇ ಇನಾಂದಾರರಿಗೂ ಕೂಡ ಹೆಚ್ಚಿನ ಮಟ್ಟದಲ್ಲಿ ಜೀವನ ನಡೆಸುವುದಕ್ಕೆ ತಕ್ಕಷ್ಟು ಪೆನ್‌ಷನ್ ರೂಪವಾಗಿ ಹಣ ಕೊಟ್ಟರೆ ಸಾಕೆಂದು ಮಾನ

ನದಸ್ಯರಲ್ಲಿ ಹೇಳಬೇಕಾಗಿದೆ, ಪರಿಹಾರ ಬೇರೆ ಬೇಕಾಗಿಲ್ಲ.

ಶ್ರೀ ಎಚ್. ಸಿದ್ದವೀರಪ್ಪನವರು.—ಅದನ್ನು ವಂಶ ಪಾರಂಪರ್ಯವಾಗಿ ಕೊಡಬೇಕೆ?

ಶ್ರೀ ಟಿ. ಹನುಮಯ್ಯನವರು.—ಹೌದು, ಏಕೆಂದರೆ ಜಮೀನು ಹಕ್ಕು ಬಾಧ್ಯತೆಯು ಸರ್ಕಾರಕ್ಕೆ ಸೇರುತ್ತದೆ ಅಲ್ಲದೆ ಜಮೀನಿನಲ್ಲಿರುವ ಜಲ, ತರು, ಪಾಷಾಣ, ವಜ್ರ, ವೈಢೂರ್ಯ ಮೊದಲಾದುವುಗಳ ವಿಶಿಷ್ಟ ಹಕ್ಕೂ ಕೂಡ ಸರ್ಕಾರಕ್ಕೇ ಸೇರಿರುತ್ತದೆ ಎಂದು ರಿಜಿಸ್ಟರು ಮಾಡುವ ಪತ್ರದಲ್ಲೂ ಸಹ ಬರೆದಿರುತ್ತಾರೆ. ಅನೇಕ ಜಮೀನುಗಳಿಗೆ ಒಂದಕ್ಕೆ ಹತ್ತರಷ್ಟು ಬೆಲೆಯಾಗಿದೆ. ಇಷ್ಟುದಿವಸ ಜೋಡಿದಾರರ ಕೈಕೆಳಗೆ ರೈತರು ಕಿರುಕುಳ ಅನುಭವಿಸುತ್ತಿದ್ದರು. ಈ ದಿವಸ ಸರ್ಕಾರದವರು ಜೋಡೀದಾರರಿಂದ ಜಮೀನನ್ನು ಕೊಂಡು ಪುನಃ ವಾಪಸು ಅವರಿಗೆ ಖರೀದಿಗೆ ಕೊಡುವುದೆಂದರೆ ಬಹಳ ಕಷ್ಟಪರಿಸ್ಥಿತಿ ಬರುತ್ತದೆ ಎಂಬುದು ನನ್ನ ಭಾವನೆ. ಆದ್ದರಿಂದ ಸರ್ಕಾರದವರು ಪಾನನಿರೋಧವನ್ನು ಜಾರಿಗೆ ತಂದಿರುವಂತೆ ಇದನ್ನು ಮಾಡದೆ ಮೈಸೂರು ದೇಶದ ಎಲ್ಲಾ ಜಿಲ್ಲೆಗಳಲ್ಲೂ ತಕ್ಷಣ ಒಂದೇಸಲ ಇನಾಂ ಜಮೀನುಗಳನ್ನೆಲ್ಲಾ ತೆಗೆದುಕೊಳ್ಳುವುದಕ್ಕೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ಭಾವಿಸುತ್ತೇನೆ. ಇತರ ವಿಚಾರಗಳನ್ನು ಮಾನ್ಯ ಸದಸ್ಯರು ಆಗಲೇ ಹೇಳಿದ್ದಾರೆ. ಅದನ್ನು ಪುನಃ ಹೇಳಿದರೆ ಅದು ರುಚಿಸುವುದಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳಿಗೆ ಮತ್ತೊಂದುಸಾರಿವಂದಿಸಿ ಈ ಮಸೂದಾ ಕಾನೂನನ್ನು ಜಾಗ್ರತೆ ಜಾರಿಗೆ ತರುತ್ತಾರೆಂದು ಅಭಿಪ್ರಾಯ ಪಡುತ್ತೇನೆ.

ಶ್ರೀ ಬಿ. ಎಸ್. ಬೋರಣ್ಣಗೌಡರು (ಹಾನನ ಬಿಲ್ಲೆ).—ಸ್ವಾಮಿ, ಈ ಮಸೂದೆಯು ಇನ್ನೂ ಮೊದಲೇ ಬರಬೇಕಾಗಿತ್ತು, ಬಹಳ ತಡವಾಗಿ ಈಗತಾನೆ ಬಂದಿದೆ. ನನ್ನ ಮಾನ್ಯ ಮಿತ್ರರು ಈ ವಿಚಾರದಲ್ಲಿ ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ಅದನ್ನೇ ಪುನಃ ತಿಳಿಸುವುದಕ್ಕೆ ಇಷ್ಟಪಡುವುದಿಲ್ಲ. ಇನಾಂ ಪದ್ಧತಿ ಜಾರಿಗೆ ಬಂದಮೇಲೆ ಇನಾಂದಾರರಿಗೂ ರೈತರಿಗೂ ಇರುವ ಬಾಂಧವ್ಯ ಕೆಲವು ಕಡೆ ಚೆನ್ನಾಗಿವೆ, ಇನ್ನು ಕೆಲವು ಕಡೆ ಚೆನ್ನಾಗಿಲ್ಲ. ಈಗ ಈ ತಿಕ್ಕಾಟದಲ್ಲಿ ಮಧ್ಯೆ ಪ್ರವೇಶವಾಡಿ ಅವರವರಿಗೆ ಒಂದು ಸೌಹಾರ್ದ ಕಲ್ಪನೆಯಾಗಬೇಕೆಂಬುದಕ್ಕೆ ಅವಕಾಶವಿಲ್ಲ. ಈಗ ತಂದಿರುವ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಇನಾಂ ಪದ್ಧತಿ ಕೆಲವು ಕಡೆ ಕೆಲವು ರೀತಿಯಾಗಿದೆ. ಒಂದು ಕಡೆ ಖಾಯಂ ಚೆನ್ನಾರಿದೆ, ಇನ್ನೊಂದುಕಡೆ ಅದಿಲ್ಲ. ಎಷ್ಟು ದಿವಸಗಳ ಹಿಂದೆ ಇನಾಂ ಕೊಟ್ಟದ್ದಾರೆಂಬುದು ಗೊತ್ತಿಲ್ಲ. ಈ ವರ್ಷ ಈ ಜಮೀನು ಸಾಗುಮಾಡಿ ಇಷ್ಟು ಗುತ್ತಿಗೆ ಕೊಡಬೇಕು, ಇದೇ ಬೆಳೆ ಬೆಳೆಯಬೇಕು, ಕಬ್ಬು ಹಾಕಬೇಕೆಂದರೆ ಬೇಡ ಬತ್ತ ಬೆಳೆಯಬೇಕು ಎಂದು ಈ ರೀತಿಯಾಗಿ ಒತ್ತಾಯಮಾಡಿ ರೈತರಿಗೆ ಜಮೀನನ್ನು ವಹಿಸಿ ಆದಾಯ ಪಡೆದುಕೊಂಡಿರುವ ನಿದರ್ಶನಗಳು ಬೇಕಾದಷ್ಟಿವೆ.

ಈಗ ಸರ್ವೆ ಸೆಟ್ಲ್‌ಮೆಂಟ್ ಆಗಿರತಕ್ಕ 600 ಚಿಲ್ಲರೆ ಗ್ರಾಮಗಳಲ್ಲಿ ಒಂದು ಸಂಪ್ರದಾಯಕವಾದ ಅನುಕೂಲ ಇರಬಹುದು. ಇಂತಿಂಥಾ ಜಮೀನು ಇಂತಿಂಥಾವರದು ಎಂಬುದಾಗಿ ಇರಬಹುದು. ಬಾಕಿ ಗ್ರಾಮಗಳಲ್ಲಿ ಅದೂ ಇಲ್ಲ. ಒಂದು ಗ್ರಾಮದಲ್ಲಿ ಒಬ್ಬನ ಹತ್ತಿರ ಎಷ್ಟೆಷ್ಟು ಜಮೀನಿದೆ ಎಂಬುದು ಗೊತ್ತಿಲ್ಲ. ಈ ವರ್ಷ ಒಂದು ಜಮೀನು ಮಾಡುತ್ತಿರುವವನು ಮುಂದಿನ ವರ್ಷ ಇನ್ನೊಂದು ಜಮೀನು ಮಾಡುತ್ತಿರುತ್ತಾನೆ. ಹೀಗಾಗಿ ಪರಿಸ್ಥಿತಿ ಒಂದೊಂದು ಕಡೆ ಒಂದೊಂದು ರೀತಿಯಾಗಿದೆ. ಒಂದೊಂದು ಊರಿನಲ್ಲಿ ಸಾವಿರಾರು ಎಕರೆ ಜಮೀನು ಇರುವ ಕಡೆ ನಾಲ್ಕಾರು ಜನ ಪಾಲುದಾರರು ಇರಬಹುದು ಅಥವಾ 10 ಜನ ಪಾಲುದಾರರಿರಬಹುದು. ಅವರು ಸರಿಯಾಗಿ ಜಮೀನು ಸಾಗುವಳಿ ಮಾಡುವುದಿಲ್ಲ. ಅಂಥಾ ಊರಿನಲ್ಲಿ ರೈತ ಯಾರು, ಯಾರು ಜಮೀನು ಮಾಡುತ್ತಾರೆ ಎನ್ನುವುದೇ ಗೊತ್ತಾಗುವುದಿಲ್ಲ. ಹೀಗಿರುವಾಗ ಒಂದು ತೊಂದರೆ ಬರುತ್ತದೆ. ಅದೇನೆಂದರೆ ಅಲ್ಲಿನ ಸುತ್ತಮುತ್ತ ಗ್ರಾಮಗಳವರು, ಹೋದವರ್ಷ ಆ ಜಮೀನು ಹೊತ್ತೆಯುತ್ತಾ ಇದ್ದೆ, ಈ ವರ್ಷ ಈ ಜಮೀನು ಹೊಡೆಯುತ್ತಾ ಇದ್ದೇನೆ ಎಂದು ಹೇಳಿಯುತ್ತಾರೆಯೇ ಹೊರತು, ಹತ್ತಾರುವರ್ಷ ಖಾಯಂ ಆಗಿ ಮಾಡುವ ಸಂಭವವೇ ಇಲ್ಲ. ಅಂಥಾ ಸಂದರ್ಭದಲ್ಲಿ ಜೋಡಿದಾರರು ಅವರೇ ಸ್ವಂತವಾಗಿ ಜಮೀನು ಸಾಗುವಳಿ ಮಾಡುವುದಾದರೆ ಅವರ ಜನಸಂಖ್ಯೆಗನುಗುಣವಾಗಿ ಇಷ್ಟು ಜಮೀನು ನಮ್ಮದು ಬಾಕಿಯದು ರೈತರದು ಎಂದು ಹೇಳಿ ಅವರಿಗೆ ಆ ಜಮೀನುಗಳನ್ನು ಕೊಡಬೇಕು ಎಂಬುದು ಒಂದು ಪದ್ಧತಿ. ಇನ್ನೊಂದು ಏನೆಂದರೆ ಕೆಲವು ಜನ ಜೋಡಿದಾರರು ಕಂದಾಯಕೊಡುವುದಕ್ಕೆ ಶಕ್ತಿ ಇಲ್ಲದೆ ಬೇರೆ ಊರುಗಳಿಗೆ ಹೋಗಿ ಸೇರಿಕೊಂಡು ಪ್ರತಿ ವರ್ಷವೂ ಜಮೀನು ಹರಾಜಾದ ಮೇಲೆ ರೆವೆನ್ಯೂ ಕಮಿಷನರ ಹತ್ತಿರ ಬಂದು ನಾವೇ ಆ ಕಂದಾಯ ಕೊಡುತ್ತೇವೆ ಎಂದು ಹೇಳಿ ಕಂದಾಯ ಕಟ್ಟಿ ಮತ್ತೆ ಆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುತ್ತಾರೆ. ಅಂಥಾ ಸಂದರ್ಭದಲ್ಲಿ ಏನಾಗಿದೆ ಎಂದರೆ ಪಿಕ್ಕೆದಾರ ತನಗಿರತಕ್ಕ ಜೋಡಿಯನ್ನು ಯಾರೋ ಒಬ್ಬ X ನಿಂದ ಪಡೆದು Y ಗೆ ಮಾರುತ್ತಾರೆ. Y ಜೋಡಿದಾರನು ಆ ಜಮೀನನ್ನು ಸಾಗುವಳಿಮಾಡಿಕೊಂಡಿರುತ್ತಾನೆ ಪರಿಹಾರ ಕೊಡುವ ಸಂದರ್ಭದಲ್ಲಿ ಅನೇಕ ತಕರಾರುಗಳು ಬರುತ್ತವೆ. ಅದನ್ನು ಸೆಲೆಕ್ಟ್ ಸಮಿತಿಯವರು ಯೋಚನೆಮಾಡಬೇಕಾಗುತ್ತದೆ, ಜಮೀನು ಕೊಂಡುಕೊಂಡವನಿಗೆ ಜಮೀನಿಲ್ಲದೇ ಹೋಗಬಹುದು.

ಅಧ್ಯಕ್ಷರು.—ಏಕೆ, ಯಾರು ಕೊಂಡುಕೊಳ್ಳುತ್ತಾರೋ ಅವರದೇ ಜಮೀನು.

ಶ್ರೀ ಬಿ. ಎಸ್. ಬೋರಣ್ಣಗೌಡರು.—Y ಜೋಡಿದಾರ X ಕದೀಂ ಚೆನೆಂಟು ಹಕ್ಕು ಬಂದಿದೆ. Z, Yಯಿಂದ ಜಮೀನು ಕೊಂಡುಕೊಂಡಿರುತ್ತಾನೆ. ಆಗ Y ಜೋಡಿದಾರ ಒಂದು ತಕರಾರು ಹಾಕಬಹುದು, ಅದನ್ನು ಸ್ವಲ್ಪ ಯೋಚನೆಮಾಡಬೇಕು.

ಈಗ ಸಾಧಾರಣವಾಗಿ ಕೊಡಬೇಕಾಗುವ ಪರಿಹಾರ 2 ಕೋಟಿ ರೂಪಾಯಿ ಆಗುತ್ತದೆಂದು ಎಲ್ಲರೂ ಹೇಳಿದರು. ಅದನ್ನು ಸರ್ಕಾರದವರು ಒಂದೇ ಸಾರಿ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಕೆಲವು ಕಂತ ಗಳವೇಲೆ ಕೊಡಬಹುದು ಎಂದು ಮಾನ್ಯ ಸದಸ್ಯರು ಕೆಲವರು ಹೇಳಿದ್ದಾರೆ ನಾನು ಸರ್ಕಾರದವರಿಗೆ ಸಲಹೆ ಕೊಡುವುದು ಏನೆಂದರೆ ಈಗ ಜೋಡಿ ಜಮೀನಿನಲ್ಲಿರತಕ್ಕ ರೈತರಿಗೆ ಜಮೀನು ಕೊಡುತ್ತೇವೆ ಎಂದರೆ ಅಕ್ಕಪಕ್ಕದಲ್ಲಿರುವ ದರದಂತೆ ಕೊಂಡುಕೊಳ್ಳಲು ಸಿದ್ಧವಾಗಿರತಕ್ಕ ರೈತರು ಅನೇಕ ಜನ ಇದ್ದಾರೆ. ಅದು ತಮ್ಮ ಸ್ವಂತ ಜಮೀನಾಗುತ್ತದೆ ಎಂಬ ಅಭಿಪ್ರಾಯ ಅವರಿಗೆ ಬಂದರೆ ಕೊಂಡುಕೊಳ್ಳಲು ತಯಾರಾಗಿದ್ದಾರೆ, ಕೊಂಡುಕೊಳ್ಳುತ್ತಾರೆ. 1,000 ರೂಪಾಯಿ ಆದರೆ 1,200 ಸಹ ಕೊಟ್ಟು ಕೊಂಡುಕೊಳ್ಳುವ ಸನ್ನಿವೇಶ ಇದೆ. ಹೀಗೆ ರೈತರಿಗೆ ಜಮೀನುಗಳನ್ನು ಮಾರಿ ಪರಿಹಾರ ಕೊಡಬಹುದು. ಎಲ್ಲವನ್ನೂ ಇದೇ ರೀತಿ ಕೊಡಲಕ್ಕಾಗದಿದ್ದರೂ, ಸ್ವಲ್ಪ ಮಟ್ಟಿಗೆ ಸರಿತೂಗಿಸಬಹುದು.

(ಶ್ರೀ ಬಿ. ಎಚ್. ಬೋರಣ್ಣಗೌಡರು.)

ಇನ್ನೊಂದು ವಿಚಾರ. ಈಗ ಕೆಲವು ಮಾನ್ಯ ಮಿತ್ರರು ಒಂದು ವರ್ಷ ಒಂದು ಡಿಸ್ಟ್ರಿಕ್ಟ್‌ನಲ್ಲಿ ಜಾರಿಗೆ ತಂದು ಆ ಮೇಲೆ ಇತರ ಡಿಸ್ಟ್ರಿಕ್ಟ್‌ಗಳಿಗೆ ತರಬೇಕೆಂದು ಹೇಳಿದರು. ಆ ರೀತಿ ಯೋಚನೆ ಮಾಡುವುದು ಅಪ್ರಕೃತ. ಸರ್ಕಾರದವರು ಇದನ್ನು ವಹಿಸಿಕೊಳ್ಳುವುದಾದರೆ ಒಂದೇ ಸಾರಿ ವಹಿಸಿಕೊಂಡು ಪರಿಹಾರ ಕೊಡುವುದು ಒಳ್ಳೆಯದೆಂದು ಹೇಳುತ್ತೇನೆ. ಒಂದು ಸಾರಿ ಒಂದು ಡಿಸ್ಟ್ರಿಕ್ಟ್‌ನಲ್ಲಿ ಜಾರಿ ಮಾಡಿ ನಾಲ್ಕು ವರ್ಷ ಆದಮೇಲೆ ಇನ್ನೊಂದು ಡಿಸ್ಟ್ರಿಕ್ಟ್‌ನಲ್ಲಿ ಜಾರಿಮಾಡುವುದು ನ್ಯಾಯವಲ್ಲ. ಜಮೀನು ಸರ್ಕಾರದವರಿಗೆ ಬಿಟ್ಟುಕೊಡಿ ಎಂದ ಮೇಲೆ ಅವರಿಗೆ ಒಂದು ವರ್ಷ ಅಲ್ಲ ಎರಡು ವರ್ಷ ಆಗಲೀ ಪರಿಹಾರವನ್ನು ಇಷ್ಟು ಕಂತಿನಲ್ಲಿ ಕೊಡುತ್ತೇವೆ ಎಂಬುದನ್ನು ನಿಗದಿಯಾಗಿ ಹೇಳಬೇಕು. ಅವರು ಅಲ್ಲೇ ಇರಲಿ ಬೇರೆ ಕಡೆ ಇರಲಿ ಯಾವುದಾದರೂ ತೊಂದರೆಗೆ ಸಿಕ್ಕಿರಬಹುದು. ಮೈನರ್ ಮಕ್ಕಳಿರುತ್ತಾರೆ ವಿಧವೆಯರು ಇರುತ್ತಾರೆ. ಅವರಿಗೆ ಯಾವ ವಿಧವಾದ ತೊಂದರೆ ಆಗದಹಾಗೆ ಪರಿಹಾರ ಕೊಡಬೇಕಾದ್ದು ನ್ಯಾಯ. ಒಂದು ಅಥವಾ ಎರಡನೇ ಕಂತಿನಲ್ಲಿ ಕೊಡುತ್ತೇವೆ ಎಂದು ಭರವಸೆ ಕೊಟ್ಟುಬಿಡಬೇಕು. ಇಲ್ಲದಿದ್ದರೆ ತೊಂದರೆಯಾಗುತ್ತದೆ. ಜೋಡಿದಾರರು ಇಲ್ಲಿವರೆಗೂ ಅನುಭವಿಸಿಕೊಂಡು ಬಂದರು. ಅವರಿಗೆ ಯಾವ ಪರಿಹಾರವನ್ನು ಕೊಡಬೇಕಾಗಿಲ್ಲ. ಪರಿಹಾರ ಕೊಡಬೇಕಾದ್ದು ಅಪ್ರಕೃತ ಎಂದು ಮಾನ್ಯ ಮಿತ್ರರು ಕೆಲವರು ಅಭಿಪ್ರಾಯವನ್ನು ವ್ಯಕ್ತಪಡಿಸಿದರು ಅದು ಸರಿಯಲ್ಲ ಕಾರಣಾಂತರದಿಂದ ಒಳ್ಳೆಯ ಕೆಲಸ ಮಾಡಿದ್ದಕ್ಕೆ ಆ ಜಮೀನುಗಳನ್ನು ನಿಮ್ಮ ವಂಶ ಪಾರಂಪರ್ಯವಾಗಿ ಅನುಭವಿಸಿಕೊಂಡು ಬನ್ನಿ ಎಂಬುದಾಗಿ ಹಿಂದೆ ಕೊಟ್ಟಿರುವಾಗ, ಅದನ್ನು ಸರ್ಕಾರಕ್ಕೆ ಪುನಃ ವಹಿಸಿಕೊಳ್ಳಬೇಕಾದರೆ ಪರಿಹಾರ ಕೊಡಬೇಕು ಎನ್ನುವುದು ಒಂದು ನೀತಿ. ಒಂದು ನಿಗದಿಯಾದ ಅಭಿಪ್ರಾಯಕ್ಕೆ ಬಂದಮೇಲೆ ಅವರಿಗೆ ಜಾಗ್ರತೆ ಪರಿಹಾರ ಕೊಡಲು ತಕ್ಕ ಏರ್ಪಾಡುಮಾಡುವುದು ಒಳ್ಳೆಯದ. ಸೆಲೆಕ್ಟ್ ಸಮಿತಿಯವರು ಎಲ್ಲವನ್ನೂ ಪರಿಶೀಲಿಸಿ ಸೂಕ್ತವಾದ ಸಲಹೆ ಕೊಟ್ಟು ಈ ಆಕ್ಟ್ ಜಾರಿಗೆ ಬರಲು ಅವಕಾಶಮಾಡಿಕೊಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಸುಬ್ಬರಾಯರು (ಬೆಂಗಳೂರು ಜಿಲ್ಲೆ).— ಮಾನ್ಯ ಅಧ್ಯಕ್ಷರೇ, ಇನಾಂ ಗ್ರಾಮಗಳು ಹೋಗಬೇಕು ಎಂದು ಹೇಳಿ ತಂದಿರತಕ್ಕ ಈ ಮಸೂದೆಯನ್ನು ನಾನೂ ಸಹ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಇದರಲ್ಲಿ ಇನಾಂ ಗ್ರಾಮಗಳು ಹೋಗಬೇಕೇ ಬೇಡವೇ ಎಂಬ ಪ್ರಶ್ನೆಯು ಈಗ ಬೇಕಾಗಿಲ್ಲವೆಂದು ನನಗೆ ಅನಿಸುತ್ತದೆ. ಏಕೆಂದರೆ ಕಾಲಧರ್ಮ, ಇದು ಹೋಗಲೇಬೇಕು. ಹೋಗಬೇಕಾದ ಪರಿಸ್ಥಿತಿ ಬಂದಿರುವಾಗ ಹೋಗುತ್ತದೆ, ಯಾರು ಅತ್ತರೂ ಏನೂ ಪ್ರಯೋಜನವಿಲ್ಲ ಎಂಬುದು ನಿರ್ವಿವಾದ ವಿಷಯ. ನಮ್ಮ ಮಿತ್ರರು ಹೇಳುತ್ತಾ ಇದ್ದರು—ಮಹಮ್ಮದೀಯ ಮಿತ್ರರ ವನಸ್ಸಿಗೆ ಅದು ನೋವಾದೀತು—ಸಾಹೇಬರೇ ಹೋಗುವಾಗ ಗಡ್ಡಕ್ಕೆ ಏಕೆ ಅಳಬೇಕು? ನಮ್ಮ ಮಿತ್ರರು ಇದನ್ನು ತಪ್ಪು ತಿಳಿದುಕೊಳ್ಳಬಾರದು. ಆದ್ದರಿಂದ ಯಾರು ಇದನ್ನು ಸೃಷ್ಟಿ ಮಾಡಿದರೋ ಅವರೇ ಹೋಗುವಾಗ. ಅಂಥಾ ರಾಜಾಧಿರಾಜರೇ ಉರುಳುವಾಗ ಸಣ್ಣ ಸಣ್ಣ ಜೋಡಿದಾರರು ಆ ಹುಚ್ಚು ಹೊಳೆಗೆ ಅಡ್ಡವಾಗಿ ನಿಂತುಕೊಳ್ಳಬೇಕೆಂದರೆ ಅದು ಖಂಡಿತವಾಗಿಯೂ ಸಾಧ್ಯವಾಗಲಾರದು; ದೊಡ್ಡದೊಡ್ಡ ಅನೆಗಳೇ ಓಡಿ ಹೋಗುತ್ತಿರುವಾಗ, ಸೊಳ್ಳೆಗಳನ್ನು ಕೇಳುವರಾರು! ಇದು ಹೋಗಲು ತಕ್ಕ ಕಾಲದಲ್ಲಿ ಯಾರೊಬ್ಬರ ಮನಸ್ಸಿಗೂ ನೋವಾಗದ ಕಾರ್ಯ ಮಾಡಿದರೆ ಸಾಮಾನ್ಯವಾಗಿ ಸರ್ಕಾರಕ್ಕೂ ಕೂಡ ಒಂದು ವಿಧವಾದ ಕೀರ್ತಿ, ಯಶಸ್ಸು ಬರುತ್ತದೆ. ಜನರಿಗೂ ಒಂದು ವಿಧವಾದ ನೆಮ್ಮದಿಯುಂಟಾಗುತ್ತದೆ. ಈ ಎರಡನ್ನೂ ಸರ್ಕಾರದವರು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಏಕೆಂದರೆ ಈಗ ಒಂದು ವೇಳೆ ರೈತರು ನಮಗೆ ಜೋಡಿ ಗ್ರಾಮಗಳಲ್ಲಿ ಅನ್ಯಾಯವಾಗುತ್ತಾ ಇದೆ ಎದ್ದರಿಂದ ಜೋಡಿ ಪದ್ಧತಿಯನ್ನು ರದ್ದುಮಾಡಿ ಆ ಗ್ರಾಮಗಳನ್ನು ಸರ್ಕಾರದವರು ವಹಿಸಲೇಬೇಕು ಎಂದು ಹೇಳುತ್ತಿರುವುದಕ್ಕೆ ಪೂರ್ಣ ಸಹಕಾರ ಕೊಟ್ಟು ಜೋಡಿದಾರರ ಹಿತವನ್ನು ಲಕ್ಷ್ಯಮಾಡದಿದ್ದರೆ, ಸರ್ಕಾರದವರು ನ್ಯಾಯವಾದ ದೃಷ್ಟಿಯಿಂದ ವರ್ತಿಸಿದಂತಾಗುವುದಿಲ್ಲ. ಅಥವಾ ಇನ್ನೊಬ್ಬರೂ ಈಗ ಜೋಡಿ ಗ್ರಾಮಗಳು ಇರುವ ರೀತಿಯಲ್ಲೇ ಇರಬೇಕೆಂದು ಹೇಳುವ ರೀತಿಯಲ್ಲೂ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳಿದ್ದೇನೆ. ಆದ್ದರಿಂದ ಕೇವಲ ಅವರ ಹಿತವನ್ನು ರಕ್ಷಣೆ ಮಾಡಿ ರೈತರ ಹಿತವನ್ನು ಅಲಕ್ಷ್ಯಮಾಡುವುದೂ ಸರಿಯಲ್ಲವೆಂದು ಎಲ್ಲರೂ ಚೆನ್ನಾಗಿ ಮನಗಂಡಿದ್ದೇವೆ. ಒಟ್ಟಿನಲ್ಲಿ ಒಂದು ತುಲನಾತ್ಮಕ ದೃಷ್ಟಿಯಿಂದ ಇಬ್ಬರಿಗೂ ನ್ಯಾಯ ದೊರಕಿಸುವಂತೆ ಮಾಡುವುದು ಸರ್ಕಾರದವರ ನೀತಿ,ಧರ್ಮವೆಂಬುದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ.

ಈ ಮಸೂದೆಯಲ್ಲಿ ಇನಾಂ ಗ್ರಾಮಗಳು, ಯಳಂದೂರು, ಶೃಂಗೇರಿ ಜಹಗೀರಿಗಳನ್ನು ವಜಾ ಮಾಡಬೇಕೆಂದು ಅರ್ಥ ಬರುವಹಾಗೆ ಹೇಳಿದೆ. ಇನಾಂ ಗ್ರಾಮಗಳೆಂದರೆ ಖಾಯಂಗುತ್ತಾ, ಜೋಡಿ, ನರ್ವ ಮಾನ್ಯ ಎಂಬುದಾಗಿ ಮೂರು ವಿಧವಾದ ಇನಾಂ ಗ್ರಾಮಗಳೆಂದು ವರ್ಣನೆಯಲ್ಲಿ ಹೇಳಿದ್ದಾರೆ. ಇವುಗಳಂತೆಯೇ ಸರ್ಕಾರಿ ಗ್ರಾಮಗಳಲ್ಲಿರತಕ್ಕ ದೇವಾದಾಯ, ಬ್ರಹ್ಮಾದಾಯ, ತೋಟಿ ತಳವಾರಿ ಇನಾಂಗಿರಿ—ಇವುಗಳನ್ನೂ ಕೂಡ ಒಂದೇ ಸಾರಿ ತೆಗೆದುಬಿಟ್ಟರೆ ಚೆನ್ನಾಗಿತ್ತೆಂದು ಕೆಲವರು ಅಭಿಪ್ರಾಯಪಡುತ್ತಾರೆ. ಈ ಸಣ್ಣಪುಟ್ಟ ಇನಾಂತಿಗಳ ರೀತಿನೀತಿಗಳೇ ನಿವೆ, ಹಿಂದೆ ಯಾವ ದೃಷ್ಟಿಯಿಂದ ಇವುಗಳನ್ನು ಕೊಟ್ಟರು, ಅವಕ್ಕೇನು peculiarities (ವೈಶಿಷ್ಟ್ಯಗಳು) ಇವೆಯೆಂಬುದನ್ನು ಅವರುಗಳು ಮರೆತಿರುವಂತೆ ಕಾಣುತ್ತೆ. ಸಾಧಾರಣವಾಗಿ ಇನಾಂತಿಗಳನ್ನು ಕೊಡುವ ಸಂದರ್ಭದಲ್ಲಿ ಅವರು ಸರ್ಕಾರದವರಿಗೆ ಸ್ವಲ್ಪಭಾಗ ಮಾತ್ರ ಹಣಕೊಟ್ಟು ಆ ಇನಾಂಗಿರಿಗಳ ಪೂರ್ಣ ಆದಾಯವನ್ನು ಅನುಭವಿಸಿಕೊಳ್ಳಬಹುದೆಂದು ಬೇಳಕೊಟ್ಟಿದ್ದಾರೆ. ಆದರೆ ಈ ತೋಟಿ ತಳವಾರರುಗಳ ಇನಾಂಗಿರಿಗಳನ್ನು ನೋಡಿ. ಈ ತೋಟಿ ತಳವಾರರುಗಳು ಸರ್ಕಾರದ ಕೆಲಸ ಮಾಡಿ ಅದಕ್ಕಾಗಿ ಒಂದು ಪ್ರತಿಫಲ ಹೊಂದುತ್ತಿದ್ದಾರೆಯೇ ಹೊರತು ಯಾವ ಕೆಲಸವನ್ನೂ ಮಾಡದೆ ಈ ಪ್ರತಿಫಲ ಹೊಂದುತ್ತಿಲ್ಲ. ಗ್ರಾಮಗಳಲ್ಲಿ ಯಾವುದನ್ನು ತೆಗೆದುಕೊಂಡರೂ ತೋಟಿತಳವಾರರ ಇನಾಂತಿಯಾದರೂ ಎಷ್ಟಿರುತ್ತದೆ? ಅವನಿಗೆ ಸರ್ಕಾರದವರು ಕೊಟ್ಟಿರುವ ಪ್ರತಿಫಲವಾದರೂ ಏನು? 4—5 ಎಕರೆಗಳು ಇವಕ್ಕೆ ಪೂರ್ಣ ಕಂದಾಯ ತೆಗೆದುಕೊಂಡರೂ 5—6 ರೂಪಾಯಿ ಆಗಬಹುದು. ಈ ಆರು ರೂಪಾಯಿ ಕೊಡುವುದಕ್ಕೆ ಬದಲು ಅವನಿಗೆ ರಿಯಾಯಿತಿ ತೋರಿಸಿ ನಾಲ್ಕೈಂದು quit rent ಪಡೆದುಕೊಟ್ಟಿರಬಹುದು ಅಷ್ಟೆ. ಅದನ್ನವನು ವಂಶ ಪಾರಂಪರ್ಯವಾಗಿ ಅನುಭವಿಸಿಕೊಂಡು ಸರ್ಕಾರಿ

ಕೆಲಸವನ್ನೂ ಮಾಡುತ್ತಾ ಬರುತ್ತಿದ್ದಾನೆ. ಅಂಥಾದ್ದನ್ನೀಗ ಏಕ್‌ದಂ ಸರ್ಕಾರದವರು ಕಿತ್ತುಕೊಳ್ಳುವುದನ್ನು ಸ್ವಲ್ಪ ಯೋಚನೆ ಮಾಡಿ ಮಾಡಬೇಕು. ಇಂಥ ಸಣ್ಣ ಪುಟ್ಟ ಇನಾಂಗಳನ್ನು ತಾವು ಕಿತ್ತುಕೊಳ್ಳಕೂಡದೆಂದು ನಾನು ಸೂಚಿಸುತ್ತೇನೆ. ದೇವಾದಾಯವನ್ನೂ ತಾವು ನೋಡಿ, ವಂಶಪಾರಂಪರ್ಯವಾಗಿ ಪೂಜಾರಿಯು ಪೂಜೆಮಾಡಿಕೊಂಡು ಶುಚಿಯಾಗಿ ದೇವಸ್ಥಾನವನ್ನು ನೋಡಿಕೊಂಡಿರುತ್ತಾನೆ. ಇಂಥಾದ್ದಕ್ಕೆ ಕೊಟ್ಟಿರುವ ಇನಾಂತಿಯಿಂದ 5—6 ರೂಪಾಯಿ ಸರ್ಕಾರಕ್ಕೆ ಬರಬಹುದೆಂದು ಅವನಿಂದ ಕಿತ್ತುಕೊಂಡುಬಿಟ್ಟರೆ ಮುಂದೆ ಆ ದೇವಸ್ಥಾನದಲ್ಲಿ ಪೂಜಾದಿಗಳನ್ನು ಸಾರೋದ್ಧಾರವಾಗಿ ಎಂದಿನಂತೆ ನಡೆಸಿಕೊಂಡು ಬರಬೇಕಾದರೆ ತಿಂಗಳಿಗೆ 10 ರೂಪಾಯಿ ಸಂಬಳ ಕೊಟ್ಟು ಪೂಜಾರಿಯನ್ನು ನೇಮಿಸಬೇಕಾದ ದುಸ್ಥಿತಿ ಬರಬಹುದು. ಮುಂದೆ ಹೇಗಾದರೂ ಆಗಲಿ, ಈಗ ನದ್ಯಕ್ಕೆ ಇಂಥಾ ಇನಾಂತಿಗಳನ್ನು ಕೈಬಿಟ್ಟು ಇದರಲ್ಲಿ ತರದಿರುವುದು ಒಳ್ಳೆಯದು.

ಶ್ಯಾನುಭೋಗ ಇನಾಂತಿಯೂ ಹೀಗೆಯೇ. ಅವುಗಳಿಗಂತೂ ಪೂರ್ಣವಾಗಿಯೇ ಕಂದಾಯ ಹಾಕಿದ್ದಾರೆ. ಇಂಥವುಗಳನ್ನು ಸರ್ಕಾರದವರು ವಹಿಸಿಕೊಳ್ಳುವುದರಿಂದ ಸರ್ಕಾರಕ್ಕೇನೂ ಫಾಯಿದೆ ಇಲ್ಲ. ಅವರುಗಳಿಗೆ ಪರಿಹಾರವನ್ನು ಕೊಡಬೇಕಾಗಿ ಬರುತ್ತದೆ ಅಷ್ಟೆ. ಈ ದೃಷ್ಟಿಯಿಂದ ಇಂಥಾ ಸಣ್ಣಪುಟ್ಟ ಇನಾಂತಿಗಳಿಗೆ ಕೈ ಹಾಕದೆ, ದೊಡ್ಡ ಇನಾಂತಿಗಳ ಸಮಸ್ಯೆಯನ್ನು ಮಾತ್ರ ಪರಿಹಾರ ಮಾಡುತ್ತೇವೆಂದು ಈ ಮಸೂದೆಯನ್ನು ತಂದಿರುವುದು ಬಹಳ ಅಭಿನಂದನೀಯ.

ಇನ್ನು ಇವುಗಳನ್ನು ತೆಗೆದುಕೊಳ್ಳುವ ಕಾಲದಲ್ಲಿ ಕೊಡಬೇಕಾದ ಪರಿಹಾರದ ವಿಷಯದಲ್ಲಿ ಭಿನ್ನಾಭಿಪ್ರಾಯ ಸ್ವಲ್ಪ ತೀವ್ರವಾಗಿರುವಂತೆ ಕಾಣುತ್ತೆ. ಅದರಲ್ಲೂ ಮಾನ್ಯ ಮಿತ್ರರಾದ ಶ್ರೀಮಾನ್ ಲಿಂಗಾರೆಡ್ಡಿಯವರೂ ಮತ್ತು ಅವರನ್ನು ನಮಾರ್ಥಿಸಿದವರೂ ಈ ಮಸೂದೆಯಲ್ಲಿ ಕ್ರಾಂತಿಕಾರಕ ಬದಲಾವಣೆ ಆಗಬೇಕೆಂದೂ, ಎಷ್ಟೋ ದಿವಸಗಳಿಂದ ಇನಾಂದಾರರುಗಳು ಬೇಕಾದಷ್ಟು ಸುಖಸಂಪತ್ತುಗಳನ್ನು ಅನುಭವಿಸಿದ್ದಾರೆಂದೂ ವಾದಿಸಿದರು. ರಾಜಮಹಾರಾಜರುಗಳಿಗೆ ಪೆರ್ಪಸ್ ಕೊಟ್ಟಹಾಗೆ ಇವರಿಗೂ ಪೆರ್ಪಸ್ ಕೊಡಬೇಕೆಂದು ಕೆಲವರು ಹೇಳಿದರು. ಆದರೆ ಭಾರತ ರಾಜ್ಯಾಂಗದಲ್ಲಿಯಾಪೊಬ್ಬವ್ಯಕ್ತಿಯ ಸ್ವತ್ತನ್ನೇ ಆಗಲೀ ತೆಗೆದುಕೊಳ್ಳುವಾಗ ಅವನಿಗೆ ಪರಿಹಾರವನ್ನು ಕೊಟ್ಟೇ ಕೊಡಬೇಕು, ಮತ್ತು ಅದೂ ನ್ಯಾಯವಾಗಿ ಕೊಡಬೇಕೆಂದಿರುವಾಗ ಈ ಪ್ರಶ್ನೆಯ ವಿಚಾರದಲ್ಲಿ ಹೆಚ್ಚಿಗೆ ವಾದ ವಿವಾದ ಮಾಡುವುದೇ ಅನವಶ್ಯವೆಂದು ಹೇಳುತ್ತೇನೆ. ಪರಿಹಾರವನ್ನು ಕೊಡಬೇಕಾಗಿಯೇ ಬರುತ್ತದೆ. ಬೀಹಾರಿನಲ್ಲಿ ಆರರಷ್ಟು ಮಾತ್ರ ಕೊಟ್ಟರು, 8ರಷ್ಟು ಮಾತ್ರ ಕೊಟ್ಟರು, ನಾವೇಕೆ ಹೆಚ್ಚಿಗೆ ಕೊಡಬೇಕೆಂದು ಹೇಳಿದರು. ಆಲ್ಲಿನ ಇನಾಂ ಗ್ರಾಮಗಳ ವಿಷಯದಲ್ಲಿ ನಮ್ಮಲ್ಲಿರುವಂತೆ ಜೋಡಿ, ಇನಾಂತಿಗಳೆಂಬ ಪ್ರಶ್ನೆ ಇಲ್ಲ. ಅಲ್ಲಿರುವುದೆಲ್ಲಾ ದೊಡ್ಡ ದೊಡ್ಡ ಜಮೀನ್ದಾರಿಗಳು. ಆ ಜಮೀನ್ದಾರರುಗಳು ರಾಜಮಹಾರಾಜರುಗಳಂತಿರುವಾಗ, ಒಬ್ಬೊಬ್ಬರಿಗೂ 6 ಲಕ್ಷ 8 ಲಕ್ಷ ಬರುತ್ತಿರುವಾಗ ಅವರು ಆ ರೀತಿ ಗೊತ್ತುಮಾಡಿರುವುದು ಅಲ್ಲಗೆ ಸರಿ. ಅದನ್ನೇ ನಾವಿಲ್ಲಿ ಅನುಸರಿಸಬೇಕಾಗಿಲ್ಲ. ಇಲ್ಲಿನ ಸ್ಥಿತಿಗತಿಗಳು, ನಮ್ಮ ಜನರ ಯೋಗ್ಯತೆ ನೋಡಿಕೊಂಡು ಸೂಕ್ತ ಪರಿಹಾರವನ್ನು ಸರ್ಕಾರದವರು ಗೊತ್ತುಮಾಡಿದ್ದಾರೆ. ಮಾನ್ಯ ಸದಸ್ಯರು ಹೇಳಿದಂತೆ ಅಲ್ಪಸ್ವಲ್ಪ ಬದಲಾವಣೆ ಮಾಡಿಯಾದರೂ ಪರಿಹಾರ ಕೊಡಬಹುದು. ಅಷ್ಟೇ ಹೊರತು, ಪರಿಹಾರವನ್ನು ಕೊಡಬೇಕಾದ್ದು ನಿರ್ವಿವಾದವಾದ ವಿಷಯ.

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಸಭೆಯ ಗಮನಕ್ಕೆ ತರಬೇಕಾಗಿದೆ. ಈ ಇನಾಂತಿಗಳನ್ನು ನೂರಾರು ವರ್ಷಗಳ ಹಿಂದೆ ಯಾರಿಗೆ ಕೊಟ್ಟಿದ್ದರೋ ಅವರ ಕೈಯಲ್ಲೇ ಈಗ ಅವು ಇಲ್ಲ. ಅನೇಕ ಕೈದಾಟಿ ಹೋಗಿವೆ. ಖರೀದಿ, ಭೋಗ್ಯ, ಮುಂತಾಗಿ ಯಾವ ರೀತಿಯಲ್ಲಾದರೂ ಈ ಇನಾಂತಿಗಳನ್ನು ವಿಲೇವಾರಿ ಮಾಡುವುದಕ್ಕೆ ಅವಕಾಶವಿದ್ದುದರಿಂದ ಎಷ್ಟೋ ಇನಾಂತಿಗಳು ಬೇರೆಯವರ ಕೈಗೆ ಹೋಗಿರಬಹುದು. ಇಂಥಾ ಸ್ಥಿರ ಸ್ವತ್ತನ್ನು ಕೊಂಡುಕೊಳ್ಳುವುದಕ್ಕೆ ಕಾನೂನಿನಲ್ಲಿ ಅವಕಾಶವಿತ್ತು. ಆದ್ದರಿಂದ ಆ ರೀತಿಯಲ್ಲಿ ಏನಾದರೂ ಒಬ್ಬ ಮನುಷ್ಯನು ತನ್ನ ಕಷ್ಟಾರ್ಜಿತ ಹಣದಿಂದ ಇಂಥಾ ಸ್ಥಿರಸ್ವತ್ತನ್ನು ಕೊಂಡುಕೊಂಡಿದ್ದರೆ ಅಂಥವನಿಗೀಗ ನೀವು ಏನೂ ಪರಿಹಾರ ಕೊಡುವುದಿಲ್ಲವೆಂದರೆ ಹೇಗೆ! ಆತನಿಗೆ ಬಹಳ ಅನ್ಯಾಯ ಮಾಡಿದಂತಾಗುತ್ತದೆ. ಈ ವಿಚಾರದಲ್ಲಿ ಕ್ರಿಮಿನಲ್ ರಾನಲ್ಲಿರುವ ಒಂದು ತತ್ವವನ್ನು ಇಲ್ಲಿಯೂ ಗ್ರಹಿಸಬೇಕು. ನ್ಯಾಯದೃಷ್ಟಿಯಲ್ಲಿ ನೂರಾರು ತಪ್ಪಿತಸ್ಥರು ತಪ್ಪಿಸಿಕೊಂಡರೂ ಸರಿ, ಒಬ್ಬ ನ್ಯಾಯವಾದ ಮನುಷ್ಯನಿಗೆ ಅನ್ಯಾಯವಾಯಿತೆಂದರೆ ಅದು ಅಧರ್ಮದ ಕೆಲಸವೆಂದೇ ಭಾವಿಸಬೇಕು. ಹಾಗೆಯೇ ಜೋಡಿದಾರರುಗಳಲ್ಲೂ ಕೆಲವರು ತಪ್ಪಾಗಿ ವರ್ತನೆಮಾಡಿರಬಹುದು. ರೈತರಲ್ಲೂ ಕೆಲವರು ದುಂಡಾವರ್ತನೆ ಮಾಡಿರಬಹುದು. ಎರಡು ತಪ್ಪನ್ನೂ ಹೊರಗೆಹಾಕಿ 'ಎರಡೂ ದದ್ದು, ಎರಡನ್ನೂ ತೆಗೆದುಹಾಕಿ' ಎಂದು ಹೇಳುವಂತೆ ಈಗ ಹೊಸದಾಗಿ ಒಂದು ನೀತಿಯನ್ನನುಸರಿಸುವುದು ಸೂಕ್ತವೆಂದು ಕಾಣುತ್ತದೆ. ಹೀಗಿರುವಾಗ ಈ ಪರಿಹಾರವನ್ನು ಕೊಡುವ ಸಂದರ್ಭದಲ್ಲಿ ಆ ಗ್ರಾಮಗಳು ಅವರ ಕೈಗೆ ಹೇಗೆ ಬಂತು ಎಂಬುದನ್ನೆಲ್ಲಾ ಯೋಚಿಸಬೇಕಾಗಿಲ್ಲ. ನಾವಿರತಕ್ಕ ತಾಲ್ಲೂಕಿಗೆ ಸೇರಿದಂತೆ ನಾಲ್ಕು ಇನಾಂತಿ ಗ್ರಾಮಗಳಿವೆ. ನಾನಲ್ಲಿ ನೋಡಿದ್ದೇನೆ. ಅಲ್ಲೆಲ್ಲೂ ಜೋಡಿದಾರರುಗಳಿಗೂ ರೈತರುಗಳಿಗೂ ಅಷ್ಟು ಹೆಚ್ಚಿನ ತಿಕ್ಕಾಟ ನಡೆದಿರುವುದು ಕಂಡುಬಂದಿಲ್ಲ. ಸಣ್ಣಪುಟ್ಟ ವ್ಯಾಜ್ಯಗಳಿರಬಹುದು ಅಷ್ಟೆ. ಹೀಗಿರುವ ಜೋಡಿದಾರರುಗಳೂ ರೈತರುಗಳೂ ತೀವ್ರವಾಗಿ ಹೋರಾಟ ನಡೆಸಿಲ್ಲವೆಂದೇ ಹೇಳಬಹುದು. ಆದರೂ ಜೋಡಿದಾರರುಗಳೂ ಈಗಾಗಲೇ ಕಾಲಧರ್ಮವನ್ನರಿತು ಇನ್ನು ಮುಂದೆ ರೈತರನ್ನು ಹಿಂದಿನಂತೆ ಕೈಯಲ್ಲಿಟ್ಟುಕೊಳ್ಳುವುದಕ್ಕಾಗುವುದಿಲ್ಲವೆಂದು ತಿಳಿದಿದ್ದಾರೆ. ರೈತರನ್ನು ಸರಿಸಮಾನಾಗಿ ಕಂಡರೇನೇ ತಮಗೂ ಮಾಲೀಕರಾಗಿ ಗೌರವ ಬಂದೀತೆಂಬುದನ್ನು ಎಲ್ಲರೂ ಅರ್ಥಮಾಡಿಕೊಂಡಿದ್ದಾರೆ. ಇವರುಗಳು ಇದನ್ನೇ ಒಂದು ಜೀವನದ ಮಾರ್ಗವಾಗಿ ಅವಲಂಬನೆ ಮಾಡಿಕೊಂಡಿರುವುದರಿಂದ ಅವರಿಗೆ ಪರಿಹಾರ ಕೊಡುವುದು ನ್ಯಾಯವೆಂದು ಹೇಳುತ್ತೇನೆ.

ಇನ್ನು, ಹಣವನ್ನು ವಸೂಲು ಮಾಡುವುದರಲ್ಲಿ ರೈತರಿಗೆ ತೊಂದರೆಯಾಗುತ್ತದೆಂದು ಕೆಲವರು ಹೇಳಿದರು. ನಾನಿದನ್ನು ಒಪ್ಪಲಾರೆ. ಕಾರಣ ಇಷ್ಟೆ. ಸರ್ವೆ ಸೆಟ್ಲ್‌ಮೆಂಟ್ ಆಗಿರುವ ಒಂದು ಗ್ರಾಮ ತೆಗೆದುಕೊಂಡರೆ ಅಲ್ಲಿ 10 ಎಕರೆ ಜಮೀನಿರುವ ಒಬ್ಬ ಮನುಷ್ಯ ಸಾಧಾರಣವಾಗಿ 10-15 ರೂಪಾಯಿ ಕೊಡುತ್ತಿರುತ್ತಾನೆ. ಇದರ ಪ್ರಕಾರ ಅವನು 150 ರೂಪಾಯಿ ಕೊಡಬೇಕಾಗುತ್ತದೆ. ಇದನ್ನು ಕೊಟ್ಟರೆ ಅವನು ಸರ್ಕಾರಿ ಗ್ರಾಮದಂತೆ ರೈತನಾಗುತ್ತಾನೆ. ಹತ್ತು ಎಕರೆಯಲ್ಲಿ ಏನಿಲ್ಲವೆಂದರೂ 10 ಖಂಡಗ ರಾಗಿ ಭೆಳೆದರೆ

(ಶ್ರೀ ಕೆ. ನುಬ್ಬರಾಯರು.)

ಜಮೀನ್ದಾರನಿಗೆ ಕೊಡುತ್ತಿದ್ದುದು $\frac{1}{3}$ ಭಾಗ ಅಥವಾ $\frac{1}{4}$ ಭಾಗ. ಆದ್ದರಿಂದ ಇನ್ನುಳಿದ 5 ಖಂಡಗಕ್ಕೆ ಎಷ್ಟು ಹಣ ಬರುತ್ತದೆಂಬುದನ್ನು ನೋಡಿ.

ಇನಾಂದಾರರಿಗೆ ಕೊಡತಕ್ಕ ಐದು ಖಂಡಗ ರಾಗಿಯನ್ನು 40 ರೂಪಾಯಿನಂತೆ ಮಾರಿದರೆ 200 ರೂಪಾಯಿ ಬರುತ್ತದೆ. ಹೀಗೆ ಸರ್ಕಾರಕ್ಕೆ ಇದನ್ನು ಮಾರಿ ಈ ಹಣವನ್ನು ಕೊಟ್ಟರೆ ಆದರಿಂದ ರೈತನಿಗೆ ವಂಶ ಪಾರಂಪರ್ಯವಾದ ಒಂದು ಅನುಕೂಲ ಬರುವುದಾದರೆ ಇದನ್ನು ಒಂದು ಹೊರೆಯೆಂದು ಅವನು ತಿಳಿದುಕೊಳ್ಳುತ್ತಾನೆಂದು ನಾವು ಭಾವಿಸಬೇಕಾಗಿಲ್ಲ. ರೈತನಿಗೆ ಜಮೀನೇ ನರ್ವಿಸ್ಯ; ಏಕೆಂದರೆ ಅವನಿಗೆ ಜೀವನಕ್ಕೆ ಬೇರೆ ಮಾರ್ಗವಿಲ್ಲ. ಆದುದರಿಂದ ಐವತ್ತು ಅಥವ ನೂರು ರೂಪಾಯಿ ಕೊಡಬೇಕಾದರೆ ಖಂಡಿತವಾಗಿಯೂ ಅವನು ಹಿಂತೆಗೆಯುವುದಿಲ್ಲ. ಆದರಲ್ಲಿಯೂ ಹಣದ ಉಬ್ಬರವಿರುವ ಈ ಕಾಲದಲ್ಲಿ ಒಂದು ಹನುವನ್ನು ಮಾರಿದರೂ 200-300 ರೂಪಾಯಿ ಬರುತ್ತದೆ, ಒಂದು ಕುರಿಯನ್ನು ಮಾರಿದರೂ 40-50 ರೂಪಾಯಿ ಬರುತ್ತದೆ, ಇಂತಹ ಕಾಲದಲ್ಲಿ ನೂರು ಇನ್ನೂರು ರೂಪಾಯಿ ಕೊಡಬೇಕೆಂದರೆ ರೈತ ಸಂತೋಷದಿಂದ ಕೊಡುತ್ತಾನೆ, ಇದನ್ನು ಹೊರೆ ಎನ್ನುವುದಿಲ್ಲ. ಗ್ರಾಮಗಳಲ್ಲಿ ಕಂದಾಯ ತರಾವು ಆಗಿದ್ದರೆ ಆ ಪ್ರಮಾಣದಲ್ಲಿ ಅಳತೆ ಮಾಡಿದರೆ ರೈತನಿಗೆ ಕಷ್ಟವಾಗುವುದಿಲ್ಲ. ಅಲ್ಲದೆ ಜೆನೆಸಿಯಲ್ಲಿ ಅನೇಕ ವಿಧವಾದ ಜೆನೆಸಿಗಳಿವೆ. ಈಗಿನ ಕಾಲದಲ್ಲಿ ನ್ಯಾಯವಾಗಿ ಲೆಕ್ಕಹಾಕಿದರೆ ಒಂದು ವರ್ಷದ ಉತ್ಪತ್ತಿಗಿಂತ ಜಾಸ್ತಿಯಾಗಿ ರೈತನಿಂದ ತೆಗೆದುಕೊಳ್ಳುವ ಪ್ರಮೇಯವೇ ಬರುವುದಿಲ್ಲವಾದುದರಿಂದ ರೈತ ಇದನ್ನು ಹೊರೆಯೆಂದು ಭಾವಿಸುವುದಿಲ್ಲ, ಆದಕಾರಣ ರೈತನಿಂದ ಈ ಹಣವನ್ನು ತೆಗೆದುಕೊಂಡು ಕೊಡುವುದರಲ್ಲಿ ಎಲ್ಲರಿಗೂ ಅನುಕೂಲವಾಗುತ್ತದೆ. ಯಾರೂ ಇದನ್ನು ಕಷ್ಟವೆಂದು ಭಾವಿಸುವುದಿಲ್ಲ.

ಇನ್ನು ವಿವಾದಗಳು ಹುಟ್ಟಿದರೆ, ಅವುಗಳನ್ನು ಯಾವ ರೀತಿ ಪರಿಹಾರ ಮಾಡುವುದೆಂಬುದನ್ನು ಈಗ ವಿವರಿಸುವ ಅಗತ್ಯವಿಲ್ಲ. ಕಾನೂನಿನ ಸಹಾಯವಿದ್ದೇ ಇದೆ. ಒಂದು ವೇಳೆ ಇರುವ ಕಾನೂನಿನಿಂದ ಸಾಧ್ಯವಾಗದಿದ್ದರೆ ಅದನ್ನು ಬದಲಾವಣೆ ಮಾಡುವ ಅಧಿಕಾರ ಶಾಸನ ಸಭೆಗಿದ್ದೇ ಇರುತ್ತದೆ. ಇನಾಮು ಪದ್ಧತಿ ಹೋಗಬೇಕೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯವೇ ಇಲ್ಲ. ಪರಿಹಾರ ಕೊಡಬೇಕೆಂಬ ವಿಚಾರದಲ್ಲಿಯೂ ಭಿನ್ನಾಭಿಪ್ರಾಯವಿಲ್ಲ. ಎಷ್ಟು ಪರಿಹಾರ ಕೊಡಬೇಕೆಂದರೆ, ಯಾರಿಗೂ ಅನ್ಯಾಯವಾಗದೇಯಿರುವ ಹಾಗಿರಬೇಕು. ಇನಾಂದಾರರಿಗೂ ಅನ್ಯಾಯವಾಗಬಾರದು ರೈತರಿಗೂ ಅನ್ಯಾಯವಾಗಬಾರದು, ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಮಾಡಿದರೆಂಬ ಅಪಾದನೆಗೆ ಸರ್ಕಾರದವರೂ ಗುರಿಯಾಗದಂತೆ ಈ ಮಸೂದೆಯನ್ನು ಸೂಕ್ಷ್ಮವಾಗಿ ಅಲ್ಪ ಸ್ವಲ್ಪ ಬದಲಾವಣೆ ಮಾಡಿ ಅಂಗೀಕರಿಸಬೇಕೆಂದು ನಾನು ಅಭಿಪ್ರಾಯಪಡುತ್ತೇನೆ.

ಶ್ರೀ ಡಿ. ಎಸ್. ಸಿದ್ಧಯ್ಯನವರು (ಮೈಸೂರು ಜಿಲ್ಲೆ).—ಸ್ವಾಮಿ, ಈ ಮಸೂದೆಯನ್ನು ತಂದಿರತಕ್ಕ ಮಂತ್ರಿಗಳನ್ನು ಅಭಿನಂದಿಸಿ ಇದನ್ನು ಸುಸ್ವಾಗತಿಸುತ್ತೇನೆ. ದೇಶಕ್ಕೆ ಸ್ವಾತಂತ್ರ್ಯ ಬಂದಿತು. ಆದರೆ ಮನುಷ್ಯನಿಗೆ ರಾಜಕೀಯ ಸ್ವಾತಂತ್ರ್ಯವಲ್ಲದೆ ಆರ್ಥಿಕ ಸ್ವಾತಂತ್ರ್ಯವೂ ಅಗತ್ಯ. ಆರ್ಥಿಕ ಸ್ವಾತಂತ್ರ್ಯವಿಲ್ಲದೇ ಹೋದರೆ ರಾಜಕೀಯ ಸ್ವಾತಂತ್ರ್ಯವನ್ನನುಭವಿಸುವುದಕ್ಕೆ ಮನುಷ್ಯನು ಅರ್ಹನಾಗುವುದಿಲ್ಲ, ಶಕ್ತನಾಗುವುದಿಲ್ಲ. ಮುಖ್ಯವಾಗಿ ಮನುಷ್ಯನಿಗೆ ಬೇಕಾದ ಅನ್ನ, ಬಟ್ಟೆ, ವಾಸಕ್ಕೆ ಮನೆ, ಈ ಅನುಕೂಲವನ್ನು ಕಲ್ಪಿಸಿಕೊಡದಿದ್ದರೆ ಪ್ರಜಾಪ್ರಭುತ್ವದಲ್ಲಿ ಮನುಷ್ಯನು ಬದುಕುವುದು ಕಷ್ಟವೇ ಸರಿ. ಅನೇಕ ಸಾವಿರಾರು ಜನರಿಗೆ ಅನುಕೂಲವಾಗತಕ್ಕ ಇಂತಹ ಮಸೂದೆಯನ್ನು ಯಾರೂ ಕೂಡ ಸ್ವಾಗತಿಸದೆ ಇರುವುದಿಲ್ಲ. ಈ ಸನ್ನಿವೇಶದಲ್ಲಿ ಸರ್ಕಾರದವರು ಇದನ್ನು ತಂದಿದ್ದಾರೆ. ಇದು ಸಭೆಯ ಒಪ್ಪಿಗೆಯನ್ನು ಪಡೆದು ಕಾನೂನಾಗುತ್ತದೆ. ಆದರೆ ಇಂತಹ ಸಂದರ್ಭದಲ್ಲಿ ಇದರ ವಿಚಾರದಲ್ಲಿ ಮಾಡಿದ ಕೆಲವು ಭಾಷಣಗಳನ್ನು ಕೇಳಿದರೆ ಯಾವ ಸದುದ್ದೇಶದಿಂದ ಈ ಮಸೂದೆಯನ್ನು ಸರ್ಕಾರದವರು ತಂದಿದ್ದಾರೋ ಅದಕ್ಕೆ ಧಕ್ಕೆ ಬರತಕ್ಕ ವಾತಾವರಣ ಕಲ್ಪನೆಯಾಗಬಹುದೆಂದು ನನ್ನ ಮನಸ್ಸಿಗೆ ತೋರುತ್ತದೆ. ಅದರಿಂದ ನಾನು ಒಂದೆರಡು ಮಾತುಗಳನ್ನಾಡಬೇಕಾಗಿದೆ.

ಇನಾಂದಾರರೂ ಜೋಡಿದಾರರೂ ಪರದೇಶದಿಂದ ಬಂದವರೇನೂ ಅಲ್ಲ, ನಮ್ಮ ದೇಶದಲ್ಲಿಯೇ ಹುಟ್ಟಿ ಬೆಳೆದು ನಮ್ಮಂತೆಯೇ ಕಷ್ಟ ಸುಖಗಳನ್ನು ಅನುಭವಿಸಿಕೊಂಡು ಬಂದಿರುವವರು. ಯಾವುದೋ ಕಾಲದಲ್ಲಿ ಅವರು ಮಾಡಿದ ಸೇವೆಗಾಗಿ ಬಹುಮಾನವಾಗಿ ಅವರಿಗೆ ಜೋಡಿ ಇನಾಮುಗಳನ್ನು ಕೊಟ್ಟಿರಬಹುದು. ಅದನ್ನು ಮುಂದಿಟ್ಟುಕೊಂಡು ಈಗ ಟೀಕೆ ಮಾಡುವುದು ಸರಿಯಲ್ಲ. ದೇಶದಲ್ಲಿ ಆಗಿದ್ದ ಪರಿಸ್ಥಿತಿಯನ್ನು ನಾವು ಯೋಚನೆಮಾಡಿ ನೋಡಬೇಕು. ಆಗ ದೇಶದ ಸ್ವಾತಂತ್ರ್ಯ ಹರಣವಾಗುತ್ತಿತ್ತು, ಪರಕಾಯರಿಂದ ಧಾಳಿಗಳು ನಡೆಯುತ್ತಿದ್ದವು, ಇನ್ನೂ ಅನೇಕ ರೀತಿಯ ಸನ್ನಿವೇಶಗಳಿದ್ದವು. ಹಾಗಿರುವಾಗ ಆ ರೀತಿ ಅವರು ವರ್ತಿಸಿದ ರೀತಿ ಆಶ್ಚರ್ಯವಾಗಿ ಕಾಣುವುದಿಲ್ಲ. ನಾವು ಇದನ್ನು ಯಾವಾಗಲೂ ಮನಸ್ಸಿನಲ್ಲಿಟ್ಟುಕೊಂಡಿರಬೇಕು. ಮತ್ತು ಈ ಇನಾಂದಾರರನ್ನು ಶತ್ರುಗಳೆಂದು ಭಾವಿಸದೆ ಅವರು ಸೇವೆ ಮಾಡಿದುದಕ್ಕಾಗಿ ಒಂದು ಬಳುವಳಿಯಾಗಿ ಈ ಇನಾಂ ಗ್ರಾಮಗಳನ್ನೂ ಜೋಡಿ ಗ್ರಾಮಗಳನ್ನೂ ಪಡೆದವರೆಂದು ಭಾವಿಸಬೇಕು. ಇದನ್ನು ಗಮನದಲ್ಲಿಟ್ಟುಕೊಂಡು ವಾತನಾಡುವುದಾದರೆ, ಪ್ರಜಾ ಸರ್ಕಾರದಲ್ಲಿಯೂ ಇಂತಹ patronage ಗೆ ಕಡಿವೆಯಿಲ್ಲ. ಯಾರೇ ಸರ್ಕಾರವನ್ನು ನಡೆಸುತ್ತಿದ್ದರೂ ಒಂದಲ್ಲ ಒಂದು ರೀತಿಯಲ್ಲಿ ಲಭಿಸತಕ್ಕ ವಸ್ತು ಈ patronage ಎಂಬುದು. ಇದು ಎಲ್ಲ ಕಡೆಯೂ ಇದ್ದೇ ಇದೆ. ಆದುದರಿಂದ ಈ ಇನಾಂದಾರರನ್ನು ದಯದಾಕ್ಷಿಣ್ಯಗಳಿಂದ ನೋಡುವುದು ನಮ್ಮ ಕರ್ತವ್ಯ. ಸರ್ಕಾರದವರು ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಅವರಿಗೆ ತಕ್ಕ ಪರಿಹಾರ ಕೊಡಬೇಕು. ಅವರೂ ಕೂಡ ಇತರ ಪ್ರಜೆಗಳಂತೆ ಪ್ರಜಾಸರ್ಕಾರದಲ್ಲಿ ಹಕ್ಕುಬಾಧ್ಯತೆಗಳನ್ನನುಭವಿಸುತ್ತಾ ರಾಜ್ಯದ ಸೂತ್ರ ನಡೆಸುವುದರಲ್ಲಿ ಪ್ರಭಾವಯುತವಾದ ಪಾತ್ರವನ್ನು ವಹಿಸುವಂತೆ ಮಾಡುವುದು ನಮ್ಮ ಕರ್ತವ್ಯ.

ಈ ಮಸೂದೆಯಲ್ಲಡಗಿರುವ ಅನೇಕ ಅಂಶಗಳನ್ನು ಪರಿಶೀಲಿಸುವುದಕ್ಕಾಗಿ ಒಂದು ಸಮಿತಿ ಮಾಡಿದ್ದಾರೆ. ಇದರಲ್ಲಿರುವ ವಿವರಗಳನ್ನು ಬಹಳ ವಿವೇಚನೆಯಿಂದ ಪರಿಶೀಲಿಸಿ ಎರಡು ಪಕ್ಷದವರಿಗೂ ಯಾವ ತೊಂದರೆಯೂ ಆಗದಂತೆ ಇವರು ಮಾಡುತ್ತಾರೆಂಬ ನಂಬಿಕೆ ನನ್ನಲ್ಲಿ ದೃಢವಾಗಿದೆ.

ಈ ಮಸೂದೆ ಸಭೆಯಲ್ಲಿ ಚರ್ಚೆಗೆ ಬಂದಾಗ ಅನೇಕರು ಅನೇಕ ವಿಧವಾದ ಸಲಹೆಗಳನ್ನು ಕೊಟ್ಟರು. ಇವರಲ್ಲಿ ಕೆಲವು ಮಾನ್ಯ ಸದಸ್ಯರು ಜೋಡಿದಾರರನ್ನು ತಮ್ಮ ಮನಸ್ಸಿನಲ್ಲಿಟ್ಟುಕೊಂಡು ಅವರಿಗೆ ಉಪಕಾರ ಮಾಡುವ ರೀತಿಯಲ್ಲಿ ಮಾತನಾಡಿದ ಹಾಗೂ ಮತ್ತೆ

ಕೆಲವರು ರೈತರನ್ನು ಮಾತ್ರ ಮನಸ್ಸಿನಲ್ಲಿಟ್ಟುಕೊಂಡು ಮಾತನಾಡಿದ ಹಾಗೂ ತೋರಿತು. ಹೀಗೆ ಒಂದೇ ಕಡೆಯ ದೃಷ್ಟಿಯನ್ನಿಟ್ಟುಕೊಂಡರೆ ಅವರಿಗೆ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಾಗುತ್ತದೆಂದು ನನಗೆ ಕಾಣಿಸುತ್ತದೆ. ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚೆ ರೈತರು ಈ ಜಹಗೀರುದಾರರು, ಜೋಡಿದಾರರು ಇನಾಂದಾರರ ಕೈಕೆಳಗೆ ನೂರಾರು ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದಿದ್ದಾರೆ. ಆದರೆ ಈಗ ಸರ್ಕಾರದವರು ತಕ್ಷಣ ಈ ಕಾನೂನನ್ನು ಜಾರಿಗೆ ತಂದರೆ, ಕೊಟ್ಯಾಂತರ ರೂಪಾಯಿಕೊಟ್ಟು ಈ ಇನಾಮಗಳನ್ನು ಕೊಂಡುಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ಇದನ್ನು ಸಂಸ್ಥಾನಾದ್ಯಂತ ಒಂದೇ ಸಾರಿ ಜಾರಿಗೆ ತರುವುದು ಉತ್ತಮ ಒಂದೊಂದು ಜಿಲ್ಲೆಯಾಗಿ ತರುವುದು ಬೇಡವೆಂದು ಹೇಳುವುದಾದರೆ ಸರ್ಕಾರದವರು ಕೋಟ್ಯಾಂತರ ರೂಪಾಯಿ ಸಾಲ ಮಾಡಬೇಕು, ಇಲ್ಲದಿದ್ದರೆ ಈ ಸುಧಾರಣೆಯನ್ನೇ ನಿಲ್ಲಿಸಬೇಕು ಆದರೆ ಈಗಿನ ಪರಿಸ್ಥಿತಿಯಲ್ಲಿ ಇದು ಸರಿಯಿಲ್ಲ. ದೇಶಾದ್ಯಂತ ಒಂದೇ ಸಾರಿ ಜಾರಿಗೆ ತರುತ್ತೇವೆಂದರೆ ಇದು ಎಷ್ಟು ಮಟ್ಟಿಗೆ ಸಾಧ್ಯವೆಂಬುದನ್ನು ವಿಚಾರಮಾಡಬೇಕು.

ಇನ್ನು ಈ ಇನಾಂಗ್ರಾಮಗಳು ಎಷ್ಟು ಹೀನ ಸ್ಥಿತಿಯಲ್ಲಿವೆಯೆಂಬುದನ್ನು ಕೆಲವರು blackest colour ನಲ್ಲಿ ಚಿತ್ರಿಸಿದ್ದಾರೆಂದು ನನ್ನ ಭಾವನೆ. ಅನೇಕ ಇನಾಂಗ್ರಾಮಗಳು ಅಷ್ಟು ದುಸ್ಥಿತಿಯಲ್ಲಿಲ್ಲ, ಒಂದು ವೇಳೆ ಕೆಲವು ಗ್ರಾಮಗಳು ದುಸ್ಥಿತಿಯಲ್ಲಿದ್ದರೆ, ಅಂತಹ ಸ್ಥಿತಿಯಲ್ಲಿರುವ ಸರ್ಕಾರಿ ಗ್ರಾಮಗಳೂ ಇವೆ. ಸ್ವಾಮಿ ನೂರಾರು ವರ್ಷಗಳಿಂದ ನಮ್ಮ ದೇಶ ಪರಕೀಯರ ಕೈಕೆಳಗಿತ್ತು. ಇದರಿಂದ ಯಾವ ಯಾವ ಸುಧಾರಣೆಗಳನ್ನು ಮಾಡಬೇಕಾಗಿತ್ತೋ ಅದನ್ನು ಮಾಡದೆ ವಿದ್ಯಾಭ್ಯಾಸದಲ್ಲಿಯೂ, ಆರ್ಥಿಕ ಸ್ಥಿತಿಯಲ್ಲಿಯೂ ಹಿಂದೆ ಬಿದ್ದು ನಾಗರಿಕತೆ ಎಷ್ಟಿರಬೇಕೋ ಅಷ್ಟಿಲ್ಲದೆ ನಮ್ಮ ದೇಶವೇ ಹಿಂದುಳಿಯಿತು. ಮೈಸೂರು ದೇಶದಲ್ಲಿ ಹೆಚ್ಚು ಕಡಿಮೆ ಜೋಡಿ ಮತ್ತು ಇನಾಂ ಗ್ರಾಮಗಳೂ ಸರ್ಕಾರಿ ಗ್ರಾಮಗಳೂ ಯಾವ ಮಟ್ಟದಲ್ಲಿವೆಯೆಂಬುದನ್ನು ನಿರ್ಧರವಾಗಿ ಹೇಳುವುದಕ್ಕಾಗುವುದಿಲ್ಲ. ಆದರೆ ಅನೇಕ ಗ್ರಾಮಗಳಲ್ಲಿ, ಒಳ್ಳೆಯ ಸಂಪ್ರದಾಯಿಕವನ್ನಿಟ್ಟುಕೊಂಡಿರುವ ಜೋಡಿದಾರರಿರುವ ಗ್ರಾಮಗಳಲ್ಲಿ ಅನೇಕ ಅನುಕೂಲಗಳನ್ನು ಕಲ್ಪಿಸಿದ್ದಾರೆ. ಉದಾಹರಣೆಗೆ ಯಳಂದೂರು ಮತ್ತು ನಮ್ಮತಾಲ್ಲೂಕಿನ ಸುತ್ತಮುತ್ತಲಿರುವ ಕೆಲವು ಇನಾಂ ಗ್ರಾಮಗಳಿವೆ, ಕೋಲಾರ ಜಿಲ್ಲೆಯಲ್ಲಿ ಈ ಪರಿಸ್ಥಿತಿ ಇಲ್ಲವೆಂದು ಕಾಣುತ್ತದೆ. ಕೋಲಾರ ಜಿಲ್ಲೆಯ ಮಾನ್ಯ ಸದಸ್ಯರು ಒಂದು ವಿಶೇಷ ನನ್ನಿವೇಶವನ್ನು ಸಭೆಯ ಮುಂದಿಟ್ಟರು. ಬಹುಶಃ ಆ ಜಿಲ್ಲೆಯಲ್ಲಿ ಆ ಪರಿಸ್ಥಿತಿಯಿರಬಹುದು. ಇದಕ್ಕೆ ಕಾರಣ, ಶ್ರೀ ಲಂಗಾರೆಡ್ಡಿಯವರು ಹೇಳಿದ ಹಾಗೆ, ಜೋಡಿದಾರರ ವಿಚಿತ್ರವರ್ತನೆಯಾಗಿರಬಹುದು. ಆದರೆ ಎಲ್ಲಾ ಜೋಡಿಗ್ರಾಮಗಳಲ್ಲಿಯೂ ಹೀಗೆಯೇ ಇದೆ ಎಂದು ಭಾವಿಸುವ ಹಾಗಿಲ್ಲ. ಅಂತೂ ಆ ರೀತಿ ಇದ್ದರೆ ಕೇವಲ ಎರಡು ಮೂರು ಗ್ರಾಮಗಳಲ್ಲರಬಹುದು. ಮೈಸೂರು ಸಂಸ್ಥಾನದಲ್ಲಿ ಒಂದು ರೀತಿಯ ಒಳ್ಳೆಯ ವಾತಾವರಣವಲ್ಲದ್ದೇವೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು.—ನಮ್ಮ ಜಿಲ್ಲೆಯಲ್ಲಿ ಅನೇಕ ಗ್ರಾಮಗಳು ಆ ಸ್ಥಿತಿಯಲ್ಲಿವೆ.

ಶ್ರೀ ಡಿ. ಎಂ. ಸಿದ್ದಯ್ಯನವರು.—ಏನೋ ಇರಬಹುದು.

ಇನ್ನು ಕೆಲವರು ಬೀಹಾರ್, ಕಾಶ್ಮೀರ ಮುಂತಾದ ದೇಶಗಳನ್ನು ಉದಾಹರಣೆಗೆ ತೆಗೆದುಕೊಂಡು ಕ್ರಾಂತಿಕಾರಕವಾಗಿ ಮಾತನಾಡಿದರು. ಕ್ರಾಂತಿ ಎಂಬ ಪದವನ್ನು ಉಪಯೋಗಿಸುವಷ್ಟು ಸುಲಭವಾಗಿ ಅದಕ್ಕೆ ತರುವುದಕ್ಕಾಗುವುದಿಲ್ಲ.

ಆದರೆ ಅದರಲ್ಲೂ 'ಕ್ರಾಂತಿಕಾರಕ' ಎಂಬ ಶಬ್ದವನ್ನು ಯಾರು, ಎಲ್ಲಿ ಬೇಕಾದರೆ ಅಲ್ಲಿ ಉಪಯೋಗಿಸಲು ಅಷ್ಟು ಸುಲಭವಾದ ಪದವಲ್ಲ ಇದು. ಕಾಶ್ಮೀರ ದೇಶದಲ್ಲಿ ಉಂಟಾಗಿದ್ದಂಥ ಒಂದು ಅನ್ಯವ್ಯವಸ್ಥೆಯಲ್ಲಿ ಹಿಂದೂಸ್ಥಾನಕ್ಕೂ ಪಾಕೀಸ್ಥಾನಕ್ಕೂ ಯುದ್ಧ ಕಲ್ಪಿಸಿ, ಅಗ್ನಿಪರ್ವತದೋಪಾದಿಯಲ್ಲಿದ್ದಂಥ ಆ ದೇಶದ ಜನರನ್ನು ಒಂದು ಸಮಾಧಾನಸ್ಥಿತಿಗೆ ತಂದು, ಅಲ್ಲಿರುವ ತಕ್ಕ ಜನಸಾಮಾನ್ಯರನ್ನು ಹೊಂದಿಸಿಕೊಂಡು, ಅಂಥಾ ಭೀಕರಪರಿಸ್ಥಿತಿಯನ್ನು ಹದಕ್ಕೆ ತಂದಂಥಾ ಜನಾಬ್ ಷೇಕ್ ಅಬ್ದುಲ್ಲಾರವರೇ ಇಂಥಾ ಒಂದು ಪದವನ್ನು ಉಪಯೋಗಿಸಲು ಇಷ್ಟಪಡಲಿಲ್ಲ. ನಮ್ಮಲ್ಲಾದರೋ ಈಗ ಆ ರೀತಿಯೇನು ಶಾಂತಿ ಕಲಕಿಹೋಗಿಲ್ಲ ಮತ್ತು ಕಲಕಬೇಕೆಂಬ ಇರಾದೆ ಸಹ ಯಾರಿಗೂ ಇಲ್ಲ. ಹಾಗಿರುವಾಗ ನಮ್ಮನೆ ಇಂಥಾ 'ಕ್ರಾಂತಿಕಾರಕ' ಎಂಬ ಪದಗಳನ್ನುಪಯೋಗಿಸಿ ಜೋಡಿದಾರರ ಯಾ ಜಹಗೀರುದಾರರ ಮನಸ್ಸನ್ನು ಕಲಕತಕ್ಕ ಅವಶ್ಯಕವಾಗಲೀ ಅಥವಾ ಅಗತ್ಯವಾಗಲೀ ಇದರಲ್ಲಿರುವುದಿಲ್ಲ.

ಮೈಸೂರು ದೇಶದಲ್ಲಿ 500 ಎಕರೆಗಳನ್ನಿಟ್ಟುಕೊಂಡಿರುವಂಥ ಜನರುಗಳೇ ಬಹಳ ವಿರಳ. ಸುಮಾರು ಹದಿನಾರು-ಇಪ್ಪತ್ತು ಮಂದಿ ಇರಬಹುದು. ಸಾಮಾನ್ಯವಾಗಿ 20 ಎಕರೆಗಳ ಮೊದಲುಗೊಂಡು 50 ಎಕರೆಗಳ ವರಿಗೆ ಜಪ್ತಿನುಗಳನ್ನಿಟ್ಟುಕೊಂಡಿರುವವರು ಹೆಚ್ಚಾಗಿದ್ದಾರೆ. ಹೀಗೆ 50 60 ಎಕರೆ ಜಪ್ತಿನನ್ನಿಟ್ಟುಕೊಂಡಿರತಕ್ಕವರ ಸಂಖ್ಯೆ 16 ಸಾವಿರವಿದ್ದರೆ ಹೆಚ್ಚಾಯಿತು. ಇಷ್ಟು ಬರಬಹುದೆಂದು ನನಗೆ ತಿಳಿದುಬಂದಿದೆ. ಆದರೆ ನಮ್ಮ ದೇಶದ ವಾತಾವರಣವೆಲ್ಲಾ ಕೇವಲ 10-15 ಎಕರೆಗಳನ್ನಿಟ್ಟುಕೊಂಡಿರುವವರೇ ವಿಶೇಷವಾಗಿರತಕ್ಕವರು. ಯಾರೋ ಹಿಂದಿನ ಕಾಲದಲ್ಲಿ ಯಾವುದೋ ಒಂದು ಉದ್ದೇಶಕ್ಕಾಗಿ ಅಥವಾ ಸಮಾಜಕ್ಕೆ ಸಲ್ಲಿಸಿದ ಸೇವೆಗಾಗಿ ಕೊಡಲ್ಪಟ್ಟಂಥವುಗಳಾಗಿವೆ. ಈ ಅಂಶವನ್ನೂ ನಾವು ಮರೆಯಬಾರದು. ಹೀಗೆ ನಾವು ಒಂದು ಹೊಸ ಸುಧಾರಣೆಯನ್ನು ಜಾರಿಗೆ ತರುವಾಗ್ಯೆ ಹಿಂದೆ ಮಾಡಿರತಕ್ಕ ಸುಧಾರಣೆಗಳನ್ನು ಮರೆತುಬಿಡದೆ ದೇಶದ ಹಿತದೃಷ್ಟಿಯಲ್ಲಿ ಎಲ್ಲರೂ ಒಂದೇ, ಅವರೂ ಕೂಡ ದೇಶದ ಹಿತ ಮತ್ತು ಸೇವೆಯನ್ನು ಮಾಡುವುದರಲ್ಲಿ ದಕ್ಷರು ಮತ್ತು ಯೋಗ್ಯರು ಎಂಬ ಅಂಶವನ್ನು ಸೆಲೆಕ್ಟ್ ಸಮಿತಿಯವರು ತಮ್ಮ ಮನಸ್ಸಿನಲ್ಲಿಟ್ಟುಕೊಳ್ಳಬೇಕೆಂದು ಸೂಚಿಸುತ್ತೇನೆ.

ಇನ್ನು ಈ ಪರಿಹಾರದ್ರವ್ಯವನ್ನು ಕೊಡತಕ್ಕ ವಿಚಾರದಲ್ಲಿ ಜೋಡಿದಾರರಿಗೂ, ಜಹಗೀರುದಾರರಿಗೂ ಮತ್ತು ಅಲ್ಲಿರತಕ್ಕ ರೈತರಿಗೂ ಯಾರೊಬ್ಬರಿಗೂ ವಿರಸಕ್ಕೆ ಕಾರಣವಾಗದಂತೆ ಒಂದು ಮಧುರ ಬಾಂಧವ್ಯದಿಂದ ಪರಿಹಾರಮಾಡಿಕೊಳ್ಳತಕ್ಕ ರೀತಿಯಲ್ಲಿ ನೂಕ್ತ ಕಾರ್ಯಕ್ರಮವನ್ನು ಸೆಲೆಕ್ಟ್ ಸಮಿತಿಯವರು ಕೈಗೊಳ್ಳಬೇಕೆಂದು ಅವರನ್ನು ನಾನು ಈ ಸಭೆಯಮೂಲಕ ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಇನ್ನು ಈ ಸಭೆಯಲ್ಲಿ ಈಗಾಗಲೇ ಮಾತನಾಡಿದ ಶ್ರೀವರ್ಮಾ ಕೆ. ಶಿಂಗಾರಿಗೌಡರು ತಿಳಿಸಿರುವಂಥ ಈ ರಿಲಿಜಿಯಸ್ ಎಂಡೋಮೆಂಟ್‌ಗಳ ವಿಚಾರದಲ್ಲಿ ನನ್ನ ಅಭಿಪ್ರಾಯವೇನೆಂದರೆ–ದೇವರ ಕೊಡಿಗೆಗಳನ್ನು ಬಿಡಲಾಗಿತ್ತು. ಹಾಗೆ ಆರ್ಜೆಯಿಂದಲೂ ಬಿಡಲಾಗಿದ್ದ ಅಲ್ಪ ಸ್ವಲ್ಪ ಜಪ್ತಿನುಗಳ ಉತ್ಪತ್ತಿಯನ್ನು ಪೂಜಾರಿಗಳು ಅಥವಾ ಆಯಾಯ ದೇವಸ್ಥಾನದ ಅರ್ಚಕರು, ತೆಗೆದುಕೊಂಡು ಇಲ್ಲಿನವರೆಗೂ

(ಶ್ರೀ ಡಿ, ಎಂ. ಸಿದ್ದಯ್ಯನವರು.)

ಪೂಜೆ, ಉತ್ಸವ ಇತ್ಯಾದಿಗಳನ್ನು ನಡೆಸಿಕೊಂಡುಬರುತ್ತಿದ್ದಾರೆ. ಇದು ನೂರಾರು ವರ್ಷಗಳಿಂದಲೂ ನಡೆದುಕೊಂಡು ಬರುವ ಪದ್ಧತಿಯಾಗಿದೆ. ಆದ್ದರಿದ ಈ ಬಾಬನ್ನು ಸೆಲೆಕ್ಟ್ ಸಮಿತಿಯವರು ಕೈಬಿಟ್ಟುಬಿಡುವುದು ಸೂಕ್ತವಾದ್ದೆಂದು ನಾನು ಭಾವಿಸಿದ್ದೇನೆ. ಇದೇ ಅಭಿಪ್ರಾಯವನ್ನೇ ಶ್ರೀಮಾರ್ ಬೋರಣ್ಣಗೌಡರೂ ಸಹ ತಿಳಿಸಿದ್ದಾರೆ. ಇದಿಷ್ಟನ್ನು ಹಾಗೆ ಬಿಟ್ಟುಬಿಡುವುದರಿಂದ ನಮಗೇನೂ ತೊಂದರೆಯಾಗುವುದಿಲ್ಲ. ಇನ್ನು ಕೆಲವು ಸಣ್ಣ ಸಣ್ಣ ಜೋಡೀ ಗ್ರಾಮಗಳಲ್ಲಿ ಈಗಾಗಲೇ ಕೆಲವು ಮಾನ್ಯಸದಸ್ಯರು ಸೂಚಿಸಿರುವಂತೆ ವಿಧವೆಯವರು, ಅಥವಾ ಮೆಜಾರಿಟಿಗೆ ಬಾರದಂಥ ವರಿಗೆ ಸೇರಿದವು ಏಜಂಟರುಗಳ ವಶದಲ್ಲಿ ಇರಬಹುದು. ಇಂಥವರುಗಳ ಬಗ್ಗೆ ಸಹ ಒಂದು ನರ್ವಸಮ್ಮತವಾದ ತೀರ್ಪನ್ನು ಈ ಮಸೂದೆಯಲ್ಲಿ ಯಾವ ರೀತಿಯಲ್ಲಿದ್ದರೆ ಅನುಕೂಲವೋ ಆ ರೀತಿ ಮಾಡತಕ್ಕದ್ದು ಅವಶ್ಯವಾದುದೆಂಬ ಅಭಿಪ್ರಾಯವನ್ನೂ ಅವರು ಮನಸ್ಸಿನಲ್ಲಿಟ್ಟುಕೊಂಡು ಆ ರೀತಿ ಸೂಕ್ತ ಬದಲಾವಣೆಗಳನ್ನು ಮಾಡುತ್ತಾರೆಂದು ನಾನು ನಂಬಿದ್ದೇನೆ. ಎಲ್ಲಕ್ಕಿಂತಲೂ ಮಿಗಿಲಾಗಿ ಈ ಮಸೂದೆಯನ್ನು ಮಂಡಿಸಿರತಕ್ಕಂಥ ಮಾನ್ಯ ರೆವಿನ್ಯೂ ಸಚಿವರು ಯಾವ ರೀತಿಯಲ್ಲೂ ವಿರೋಧಾಭಿಪ್ರಾಯಕ್ಕೆ ಅವಕಾಶ ಬೀಯದಂತೆ ಜಾಣ್ಮೆಯಿಂದ ಕೆಲಸವನ್ನು ಮಾಡುವುದರಲ್ಲಿ ಅವರು ಪ್ರವೀಣರು. ಅವರು ಸೆಲೆಕ್ಟ್ ಸಮಿತಿಯವರ ಮೇಲೆ ತಮ್ಮ ಪ್ರಭಾವವನ್ನು ಬೀರಿ ದೇಶದಲ್ಲಿರತಕ್ಕ ಎಲ್ಲಾ ಜೋಡಿ ಜಹಗೀರ್ ಮತ್ತು ಇನಾಂದಾರರುಗಳ ಮತ್ತು ರೈತರ ಹಿತಸಾಧನೆಯಾಗುವ ರೀತಿಯಲ್ಲಿ ಎಲ್ಲವನ್ನೂ ನರಿಪಡಿಸುತ್ತಾರೆಂದು ನಾನು ನಂಬಿದ್ದೇನೆ.

ಆದರೆ ಈ ಮಸೂದೆಯಮೇಲೆ ಮಾತನಾಡುತ್ತಾ ಅನೇಕ ಮಾನ್ಯಸದಸ್ಯರು ಇದರಿಂದ ದೇಶದ ಆಹಾರ ಪರಿಸ್ಥಿತಿ ಸುಧಾರಿಸಲು ಬಹಳ ಅನುಕೂಲವಾಗುತ್ತದೆಂದೂ ಹೆಚ್ಚು ಆಹಾರ ಬೆಳೆಯುವುದಕ್ಕೆ ಸಹಾಯವಾಗುತ್ತದೆಂದೂ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಹೀಗೆ ಬರೀ ಜಮಾನೊಂದನ್ನೇ ಜಮಾನಿಲ್ಲದ ಮನುಷ್ಯನಿಗೆ ಒದಗಿಸುವುದರಿಂದ ಅಷ್ಟು ಅನುಕೂಲವಾಗುತ್ತದೆಂಬುದನ್ನು ನಾನು ಒಪ್ಪಲಾರೆ. ಇಂದು ನಮ್ಮ ದೇಶದ ರೈತರ ಆರ್ಥಿಕ ಪರಿಸ್ಥಿತಿ ಬಹಳ ಶೋಚನೀಯವಾಗಿದೆ. ಅವರಿಗೆ ಉಳಲಕ್ಕೆ ಎತ್ತುಗಳೇ ಇಲ್ಲ; ಭೂಮಿಯನ್ನು ಫಲವತ್ತಾಗಿ ಮಾಡಲು ಗೊಬ್ಬರ ವಗೈರೆಗಳನ್ನು ಹಾಕುವ ಶಕ್ತಿ ಸಹ ಅವರಿಗಿರುವುದಿಲ್ಲ. ಆದಕಾರಣ ಹೀಗೆ ಜೋಡೀದಾರರಿಂದ ಅಥವಾ ಇನಾಂದಾರರಿಂದ ಬರೀ ಒಂದು ಜಮಾನನ್ನು ರೈತನಿಗೆ ಕೊಡಿಸಿಕೊಟ್ಟರೆ ಅದರಿಂದೇನೂ ಅಷ್ಟು ಉಪಕಾರವಾದಂತಾಗಲಲ್ಲ. ನಿಜವಾಗಿಯೂ ಈ ಆಹಾರ ಪರಿಸ್ಥಿತಿ ಇವರೆಲ್ಲರಿಂದಲೂ ಉತ್ತಮಗೊಳ್ಳುತ್ತದೆಂದು ತಾವು ಭಾವಿಸಿದ್ದರೆ ಇವರಿಗೆ ದ್ರವ್ಯಸಹಾಯವನ್ನು ಈಗ ನೀಡುತ್ತಿರುವುದಕ್ಕಿಂತಲೂ ಹೆಚ್ಚಾಗಿ ಒಂದಲ್ಲಾ ಒಂದು ರೀತಿಯಲ್ಲಿ ಸರ್ಕಾರದವರು ನೀಡಿದರೆಅಗನಹಾಯವಾದರೂ ಆಗಬಹುದು. ಈ ಅಂಶವನ್ನೂ ಸಹ ಸೆಲೆಕ್ಟ್ ಸಮಿತಿಯವರು ಮತ್ತೂ ಮಾನ್ಯ ಮಂತ್ರಿಗಳು ಪರಿಶೀಲಿಸಿ ಸೂಕ್ತರೀತಿಯಲ್ಲಿ ಅನುಕೂಲ ಕಲ್ಪಿಸಿ ಕೊಡುತ್ತಾರೆಂದು ನಂಬಿದ್ದೇವೆ. ಇನ್ನು ಕಡೆಯದಾಗಿ ಇಂಥಾ ಮಸೂದೆಯನ್ನು ತಂದು ದೇಶದಲ್ಲಿರುವ ಜೋಡಿ, ಇನಾಂ ಮತ್ತು ಜಹಗೀರುದಾರರುಗಳಿಗೂ ಮತ್ತು ರೈತರಿಗೂ ಯಾವ ಕರ್ತವ್ಯವೂ ಇಲ್ಲದಂತೆ ಒಂದು ಸುಗಮವಾದ ತೀರ್ಮಾನಮಾಡುವುದರ ಜೊತೆಗೆ ಇಂಥಾ ಸುಧಾರಣಾ ಮಸೂದೆಗಳ ಮೂಲಕ ದೇಶದ ಜನತೆಗೆ ಇನ್ನೂ ಹೆಚ್ಚಿನ ಸಹಾಯ ಇದರಿಂದಾಗುವಂತೆ ಮಾಡಬೇಕೆಂದು ತಿಳಿಸಿ ನಾನು ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ.

The Hon'ble Sri H. SIDDAIYA.— There is no opposition to the Bill. Not a single Hon'ble Member of this House has opposed the Bill. On the other hand, a large number of Hon'ble Members of the House, as many as eighteen who have taken part in this lengthy discussion, have welcomed the measure. That shows that the Bill is important and urgent at the same time. Some members of the House have pointed out some defects that exist in this Bill. Some fresh amendments are also suggested and the desirability of referring this Bill to the Select Committee is urged by all the Hon'ble Members of this House who have taken part in the debate. That is really gratifying and I assure the House that all care will be taken to see that all these suggestions which are made on the floor of this House, will be carefully considered by the members of the Select Committee and a report will be submitted in due course.

The Hon'ble Member Sri T. Ramachar was representing that because the Bill was published in the Gazette only last week *ie.* in the Gazette dated 14th March 1951, sufficient time is not given to the public to express their opinion and therefore, the Bill may be considered in all its aspects after their suggestions are received. That is really a very valid ground though that can be overcome by the recent Government Order. That apart, in the next session of this House, this Bill will be taken up. There will therefore be sufficient and so to say, reasonable time for the public to consider and offer their opinions about the Bill. In the meanwhile, the Select Committee will sit and consider this Bill in all its aspects and any defects that are deemed to be serious will be rectified and fresh amendments will be introduced. But at the same time there is one serious point for consideration,. Two or three Hon'ble Members out of these eighteen members, urged in all

seriousness so to say that the Inam lands pertaining to temples and mutts, which are granted for the maintenance and use of the religious institutions should also be included in this very Bill. The heading of this Bill is only "The Mysore Inam Villages (Abolition of Inam Tenure) Bill, 1951." That heading along with the amendment which some of the Hon'ble Members want to introduce, is a matter of serious consideration. Personally I have no objection and the Select Committee may consider this also and go through it in detail.

It is a matter which should be admitted that no injustice should be done either to the tenants or to the Inamdars. Justice and fair-play, reasonableness and equity and all other aspects connected with this. bill will be dealt with. Some of the Hon'ble Members were suggesting that justice in all its aspects should be thought of and done to both the parties, *viz.*, tenants and Inamdars. This will be borne in mind and I have every reason to believe that the Hon'ble Members of the Select Committee will properly take this Bill into consideration and submit a report to the House in due course. One of the Hon'ble Members, Sri B. Hutche Gowda has his own apprehension as though there will be inordinate delay with a set purpose or some such thing—he was casting some aspersions—and he was saying that before the next general election there is no hope of bringing this Bill and passing it into Act.

I can only tell him that he must wait and see. Government have considered in all sincerety the desirability of introducing this Bill with the set purpose of making this into an Act and early steps will be taken to see that at least in the next session, without any failure on the part of the Government, the report will be taken up for consideration.

Sri H. C. LINGA REDDY.—What about the rate of compensation ?

The Hon'ble Sri H. SIDDAIYA.—About the rate of compensation etc., I have already said that very reasonable compensation will be offered and that it is incorporated in clauses as pointed out by some members of the House. With these few remarks.....

Janab J. MAHMOOD SHARIFF.—Is it possible to say what approximately would be the amount set apart ?

The Hon'ble Sri H. SIDDAIYA.—As it is now calculated it comes to about one crore and seventy-five lakhs. There is also a clause that it may be paid in one or more instalments. This also is a matter for consideration and as such, because the amount seems to be so big, this will again be brought before the House with the report of the Select Committee. There is no need for any apprehension. With these few remarks I hope the House will agree for the Bill being referred to the Select Committee.

Sri M. V. KRISHNAPPA.—I would like to add three more names, that is, Janab Mahomed Hanief, Sri D. H. Chandrasekharaiya and Sri H. K. Veeranna Gowda.

The Hon'ble Sri H. SIDDAIYA.—I have no objection.

Mr. SPEAKER.—The question is.

"That the Mysore Inam Villages (Abolition of Inam Tenure) Bill, 1951, be referred to a Select Committe consisting of :—

Sri T. Subramanya,
Sri M. V Krishnappa,
Sri G. Narayana Gowda,
Sri T. Ramachar,
Sri T. Hanumiah,
Sri K. Subbarao,
Sri M. Hutche Gowda,
Sri B. Chennabyre Gowda,
Sri A. G. Bandi Gowda,
Sri A. G. Ramachandra Rao,
Sri M. Govinda Reddy,
Sri Mali Mariyappa,
Sri T. C. Honnappa,
Sri H. K. Veeranna Gowda,
Sri D. H. Chandrasekharaiya,
Janab Mahomed Hanief, and the Mover.

The motion was adopted